

# ದೇಹದ ಯೋಗ

## ಅಖಿಲ ಭಾರತ ಪತ್ರಿಕೆ

## ನವೆಂಬರ್ 2015

ಬೆಲೆ : 15/–



*He who lives to serve the Truth*
*is not affected by outward circumstances.*

- The Mother

# ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

### "ದೇಹದ ಯೋಗ"


**ಅನು : ಡಾ. ಕೆ.ಎಸ್. ಆಮೂರ**

ದೇಹಕ್ಕೊಂದು ಹೊಸ ಸಾಧ್ಯತೆ 3

ಮಾನವನದಾದ ಹಾಗೂ ದೈವಿಕವಾದ ದೇಹ 9

ಭೌತಿಕ ಪರಿವರ್ತನೆಯ ಪ್ರಾರಂಭಗಳು 12

ದೇಹದಲ್ಲಿ ಸೇತುವೆಯೊಂದನ್ನು ನಿರ್ಮಾಣ ಮಾಡುವುದು 17

ಶ್ರೇಷ್ಠ ಸಂಕ್ರಮಣ 24

**ಅನು : ಶ್ರೀ ವೀರೇಂದ್ರ ಸಿಂಪಿ**

ದೈವೀ ಸಾಮರ್ಥ್ಯದ ವರ್ಗಾವಣೆ 31

**ಅನು : ಡಾ. ಕೆ.ಎಸ್. ಆಮೂರ**

ಅತಿಮಾನವನ ಅವರೋಹಣ 36

ಶ್ರೀಮಾತೆಯವರ ಹೊಸ ದೇಹ 40

**ಅನು : ಶ್ರೀ ಪುರುಷೋತ್ತಮ ಗಲಗಲಿ**

ಮೃತ್ಯುವಿನ ಮೇಲೆ ಜಯ 51


ನಿಶ್ಚಲ ನೀರವತೆಯಲ್ಲಿ ಹಾಗೂ ಏಕಾಂತದಲ್ಲಿ ಚಿಂತನ ಕೈಕೊಳ್ಳುವುದನ್ನು ಸಿದ್ಧಿಸಿಕೊಂಡವನೂ ಕೂಡ, ಆ ಸಿದ್ಧಿಯತ್ತ ದೇಹದಿಂದ ಹಿಂದೆಗೆದುಕೊಳ್ಳುವುದರ ಮೂಲಕ, ಅದನ್ನು ಅಲಕ್ಷಿಸುವುದರ ಮೂಲಕ ಬಂದಿರಬಹುದು. ಮತ್ತು ಹಾಗಾಗಿ ದೇಹ ರಚನೆಗೊಂಡ ದ್ರವ್ಯ ಮೊದಲಿನಷ್ಟೇ ಅಶುದ್ಧವಾಗಿ, ಅಪರಿಪೂರ್ಣವಾಗಿ ಉಳಿದುಕೊಂಡಿರಬೇಕಾಗುತ್ತದೆ, ಕಾರಣ ಅವನು ಅದನ್ನು ಅದಿದ್ದ ಹಾಗೆ ಬಿಟ್ಟುಕೊಟ್ಟಿರುತ್ತಾನೆ; ಅಡ್ಡದಾರಿ ಹಿಡಿಸುವ ಅನುಭಾವದ ಮೂಲಕ, ಅತಿ ಭೌತಿಕ ಭವ್ಯತೆಗಳಿಗಾಗಿ ಇರುವ ಪ್ರಲೋಭನದಿಂದಾಗಿ, (ಭಗವಂತ) ನಿನ್ನೊಡನೆ ತನ್ನ ವೈಯಕ್ತಿಕ, ವಾಸ್ತವವಾದ ಸಮಾಧಾನಕ್ಕಾಗಿ ಏಕತೆ ಪಡೆಯುವ ಬಯಕೆಯಿಂದ ಅವನು ಪೃಥ್ವಿಯ ಮೇಲಿನ ತನ್ನ ವೈಯಕ್ತಿಕ ಅಸ್ತಿತ್ವದ ಉದ್ದೇಶಕ್ಕೆ ಬೆನ್ನು ತಿರುಗಿಸಿರುತ್ತಾನೆ; ಭೌತದ್ರವ್ಯದ ಉದ್ಧಾರಕಾರಣವಾಗುವ ಹಾಗೂ ಅದನ್ನು ಪರಿಶುದ್ಧಗೊಳಿಸುವ ತನ್ನ ಮಣಿಹವನ್ನು ಹೇಡಿಯ ಹಾಗೆ ನಿರಾಕರಿಸಿರುತ್ತಾನೆ. ನಮ್ಮ ಸತ್ತೆಯ ಒಂದು ಭಾಗ ಪರಿಶುದ್ಧವಾಗಿದೆ ಎಂಬುದನ್ನು ಪರಿಪೂರ್ಣವಾಗಿ ತಿಳಿದುಕೊಳ್ಳುವುದು, ಆ ಭಾಗದೊಡನೆ ಆಪ್ತ ಸಂಬಂಧವನ್ನಿರಿಸಿಕೊಳ್ಳುವುದು, ಅದರೊಡನೆ ಗುರುತಿಸಿಕೊಳ್ಳುವುದು ಇದೆಲ್ಲ ಉಪಯುಕ್ತವಾಗಬೇಕಾದರೆ ಈ ಜ್ಞಾನವನ್ನು ನಂತರ ಪೃಥ್ವಿಯ ರೂಪ ಪರಿವರ್ತನೆಯನ್ನು ತ್ವರಿತಗೊಳಿಸಲು, ನಿನ್ನ ಘನತೆವೆತ್ತ ಕಾರ್ಯವನ್ನು ಸಿದ್ಧಿಸಿಕೊಳ್ಳಲು ಉಪಯೋಗಿಸಬೇಕಾಗುವುದು.

**(CWM, 1/20)** – ಶ್ರೀಮಾತೆ

*

## ದೇಹಕ್ಕೊಂದು ಹೊಸ ಸಾಧ್ಯತೆ

### ಹೊಸ ಪರದೆಯೊಂದನ್ನು ಹರಿದು ಹಾಕಲಾಯಿತು

ನಿನ್ನ ದೈವೀ ಅನಂತ ಪ್ರೇಮದೊಂದಿಗೆ ಗುರುತಿಸಿಕೊಳ್ಳುವ ಆ ಶಿಖರದ ಎತ್ತರದಿಂದ ನೀನು ನನ್ನ ಕಣ್ಣುಗಳನ್ನು ಈ ಸಂಕೀರ್ಣ ದೇಹದತ್ತ ಹೊರಳಿಸಿರುವಿ, ಅದು ನಿನ್ನ ಉಪಕರಣದ ರೂಪದಲ್ಲಿ ಸೇವೆ ಸಲ್ಲಿಸಬೇಕಾಗಿದೆ ಮತ್ತು ನೀನು ನನಗೆ ಹೇಳಿದ್ದು ಹೀಗಿದೆ: "ಅದು ನಾನೇ, ಅದರಲ್ಲಿ ಹೊಳೆಯುತ್ತಿರುವ ನನ್ನ ಪ್ರಕಾಶವನ್ನು ನೀನು ನೋಡುತ್ತಿಲ್ಲವೆ?" ಮತ್ತು ನಿಜವಾಗಿ ನಾನು ನಿನ್ನ ಆ ದೈವೀ ಪ್ರೇಮವನ್ನು ನೋಡಿದೆ, ಅದು ಬುದ್ಧಿಮತ್ತೆಯಲ್ಲಿ, ನಂತರ ಬಲದಲ್ಲಿ ಆವರಿಸಿಕೊಂಡಿತ್ತು. ಅದು ಈ ದೇಹವನ್ನು ಅತ್ಯಂತ ಚಿಕ್ಕ ಜೀವಕೋಶಗಳಿಂದ ರಚಿಸುತ್ತಿತ್ತು ಮತ್ತು ಅದರಲ್ಲಿ ಎಷ್ಟೊಂದು ಉಜ್ವಲವಾಗಿ ಹೊಳೆಯುತ್ತಿತ್ತೆಂದರೆ ಅದು ಲಕ್ಷಾನುಗಟ್ಟಲೆ ಇರುವ ತೇಜಃಪೂರ್ಣ ಕಿಡಿಗಳ ಜೋಡಣೆಯ ಹಾಗಿತ್ತು. ಅವೆಲ್ಲವೂ ನೀನೇ ಆಗಿರುವುದನ್ನು ಪ್ರಕಟಿಸುತ್ತಿದ್ದವು. ...

ಓ ನನ್ನ ಮಧುರ ಪ್ರಭುವೆ, ನೀನು ಹೊಸ ಪರದೆಯೊಂದು ಹರಿದು ಹೋಗುವಂತೆ ಮಾಡಿರುವಿ, ಅದು ನನ್ನ ಅಜ್ಞಾನದ ಇನ್ನೊಂದು ಪರದೆಯಾಗಿತ್ತು. ನಿನ್ನ ಸನಾತನ ಹೃದಯದಲ್ಲಿ ನನ್ನ ದಿವ್ಯಾನಂದದ ಸ್ಥಾನವನ್ನು ಬಿಟ್ಟುಕೊಡದೆ, ಅದೇ ಸಮಯದಲ್ಲಿ ನನ್ನ ದೇಹವನ್ನು ರಚಿಸಿರುವ, ಆದರೆ ಗ್ರಹಿಕೆಗೆ ಬಾರದ, ಪ್ರತಿಯೊಂದು ಅಣುವಿನ ಅನಂತ ಹೃದಯದಲ್ಲಿ ನಾನಿದ್ದೇನೆ.

**(CWM, 1/148)**

*

### ದೈಹಿಕ ಪರಿವರ್ತನೆಯ ಸಾಧ್ಯತೆ

ಭಗವಂತನ ವರ್ಣನಾತೀತ ವಿನಮ್ರತೆಯ ಅತ್ಯಂತ ಶ್ರೇಷ್ಠ ವಿಜಯಗಳಲ್ಲಿ ತೋರಿಕೆಗೆ ಅತ್ಯಂತ ಅದೈವಿಕವಾದದ್ದೆನಿಸುವ ಭೌತದ್ರವ್ಯವನ್ನು ಪರಿವರ್ತನೆಗೆ ಒಳಪಡಿಸುವುದು ಒಂದು ವಿಷಯವಾಗಿದೆ. ಅತಿಮಾನಸ ನಮ್ಯತೆಯು ಕೊನೆಗೆ ಪರಿವರ್ತನೆಗೊಳಪಟ್ಟ ಭೌತದ್ರವ್ಯದ ವಿಶಿಷ್ಟ ಗುಣಲಕ್ಷಣವಾಗಿದೆ. ಇಲ್ಲಿ ಅಸ್ತಿತ್ವದಲ್ಲಿರಲು ತರಬೇಕಾದ ಅತಿಮಾನಸ ದೇಹಕ್ಕೆ ನಾಲ್ಕು ಮುಖ್ಯ ಗುಣಲಕ್ಷಣಗಳಿವೆ: ಹಗುರಾಗಿರುವಿಕೆ, ಹೊಂದಾಣಿಕೆ ಮಾಡಿಕೊಳ್ಳುವ ಗುಣ, ನಮ್ಯತೆ ಮತ್ತು ಪ್ರಕಾಶಮಯತೆ. ಭೌತಿಕ ದೇಹ ಆದ್ಯಂತವಾಗಿ ದೈವೀಕರಣಕ್ಕೆ ಒಳಗಾದಾಗ ಅದಕ್ಕೆ



ಯಾವಾಗಲೂ ಗಾಳಿಯಲ್ಲಿ ಅಡ್ಡಾಡುತ್ತಿರುವ ಭಾವನೆ ಬರುತ್ತದೆ, ಅದರಲ್ಲಿ ಭಾರವಾಗಿರುವಿಕೆ, ತಮಸ್, ಇಲ್ಲವೆ ಅಪ್ರಜ್ಞೆ ಇರುವುದಿಲ್ಲ. ಹಾಗೆಯೇ ಅದರಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ಸಾಮರ್ಥ್ಯಕ್ಕೆ ಕೊನೆಯಿರುವುದಿಲ್ಲ: ಅದನ್ನು ಎಂತಹದೇ ಸ್ಥಿತಿಯಲ್ಲಿರಿಸಿರಲಿ, ಅಲ್ಲಿ ಅದರ ಮೇಲೆ ಮಾಡಲಾದ ಒತ್ತಾಯಪೂರ್ವಕ ಬೇಡಿಕೆಗಳಿಗೆ ಅದು ಕೂಡಲೆ ಸರಿಸಮವಾಗುತ್ತದೆ, ಏಕೆಂದರೆ ಸಾಮಾನ್ಯವಾಗಿ ಆತ್ಮದ ಮೇಲೆ ಅಡಚಣೆಯನ್ನುಂಟು ಮಾಡುವ ಭೌತದ್ರವ್ಯದ ಜಡತ್ವ ಹಾಗೂ ಕ್ಷಮತೆ ಇಲ್ಲದಿರುವಿಕೆ ಇವುಗಳನ್ನು ಪ್ರಜ್ಞೆ ಪೂರ್ತಿ ಹೊರಗೋಡಿಸುತ್ತದೆ. ಅತಿಮಾನಸ ನಮ್ಯತೆಯನ್ನು ಸೀಳಿಹೋಗಲು ಪ್ರಯತ್ನಿಸುವ ಪ್ರತಿಯೊಂದು ವಿರೋಧಿ ಶಕ್ತಿಯ ಆಕ್ರಮಣವನ್ನು ಎದುರಿಸಿ ನಿಲ್ಲಲು ಆ ನಮ್ಯತೆ ಶಕ್ತವಾಗುವಂತೆ ಮಾಡುತ್ತದೆ, ಅದು ಆಕ್ರಮಣದೆದುರು ಮಬ್ಬಾದ ಪ್ರತಿರೋಧವನ್ನು ಮುಂದಿರಿಸುವುದಿಲ್ಲ, ತದ್ವಿರುದ್ಧವಾಗಿ, ಆ ಆಕ್ರಮಣ ಶಕ್ತಿ ಸಾಗಿ ಹೋಗುವುದಕ್ಕೆ ದಾರಿ ಮಾಡಿಕೊಡಲು ಹಾಗೂ ಅದನ್ನು ನಿರ್ನಾಮ ಮಾಡಲು ಸಾಕಷ್ಟು ಮಣಿಯುತ್ತದೆ. ಹಾಗಾಗಿ ಅದು (ದೇಹ) ಯಾವುದೇ ಹಾನಿಕಾರಕ ಪರಿಣಾಮದಿಂದ ವೇದನೆಗೆ ಒಳಗಾಗುವುದಿಲ್ಲ ಮತ್ತು ಅತ್ಯಂತ ಭೀಕರ ಆಕ್ರಮಣಗಳು ಅದನ್ನು ಅಪಾಯಕ್ಕೊಳಪಡಿಸದೆ ಬಿಟ್ಟುಕೊಡುವವು. ಕೊನೆಯದಾಗಿ ಅದು ಪ್ರಕಾಶದ ದ್ರವ್ಯವಾಗುವ ತಿರುವು ಪಡೆಯುತ್ತದೆ ಮತ್ತು ಪ್ರತಿಯೊಂದು ಜೀವಕೋಶ ಅತಿಮಾನಸ ವೈಭವವನ್ನು ಹೊರಸೂಸುತ್ತದೆ. ತಮ್ಮ ಸೂಕ್ಷ್ಮ ದೃಷ್ಟಿ ತೆರೆದಿಟ್ಟುಕೊಳ್ಳುವಷ್ಟು ಅಭಿವೃದ್ಧಿ ಪಡೆದ ಜನರಷ್ಟೇ ಅಲ್ಲ, ಆದರೆ ಸಾಮಾನ್ಯ ಮನುಷ್ಯನೂ ಕೂಡ ಈ ಪ್ರಕಾಶಮಯತೆಯನ್ನು ಗ್ರಹಿಸಲು ಶಕ್ತನಾಗುತ್ತಾನೆ. ಪ್ರತಿಯೊಬ್ಬನಿಗೂ ಅದು ಸ್ಪಷ್ಟವಾಗುತ್ತದೆ, ಅದು ಪರಿವರ್ತನೆಯ ಶಾಶ್ವತ ಪ್ರಮಾಣವಾಗುತ್ತದೆ, ಅತ್ಯಂತ ಸಂಶಯವಾದಿಯಾದವನಿಗೂ ಕೂಡ ಮನವರಿಕೆ ಮಾಡಿಕೊಡುತ್ತದೆ.

ದೈಹಿಕ ಪರಿವರ್ತನೆ ಆಧ್ಯಾತ್ಮಿಕವಾದ ಪರಮೋಚ್ಚ ಮರು ಜನ್ಮವಾಗುತ್ತದೆ – ಎಲ್ಲ ಸಾಮಾನ್ಯ ಭೂತಕಾಲವನ್ನು ಕೊನೆಗೆ ಚೆಲ್ಲಿಕೊಡುವುದಾಗುತ್ತದೆ. ಏಕೆಂದರೆ ಆಧ್ಯಾತ್ಮಿಕ ಮರು ಜನ್ಮದ ಅರ್ಥ ನಮ್ಮ ಹಳೆಯ ಸಹವಾಸಗಳನ್ನು, ಪರಿಸ್ಥಿತಿಗಳನ್ನು ಸತತ ಚೆಲ್ಲಿಕೊಡುವುದಾಗಿರುತ್ತದೆ. ಪ್ರತಿಯೊಂದು ನಿಷ್ಕಲಂಕ ಕ್ಷಣದಲ್ಲಿ ಜೀವನವನ್ನು ನಾವು ಹೊಸದಾಗಿ ಪ್ರಾರಂಭಿಸುತ್ತಿರುವಂತಿರುತ್ತದೆ. ಕರ್ಮ ಎಂದು ಕರೆಯುವುದ–ರೊಂದಿಗೆ ಮುಕ್ತವಾಗುವುದಾಗಿರುತ್ತದೆ, ಈ ಕರ್ಮ ಎಂಬುದು ನಮ್ಮ ಗತಕಾಲದ ಕ್ರಿಯೆಯಗಳ ಪ್ರವಾಹ: ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಅದು ಕಾರಣ, ಪರಿಣಾಮಗಳಿರುವ ಪ್ರಕೃತಿಯ ಸಾಮಾನ್ಯ ಚಟುವಟಿಕೆಯ ಬಂಧನದಿಂದ ಮುಕ್ತಿ

ಪಡೆಯುವುದಾಗಿರುತ್ತದೆ. ಗತಕಾಲದಿಂದ ಈ ಕಡಿದುಕೊಳ್ಳುವಿಕೆಯನ್ನು ವಿಜಯೋತ್ಸಾಹದಿಂದ ಪ್ರಜ್ಞೆಯಲ್ಲಿ ಸಿದ್ಧಿಸಿಕೊಂಡಾಗ ನಮ್ಮ ರಕ್ತವನ್ನು ಹೀರುವಂತಹ ಜಿಗಣೆಗಳ ಹಾಗೆ ನಮಗೆ ಅಂಟಿಕೊಂಡಿರುವಂತಹ, ನಮ್ಮ ನೆನಪುಗಳಲ್ಲಿ ನಮ್ಮ ಕಣ್ಣಿಗೆ ಇನ್ನೂ ಕಟ್ಟಿರುವಂತಹ ಆ ಎಲ್ಲ ತಪ್ಪುಗಳು, ದೋಷಗಳು ಮತ್ತು ಮೂರ್ಖತನಗಳು ನಮ್ಮನ್ನು ತೊರೆದು ಹೋಗುವವು, ನಾವು ಸಂತೋಷದಿಂದ ಮುಕ್ತರಾಗಿರಲು ಬಿಟ್ಟುಕೊಡುವವು.

**(CWM, 3/175–76)**

*

## ಅಂಗಗಳ ಸ್ಥಾನದಲ್ಲಿ ಪ್ರಜ್ಞಾಪೂರ್ಣ ಚೈತನ್ಯದ ಕೇಂದ್ರಗಳು

ಈ ಎಲ್ಲ ಕೇವಲ ಭೌತಿಕ ವ್ಯವಸ್ಥೆಯ ಸ್ಥಾನದಲ್ಲಿ ಶಕ್ತಿಯ ಕೇಂದ್ರೀಕರಣಗಳ ವ್ಯವಸ್ಥೆಯನ್ನು ತರುವುದನ್ನು ಪರಿವರ್ತನೆ ಸೂಚಿಸುತ್ತದೆ. ಈ ಕೇಂದ್ರೀಕರಣಗಳು ಭಿನ್ನ ಮಾದರಿಯ ಕಂಪನಗಳನ್ನು ಹೊಂದಿರುತ್ತವೆ, ಪ್ರತಿಯೊಂದು ಅಂಗವನ್ನು ಚೈತನ್ಯದ ಒಂದು ಕೇಂದ್ರವಾಗುವಂತೆ ಬದಲು ಮಾಡುತ್ತವೆ, ಪ್ರಜ್ಞಾಪೂರ್ಣ ಸಂಕಲ್ಪ ಈ ಚಾಲನೆಯನ್ನುಂಟು ಮಾಡುತ್ತದೆ, ಮೇಲ್ಗಡೆಗಿರುವ ಉಚ್ಚತರ ಪ್ರಾಂತಗಳಿಂದ ಬರುವ ಒಂದು ಚಲನೆ ನಿರ್ದೇಶನ ನೀಡುತ್ತದೆ. ಇನ್ನು ಮುಂದೆ ಹೊಟ್ಟೆಯಿರುವುದಿಲ್ಲ, ಹೃದಯವಿರುವುದಿಲ್ಲ, ರಕ್ತಪರಿಚಲನೆ(circulation) ಇರುವುದಿಲ್ಲ, ಪುಪ್ಪುಸವಿರುವುದಿಲ್ಲ, ಇಂತಹದೇನೂ ಇರುವುದಿಲ್ಲ. ಇದೆಲ್ಲವೂ ಮಾಯವಾಗುತ್ತದೆ. ಆದರೆ ಆ ಸ್ಥಳಗಳಲ್ಲಿ ಅಂಗಗಳಿರುವುದನ್ನು ಸಾಂಕೇತಿಕವಾಗಿ ಪ್ರತಿನಿಧಿಸುವ ಕಂಪನಗಳ ಇಡೀ ಗುಂಪಿರುತ್ತದೆ. ಏಕೆಂದರೆ ಅಂಗಗಳು ಕೇವಲ ಚೈತನ್ಯದ ಕೇಂದ್ರಗಳ ಭೌತಿಕ ಸಂಕೇತಗಳು, ಅವುಗಳಿಗೆ ಸಾರಭೂತ ನೈಜತೆಯಿಲ್ಲ. ಕೆಲವೊಂದು ಪರಿಸ್ಥಿತಿಗಳಲ್ಲಿ ಅದಕ್ಕೆ(ಅಂಗಕ್ಕೆ) ಅವು ಒಂದು ರೂಪವನ್ನು ಇಲ್ಲವೆ ಒಂದು ಆಧಾರವನ್ನು ಕೊಡುತ್ತವೆ. ಪರಿವರ್ತನೆಗೊಳಗಾದ ದೇಹ ಆಗ ನಿಜವಾದ ಚೈತನ್ಯದ ಕೇಂದ್ರಗಳ ಮೂಲಕ ಕಾರ್ಯ ನೆರವೇರಿಸುತ್ತದೆ. ಇನ್ನು ಮುಂದೆ ಪಶುವಿನ ದೇಹದಲ್ಲಿ ಅಭಿವೃದ್ಧಿಪಡಿಸಲಾಗಿದ್ದ ಸಾಂಕೇತಿಕ ಪ್ರತಿನಿಧಿಗಳ ಮೂಲಕ ಆ ಕಾರ್ಯವಿರುವುದಿಲ್ಲ. ಆದ್ದರಿಂದ ಮೊಟ್ಟಮೊದಲು, ವಿಶ್ವವ್ಯಾಪಿ ಚೈತನ್ಯದಲ್ಲಿ ನಿಮ್ಮ ಹೃದಯ ಏನನ್ನು ಪ್ರತಿನಿಧಿಸುತ್ತದೆ, ರಕ್ತಪರಿಚಲನೆ ಏನನ್ನು ಪ್ರತಿನಿಧಿಸುತ್ತದೆ, ಹೊಟ್ಟೆ ಹಾಗೂ ಮಿದುಳು ಏನನ್ನು ಪ್ರತಿನಿಧಿಸುತ್ತವೆ ಎಂಬುದನ್ನು ನೀವು ತಿಳಿದುಕೊಂಡಿರಬೇಕು. ಪ್ರಾರಂಭದಲ್ಲಿ ಮೊದಲಿಗೆ ನೀವು ಅದೆಲ್ಲದರ ಬಗ್ಗೆ



ಪ್ರಜ್ಞೆಯುಳ್ಳವರಾಗಿರಬೇಕು, ನಂತರ ಈ ಅಂಗಗಳಿಂದ ಯಾವುದು ಸಂಕೇತ–ಕ್ಕೊಳಗಾಗಿತ್ತೋ ಅದರ ಮೂಲ ಕಂಪನಗಳು ನಿಮ್ಮ ವಶದಲ್ಲಿರಬೇಕು. ಮತ್ತು ನಿಮ್ಮ ದೇಹದಲ್ಲಿ ಈ ಎಲ್ಲ ಚೈತನ್ಯಗಳನ್ನು ನಿಧಾನಗತಿಯಲ್ಲಿ ಒಟ್ಟುಗೂಡಿಸಬೇಕು ಮತ್ತು ಪ್ರತಿಯೊಂದು ಅಂಗವನ್ನು ಪ್ರಜ್ಞಾಪೂರ್ಣ ಚೈತನ್ಯವಾಗುವಂತೆ ಬದಲು ಮಾಡಬೇಕು, ಅದು ಸಾಂಕೇತಿಕ ಚಲನೆಯ ಸ್ಥಾನದಲ್ಲಿ ನಿಜವಾದ ಚಲನೆ ಬರುವಂತೆ ಮಾಡುತ್ತದೆ... ಅದನ್ನು ಕೈಕೊಳ್ಳುವುದಕ್ಕೆ ಕೇವಲ ಮುನ್ನೂರು ವರ್ಷಗಳ ಕಾಲ ಬೇಕಾಗಬಹುದು ಎಂದರೆ ನೀವು ನಂಬುವಿರಾ? ಅದಕ್ಕೆ ಹೆಚ್ಚಿನ ಕಾಲ ಬೇಕಾಗುತ್ತದೆಂದು ನಾನು ನಂಬುತ್ತೇನೆ. ನಮಗೆ ನಿಖರವಾಗಿ ತಿಳಿದ ಹಾಗಿರುವ ಗುಣಲಕ್ಷಣಗಳಂತಿರದ ಆದರೆ ಹೆಚ್ಚು ಉನ್ನತವಾದ ಗುಣಲಕ್ಷಣಗಳಿರುವ ರೂಪವೊಂದು ಅಲ್ಲಿರುತ್ತದೆ. ಸ್ವಾಭಾವಿಕವಾಗಿ ನಮ್ಮವಾದ ರೂಪವೊಂದನ್ನು ನೋಡಬೇಕೆಂದು ಮನುಷ್ಯ ಕನಸು ಕಾಣುತ್ತಾನೆ. ನಿಮ್ಮ ಭಾವನೆಗಳೊಂದಿಗೆ ಮುಖದ ಅಭಿವ್ಯಕ್ತಿ ಬದಲಾದ ರೀತಿಯಲ್ಲಿ ದೇಹ ಬದಲಾಗುತ್ತದೆ. (ರೂಪವಲ್ಲ, ರೂಪದ ಒಳಗಿದ್ದುದು), ಆ ಬದಲಾವಣೆ ನೀವು ನಿಮ್ಮ ದೇಹದ ಮೂಲಕ ಏನನ್ನು ಅಭಿವ್ಯಕ್ತಪಡಿಸಲು ನೀವು ಬಯಸುತ್ತೀರಿ ಎನ್ನುವುದಕ್ಕೆ ಅನುಗುಣವಾಗಿರುತ್ತದೆ. ಅದು ಬಹಳ ಕೇಂದ್ರೀಕರಣಗೊಂಡದ್ದು, ಬಹಳ ಅಭಿವೃದ್ಧಿ ಹೊಂದಿದ್ದು, ಬಹಳ ಪ್ರಕಾಶಮಯವಾದದ್ದು, ಬಹಳ ಅಚಂಚಲವಾದದ್ದು, ಪರಿಪೂರ್ಣ ನಮ್ಯತೆ–ಯೊಂದಿಗಿದ್ದದ್ದು, ಪರಿಪೂರ್ಣ ಸ್ಥಿತಿಸ್ಥಾಪಕ ಗುಣವುಳ್ಳದ್ದು ಮತ್ತು ನಂತರ ಸಂಕಲ್ಪಿಸಿದಾಗ ಅತಿ ಹಗುರಾದದ್ದು ಆಗಬಹುದು. ನೆಲವನ್ನು ತುಳಿದು ನಂತರ ಗಾಳಿಯಲ್ಲಿ ಮೇಲೇರಿ ಹೋಗಿ, ದೂರ ಹಾರಾಟ ನಡೆಸುವಂತಹ ಕನಸನ್ನು ಎಂದೂ ನೀವು ಕಂಡಿಲ್ಲವೆ? ನೀವು ಅತ್ತಿತ್ತ ಚಲಿಸುತ್ತೀರಿ, ನೀವು ಭುಜದಿಂದ ಒಂದೆಡೆ ಒತ್ತಿ ಒಂದು ಬದಿಗೆ ಹೋಗುತ್ತೀರಿ, ಮತ್ತೆ ಹಾಗೆ ದೂಡಿದಾಗ ಮತ್ತೊಂದು ಬದಿಗೆ ಹೋಗುತ್ತೀರಿ ಮತ್ತು ನಿಮಗೆ ಇಷ್ಟವಾದತ್ತ ಬಹಳ ಸುಲಭವಾಗಿ ಹೋಗುತ್ತೀರಿ, ಕೊನೆಗೆ ಅದೆಲ್ಲವನ್ನೂ ಮುಕ್ತಾಯಗೊಳಿಸಿದಾಗ, ಮರಳಿ ಬಂದು ನಿಮ್ಮ ದೇಹದಲ್ಲಿ ಪ್ರವೇಶಿಸುತ್ತೀರಿ. ಸರಿ, ನೀವದನ್ನು ನಿಮ್ಮ ದೇಹದಿಂದ ಕೈಕೊಳ್ಳಲು ಶಕ್ತರಾಗಬೇಕು, ಹಾಗೆಯೇ ಉಸಿರಾಟಕ್ಕೆ ಸಂಬಂಧಿಸಿದ ಕೆಲವು ಕ್ರಿಯೆಗಳನ್ನು ಕೈಕೊಳ್ಳಲು ಶಕ್ತರಾಗಬೇಕು – ಆದರೆ ಅಲ್ಲಿ ಇನ್ನು ಮುಂದೆ ಪುಪ್ಪುಸಗಳಿರುವುದಿಲ್ಲ, ಸಾಂಕೇಂತಿಕ ಚಲನೆಯ ಹಿಂದೆ ಅಲ್ಲಿ ನಿಜವಾದ ಚಲನೆಯಿರುತ್ತದೆ. ಅದು ನಿಮಗೆ ಹಗುರಾಗಿ ಇರಲು ಕ್ಷಮತೆಯನ್ನು ಒದಗಿಸುತ್ತದೆ, ನೀವು ಇನ್ನು ಮುಂದೆ ಗುರುತ್ವಾಕರ್ಷಣದ ಪದ್ಧತಿಗೆ ಸೇರಿದವರಾಗಿರುವುದಿಲ್ಲ,

ಅದರಿಂದ ನೀವು ಪಾರಾಗಿರುತ್ತೀರಿ. ಹಾಗೆಯೇ ಇದು ಪ್ರತಿಯೊಂದು ಅಂಗಕ್ಕೆ ಆಗಿರುತ್ತದೆ.

ಕಲ್ಪನೆಗೆ ಕೊನೆಯೆಂಬುದಿಲ್ಲ: ಮನುಷ್ಯ ಬಯಸಿದಾಗೆಲ್ಲ ಪ್ರಕಾಶಮಯ–ನಾಗುವುದು, ಪಾರದರ್ಶಕನಾಗುವುದು. ಸ್ವಾಭಾವಿಕವಾಗಿ ಹೊಸ ಪದ್ಧತಿಯಲ್ಲಿ ಎಲುಬುಗಳಿರುವ ಆವಶ್ಯಕತೆ ಇರುವುದಿಲ್ಲ, ಅದು ಅಸ್ಥಿಪಂಜರ ಮತ್ತು ಒಳಾಂಗಗಳ (viscera) ನ್ನು ಹೊಂದಿರುವುದಿಲ್ಲ, ಅದು ಬೇರೆ ವಿಷಯವಾಗಿರುತ್ತದೆ. ಅದು ಸಂಕಲ್ಪಕ್ಕೆ ವಿಧೇಯವಾಗಿರುವ ಕೇಂದ್ರೀಕರಣಗೊಂಡ ಚೈತನ್ಯ. ಇದರರ್ಥ, ಇನ್ನು ಮುಂದೆ, ಅಲ್ಲಿ ಗುರುತಿಸಲಾಗುವ ರೂಪಗಳಿರುವುದಿಲ್ಲ ಎಂದಲ್ಲ. ರೂಪಗಳನ್ನು ಗುಣಲಕ್ಷಣಗಳಿಂದ ನಿರ್ಮಾಣಮಾಡಲಾಗುತ್ತದೆ, ಘನ ಕಣಗಳಿಂದಲ್ಲ. ಅದು ಒಂದು ಪ್ರಾಯೋಗಿಕ ಇಲ್ಲವೆ ವ್ಯಾವಹಾರಿಕ ರೂಪ ಎಂದು ಹೇಳಬಹುದು. ಅದು ಹೇಳಿದಂತೆ ಕೇಳುವಂತಹದು (supple). ಚಲನಶೀಲವಾದದ್ದು, ಹಗುರಾದದ್ದು, ಸ್ಥೂಲ ಭೌತಿಕ ರೂಪದ ಸ್ಥಿರತೆಗೆ ತದ್ವಿರುದ್ಧವಾದದ್ದು.

*

**ಸಂಪೂರ್ಣವಾಗಿ ಬದಲಾಗುವುದಕ್ಕೆ ಸಮಯದ ಆವಶ್ಯಕತೆ ಇದೆ**

ಹಾಗಾಗಿ ಇದೀಗ ನಾನು ವರ್ಣಿಸಿದ ಹಾಗೆ ಇದನ್ನು ಬದಲು ಮಾಡಲು ಮೂರು ನೂರು ವರ್ಷಗಳ ಕಾಲ, ನಿಜವಾಗಿ, ಅತಿ ಕಡಿಮೆಯಾದದ್ದು, ಇನ್ನೂ ಹೆಚ್ಚಿನ ಸಮಯ ಬೇಕಾಗಬಹುದು ಎಂದು ತೋರಿಬರುತ್ತಿದೆ. ಬಹುಶಃ ಬಹಳ ಏಕಾಗ್ರತೆ ವಹಿಸಿ ಕೈಕೊಳ್ಳಬೇಕಾದ ಕಾರ್ಯದ ಆವಶ್ಯಕತೆ ಇದೆ. ...

ಆದರೆ ಬಹಳಷ್ಟು ಆಕ್ಷೇಪಣೆಗಳು ಮೇಲೆದ್ದು ಬರಬಹುದು. ಪರಿಸರದಲ್ಲಿಯೂ ಕೂಡ ಏನೋ ಒಂದು ಬದಲಾಗದೆ ಹೋದರೆ, ದೇಹ ಬದಲಾಗುವುದು ಅಸಾಧ್ಯ ಎಂದು ಹೇಳಬಹುದು. ನೀವು ಅಷ್ಟೊಂದು ಬದಲಾವಣೆಗೆ ಒಳಗಾದಾಗ ಇತರ ವಸ್ತುಗಳೊಡನೆ, ಹಾಗೂ ಇತರ ಸತ್ತೆಗಳೊಡನೆ ನಿಮ್ಮ ಸಂಬಂಧ ಯಾವ ರೀತಿಯದಾಗಬಹುದು? ಕನಿಷ್ಠಪಕ್ಷ ಸಾಪೇಕ್ಷ ಪ್ರಮಾಣದಲ್ಲಿ ವಸ್ತು–ವಿಷಯಗಳ ಸಂಗ್ರಹ ಬದಲಾಗುವುದರ ಆವಶ್ಯಕತೆ ಇದೆ ಎಂದು ತೋರಿಬರುತ್ತದೆ, ಅದರಿಂದಾಗಿ ಮನುಷ್ಯ ಅಸ್ತಿತ್ವದಲ್ಲಿರಬಲ್ಲ, ಅಸ್ತಿತ್ವದಲ್ಲಿ ಇರುವುದನ್ನು ಮುಂದುವರಿಸಬಲ್ಲ. ಹಾಗಾಗಿ ಇದು ಬಹಳಷ್ಟು ಜಟಿಲತೆಯನ್ನು ಉಂಟು ಮಾಡುತ್ತದೆ, ಏಕೆಂದರೆ, ಇನ್ನು ಮುಂದೆ, ಕಾರ್ಯಕೈಕೊಳ್ಳಬೇಕಾದುದು ಒಬ್ಬ ವ್ಯಕ್ತಿಯಿಂದ ಆಗುವಂತಹದು



ಆಗಿರುವುದಿಲ್ಲ, ಸಾಮೂಹಿಕವಾಗಿ ಕೈಕೊಳ್ಳಬೇಕಾಗಿರುತ್ತದೆ. ಹಾಗಾಗಿ ಅದಿನ್ನೂ ಹೆಚ್ಚು ಕಠಿಣವಾಗಿರುತ್ತದೆ.

**(CWM, 5/55–61)**

*

**ಎರಡು ವಿಧಾನಗಳು ಹಾಗೂ ಎರಡು ಸಾಧ್ಯತೆಗಳು**

ಎರಡು ವಿಷಯಗಳಿವೆ, ಒಂದೆಡೆ ಕೇವಲ ಅತಿಮಾನಸ ಸೃಷ್ಟಿಯ ಸಾಧ್ಯತೆ ಇದೆ, ಇನ್ನೊಂದೆಡೆಗೆ ಭೌತಿಕ ದೇಹ ಪ್ರಗತಿಪರವಾಗಿ ಅತಿಮಾನಸ ದೇಹದಲ್ಲಿ ಇಲ್ಲವೆ ಅದಕ್ಕೂ ಹೆಚ್ಚಾಗಿ ಮಾನವ ದೇಹ ಅತಿಮಾನವ ದೇಹವಾಗಿ ಪರಿವರ್ತನೆ ಹೊಂದುವ ಸಾಧ್ಯತೆ ಇದೆ. ಆಗ ಅದು ಪ್ರಗತಿಪರ ಪರಿವರ್ತನೆಯಾಗುವುದು; ಅದಕ್ಕೆ ಬಹುಶಃ ಕೆಲವು ವರ್ಷಗಳ ಕಾಲ ಬೇಕಾಗಬಹುದು, ಆ ಸತ್ತೆ ಪಶು ಎಂಬ ಶಬ್ದದ ಅರ್ಥದಲ್ಲಿ ಇನ್ನು ಮುಂದೆ ಮನುಷ್ಯನಾಗಿರುವುದಿಲ್ಲ, ಆದರೆ ಎಲ್ಲ ಪಶುತ್ವದ ಆಚೆಗೆ ಪೂರ್ತಿಯಾಗಿ ರೂಪುಗೊಂಡ ಅತಿಮಾನಸ ಸತ್ತೆಯಾಗಿರುವುದಿಲ್ಲ, ಏಕೆಂದರೆ ಅದರ ಸದ್ಯದ ಮೂಲ, ಅವಶ್ಯವಾಗಿ ಪಶುವಿನದಾಗಿರುತ್ತದೆ. ಹಾಗಾಗಿ ರೂಪಪರಿವರ್ತನೆಯೊಂದು ಸಂಭವಿಸಬಹುದು. ಆ ರೂಪಪರಿವರ್ತನೆ ಸತ್ತೆಯನ್ನು ಅದರ ಈ ಮೂಲದಿಂದ ಮುಕ್ತಗೊಳಿಸಲು ಸಾಕಾಗಬಹುದು, ಆದರೆ ಅದೇನೇ ಆಗಿದ್ದರೂ ಅದು ಕೇವಲ ಮತ್ತು ಪೂರ್ತಿಯಾಗಿ ಅತಿಮಾನಸ ಸೃಷ್ಟಿಯಾಗಿರುವು–ದಿಲ್ಲ. ಮಧ್ಯವರ್ತಿಯಾಗಿರುವ ಕುಲವೊಂದು ಅಲ್ಲಿರುತ್ತದೆ ಎಂದು ಶ್ರೀ ಅರವಿಂದರು ಹೇಳಿದ್ದಾರೆ – ಒಂದು ಕುಲ ಇಲ್ಲವೆ ಕೆಲವು ವ್ಯಕ್ತಿಗಳಾಗಿರಬಹುದು, ಅದು ನಮಗೆ ತಿಳಿದಿಲ್ಲ. – ಅದು ಮಧ್ಯವರ್ತಿ ಹಂತವಾಗಿದ್ದು ಸ್ಥಿತ್ಯಂತರಕ್ಕೆ ಸೇವೆ ಸಲ್ಲಿಸಬಹುದು ಇಲ್ಲವೆ ಬೇಡಿಕೆಗಳು, ಆವಶ್ಯಕತೆಗಳು ಇವುಗಳಿಗೆ ಅನುಗುಣವಾಗಿ ಅವು ನಿರಂತರ ಉಳಿದುಕೊಳ್ಳಬಹುದು. ಸದ್ಯ ಮಾನವ ದೇಹಗಳಿರುವ ಹಾಗೆ ಪ್ರಾರಂಭಿಸಿದರೆ ಉಂಟಾಗುವ ಪರಿಣಾಮ ಇಡಿಯಾಗಿ ಅತಿಮಾನಸ ವಿಧಾನದ ಪ್ರಕಾರ ಕೈಕೊಂಡ ಹಾಗೆ ಆಗುವುದಿಲ್ಲ. ಬಹುಶಃ ಅದು ಅತಿಮಾನವ ರೀತಿಯದು ಆಗಬಹುದು ಎಂದರೆ ಪಶುತ್ವದ ಅಭಿವ್ಯಕ್ತಿಯೆಲ್ಲವೂ ಮಾಯವಾಗಬಹುದು, ಆದರೆ ಅದು ರೂಪ ತಾಳುವಿಕೆಯಲ್ಲಿ ಕೇವಲ ಅತಿಮಾನಸದ್ದಾಗಿರುವ ದೇಹದ ಪರಿಪೂರ್ಣತೆಯನ್ನು ಪಡೆಯಲಾರದು.

**(CWM, 9/131–32)** **– ಶ್ರೀಮಾತೆ**

*

**ಮಾನವನನ್ನು ಭೇಟಿ ಮಾಡಲು ಭಗವಂತ ತನ್ನ ಮೇಲೆ ಪರದೆಯನ್ನಿರಿಸಿಕೊಳ್ಳುತ್ತಾನೆ**

ನಾವು ಪ್ರಾರಂಭದಿಂದ ಭೌತಿಕವಾಗಿ ಅತಿಮನಸ್ಸಿನಲ್ಲಿ ಜೀವಿಸಿದ್ದರೆ ನಮ್ಮನ್ನು ಸಮೀಪಿಸಲು ಯಾರಿಗೂ ಸಾಧ್ಯವಾಗುತ್ತಿರಲಿಲ್ಲ, ಸಾಧನೆಯನ್ನೂ ಕೈಕೊಳ್ಳ–ಲಾಗುತ್ತಿರಲಿಲ್ಲ. ಪೃಥ್ವಿ, ಅದರ ಜನರು ಹಾಗೂ ನಮ್ಮ ಮಧ್ಯೆ ಸಂಪರ್ಕ ಉಂಟಾಗುವ ಭರವಸೆ ಇರುತ್ತಿರಲಿಲ್ಲ. ಅದಿದ್ದ ಹಾಗೆ ಶ್ರೀಮಾತೆಯವರು ಯಾವಾಗಲೂ ತಮ್ಮದೇ ಪ್ರಜ್ಞೆಯನ್ನು ಕಾಪಾಡಿಕೊಂಡು ಬರುವುದರ ಬದಲಾಗಿ ಸಾಧಕರ ನಿಮ್ನ ಪ್ರಜ್ಞೆಯ ಮಟ್ಟಕ್ಕೆ ಇಳಿದು ಬರಬೇಕಾಗಿತ್ತು, ಹಾಗಿಲ್ಲದಿದ್ದರೆ ಜನರು "ನಮ್ಮಿಂದ ಅದೆಷ್ಟು ದೂರವಿದ್ದೀರಿ, ಎಷ್ಟೊಂದು ಕಠೋರವಾಗಿರುವಿರಿ, ನೀವು ನಮ್ಮನ್ನು ಪ್ರೀತಿಸುವುದಿಲ್ಲ, ನಿಮ್ಮಿಂದ ನಾನು ಯಾವ ಸಹಾಯ ಪಡೆಯುತ್ತಿಲ್ಲ ಇತ್ಯಾದಿ" ಎಂದು ಹೇಳಲು ಪ್ರಾರಂಭಿಸುತ್ತಿದ್ದರು.

ಮಾನವನನ್ನು ಭೇಟಿ ಮಾಡಲು ಭಗವಂತ ತನ್ನ ಮೇಲೆ ಪರದೆಯನ್ನಿರಿಸಿ–ಕೊಳ್ಳಬೇಕಾಗುತ್ತದೆ.

**(CWSA, 32/93–94)** – ಶ್ರೀ ಅರವಿಂದರು

*

## ಮಾನವನದಾದ ಹಾಗೂ ದೈವಿಕವಾದ ದೇಹ

### ದೈವೀ ಕಾರ್ಯದ ಒಂದು ಸಂಕೇತ ಮತ್ತು ಒಂದು ಮೂರ್ತರೂಪ

ಜನರ ಪ್ರಗತಿಗಾಗಿ, ಇನ್ನು ಮುಂದೆ, ನನ್ನ ದೇಹ ಅವರದಿದ್ದ ಹಾಗೆ ಇರುವ ಆವಶ್ಯಕತೆ ಇಲ್ಲವಾದಾಗ, ಅದು ಅತಿಮಾನಸೀಕರಣಗೊಳ್ಳುತ್ತದೆ.

*

ದೇವ ಪ್ರಮುಖ, ಯಾವಾಗಲೂ, ದೇಹ ಧಾರಣೆ ಮಾಡಿದ್ದಾನೆ, ಅದರ ಉದ್ದೇಶ ಆ ದೇಹವನ್ನು ಪರಿವರ್ತನೆಗೆ ಒಳಪಡಿಸಿ ಪೃಥ್ವಿಯ ಮೇಲೆ ತನ್ನ ಪ್ರಕಟಣೆಗೆ ಯೋಗ್ಯ ಉಪಕರಣವನ್ನಾಗಿ ಮಾಡುವುದಿತ್ತು ಎಂಬುದು ವಾಸ್ತವ ಸಂಗತಿ. ಆದರೆ ಹಾಗೆಯೇ ಇಲ್ಲಿಯವರೆಗೆ ಅವನು ಅದನ್ನು ಕೈಕೊಳ್ಳುವುದರಲ್ಲಿ ವಿಫಲನಾಗಿದ್ದಾನೆ ಮತ್ತು ಒಂದಿಲ್ಲೊಂದು ಕಾರಣಕ್ಕಾಗಿ ಅವನು ಆ ದೇಹವನ್ನು ತ್ಯಜಿಸಬೇಕಾಯಿತು, ಪರಿವರ್ತನೆಯ ಕಾರ್ಯವನ್ನು ಮುಕ್ತಾಯಗೊಳಿಸದೆ ಬಿಟ್ಟುಕೊಡಬೇಕಾಯಿತು ಎಂಬುದೂ ಕೂಡ ಒಂದು ವಾಸ್ತವ ಸಂಗತಿ.



ಪರಿವರ್ತನೆ ಇಡಿಯಾಗಿ ಸಂಭವಿಸುವವರೆಗೆ, ಭಗವಂತ ತನ್ನನ್ನು ಪೃಥ್ವಿಯ ಮೇಲೆ ಪ್ರಕಟಿಸುವ ದೇಹವನ್ನು ಕಾಪಾಡಿಕೊಂಡು ಬರುವುದಕ್ಕಾಗಿ ವಿಧಿಸಿದ ನಿಬಂಧನೆಗಳನ್ನು ಎಂದರೆ ಸಾಮರಸ್ಯ, ಬಲ, ನಿಷ್ಕಾಪಟ್ಯ, ತಾಳ್ಮೆ, ನಿಸ್ವಾರ್ಥ, ಭೌತಿಕದಲ್ಲಿ ಸಮಚಿತ್ತತೆ ಇವೆಲ್ಲವುಗಳನ್ನು ನೆರವೇರಿಸುವ ಹಲವಾರು ವ್ಯಕ್ತಿಗಳಿಗಲ್ಲದಿದ್ದರೂ ಕನಿಷ್ಠಪಕ್ಷ ಒಬ್ಬ ವ್ಯಕ್ತಿಗಾದರೂ ಆಗಲಿ ಭಗವಂತ ಅವತಾರ ಮಾಡುವ ಈ ದೇಹ ಅತ್ಯಂತ ಮಹತ್ವದ್ದಾಗಿರಬೇಕಷ್ಟೇ ಅಲ್ಲದೆ ಪ್ರತ್ಯೇಕವಾಗಿ ಮಹತ್ವದ್ದಾದದ್ದು, ದೈವೀ ಕಾರ್ಯಕ್ಕಿಂತ ಬಹಳ ಮಹತ್ವವಾದ್ದು ಆಗಬೇಕು ಇಲ್ಲವೆ ಅದಕ್ಕೂ ಹೆಚ್ಚಾಗಿ ಈ ದೇಹ ಪೃಥ್ವಿಯ ಮೇಲಿನ ದೈವೀ ಕಾರ್ಯದ ಸಂಕೇತ ಮತ್ತು ಮೂರ್ತರೂಪ ತಾಳುವಿಕೆ ಆಗಬೇಕು.

**(CWM, 13/54–55)**

*

### ಕಾರ್ಯಕ್ಕಾಗಿ ಹಳೆಯ ದೇಹವನ್ನು ಸರಿಹೊಂದಿಸುವುದು

ಕಳೆದ ಕೆಲವು ದಿನಗಳಿಂದ ಬೆಳಿಗ್ಗೆ ಎಚ್ಚರವಾದಾಗ ನನ್ನದಲ್ಲದ ದೇಹದಲ್ಲಿ ಪ್ರವೇಶಿಸುತ್ತಿರುವಂತಹ ವಿಚಿತ್ರ ಸಂವೇದನೆ ಉಂಟಾಗುತ್ತಿದೆ. – ನನ್ನ ದೇಹ ಬಲಿಷ್ಠವಾಗಿದೆ, ಆರೋಗ್ಯದಿಂದಿದೆ, ಚೈತನ್ಯದಿಂದ ಜೀವನೋತ್ಸಾಹದಿಂದ ತುಂಬಿಕೊಂಡಿದೆ, ಸಾಮರಸ್ಯದಿಂದಿದೆ ಮತ್ತು ಇದು (ನನ್ನ ದೇಹ) ಈ ಯಾವ ಗುಣವನ್ನೂ ಹೊಂದಿಲ್ಲ. ಆದರೆ ಅದರೊಡನೆ ಸಂಪರ್ಕ ನೋವನ್ನುಂಟು ಮಾಡುತ್ತದೆ. ಅದರೊಡನೆ ನನ್ನನ್ನು ಸರಿಹೊಂದಿಸಿಕೊಳ್ಳುವುದರಲ್ಲಿ ದೊಡ್ಡ ತೊಂದರೆಯಿದೆ ಮತ್ತು ಈ ಆತಂಕದ ಮೇಲೆ ನಾನು ಜಯ ಸಾಧಿಸುವುದಕ್ಕೆ ದೀರ್ಘ ಸಮಯ ಬೇಕಾಗುತ್ತದೆ.

"ನಾನು ಒತ್ತಾಯದಿಂದ ಏನನ್ನಾದರೂ, ಯಾರಿಂದಾದರೂ, ಬೇಡಬಹು–ದಾದುದು ಏನಿದೆ?" ಎಂದು ಈ ದೇಹ ಸತತ ಚುರುಕಾದ ನಿಷ್ಕಾಪಟ್ಯದಿಂದ ಪುನರುಚ್ಚರಿಸುತ್ತದೆ. "ನನ್ನಷ್ಟಕ್ಕೆ ನಾನಿರಲು ಬಿಟ್ಟುಕೊಟ್ಟಾಗ ನಾನೇನೂ ಅಲ್ಲ, ನನಗೇನೂ ತಿಳಿಯದು, ನಾನೇನನ್ನೂ ಕೈಕೊಳ್ಳಲಾರೆ. ಸತ್ಯ ನನ್ನೊಳಗೆ ಪ್ರವೇಶಿಸದಿದ್ದರೆ, ಮತ್ತು ನಿರ್ದೇಶನ ಮಾಡದಿದ್ದರೆ ಅತಿ ಚಿಕ್ಕ ನಿರ್ಧಾರವನ್ನು ಕೂಡ ತೆಗೆದುಕೊಳ್ಳಲು ಕೈಕೊಳ್ಳಬೇಕಾದ ಅತ್ಯಂತ ಒಳ್ಳೆಯದು ಯಾವುದು ಎಂಬುದನ್ನು ತಿಳಿದುಕೊಳ್ಳಲು, ಅತ್ಯಂತ ಕ್ಷುದ್ರ ಪರಿಸ್ಥಿತಿಯಲ್ಲಿ ಜೀವಿಸಲು ನನ್ನಲ್ಲಿ ಕ್ಷಮತೆ–ಯಿರುವುದಿಲ್ಲ. ನಾನೇನಾಗಬೇಕಾಗಿದೆಯೋ ಅದಾಗುವುದಕ್ಕೆ, ಪೃಥ್ವಿಯ ಮೇಲೆ

ಯಾವುದು ಪ್ರಕಟವಾಗಬೇಕಾಗಿದೆಯೋ ಅದನ್ನು ಪ್ರಕಟಿಸುವುದಕ್ಕೆ ನಾನೆಂದಿಗಾದರೂ ಪರಿವರ್ತನೆಗೆ ಒಳಗಾಗುವ ಕ್ಷಮತೆಯನ್ನು ಪಡೆಯುವೆನೆ?" "ನೀನದನ್ನು ಕೈಕೊಳ್ಳದಿದ್ದರೆ ಪೃಥ್ವಿಯ ಮೇಲೆ ಬೇರೆ ಯಾರೂ ಅದನ್ನು ಕೈಕೊಳ್ಳಲಾರರು" ಎಂಬ ಉತ್ತರ ಪ್ರಭು, ನಿನ್ನಿಂದ ಆಳಗಳಿಂದ ವಿವಾದಾಸ್ಪದವಿಲ್ಲದ ನಿಶ್ಚಿತತೆಯಿಂದ ಯಾವಾಗಲೂ ಬರುತ್ತದೆ. ಅಲ್ಲಿ ಕೇವಲ ಒಂದು ತೀರ್ಮಾನವಿದೆ: ನನ್ನ ಪ್ರಯತ್ನವನ್ನು ಪಟ್ಟುಹಿಡಿದು ಕೈಕೊಳ್ಳುವೆ, ಅದನ್ನು ಬಿಟ್ಟುಕೊಡುವುದಿಲ್ಲ. ಮೃತ್ಯು ಇಲ್ಲವೆ ವಿಜಯ ಬರುವವರೆಗೆ ಪಟ್ಟುಹಿಡಿದು ಪ್ರಯತ್ನ ಮಾಡುವೆ.

**(CWM, 13/55–56)**

*

**ದೇಹದ ಪ್ರಾರ್ಥನೆ**

ನಾನಿನ್ನೂ "ನಾನೇ" ಎಂದು ಹೇಳಲಾರೆ, ಏಕೆಂದರೆ "ನಾನೇ" ಎಂದು ಹೇಳಿದಾಗ ಜನರು ನನ್ನ ದೇಹ ಕುರಿತು ಯೋಚಿಸುತ್ತಾರೆ ಮತ್ತು ನನ್ನ ದೇಹ, ನಿಜವಾಗಿ, ನಾನು ಆಗಿರುವುದಿಲ್ಲ, ಅದಿನ್ನೂ ಪರಿವರ್ತನೆಗೆ ಒಳಗಾಗಿಲ್ಲ, ಅದು ಆ ಜನರ ಮನಸ್ಸುಗಳಲ್ಲಿ ಗೊಂದಲವನ್ನುಂಟು ಮಾಡುತ್ತದೆ. ಅಲ್ಲದೆ ತನ್ನದೇ ಅಪರಿಪೂರ್ಣತೆಯನ್ನು ಗ್ರಹಿಸುವ ನನ್ನ ದೇಹದ ಈ ಮನೋಭಾವ ಅತ್ಯಗತ್ಯದ್ದಾಗಿತ್ತು ಎಂದು ಯಾವಾಗಲೂ ನನ್ನ ಭಾವನೆಗೆ ಬರುತ್ತಿತ್ತು, ಭೌತಿಕ ಪ್ರಜ್ಞೆಯಲ್ಲಿ ಜೀವಂತ, ಸತತ ಇರುವ ವಿನಮ್ರತೆಯನ್ನು ಕಾಪಾಡಿಕೊಂಡು ಬರುವುದಕ್ಕಾಗಿ ಇತ್ತು.

ಪರಿವರ್ತನೆ ಇಡಿಯಾಗಿ ಆದ ನಂತರ ನಾನು ಮಾತನಾಡಲು ಶಕ್ತಳಾಗುತ್ತೇನೆ, ಅದಕ್ಕೂ ಮೊದಲಲ್ಲ ....

*

ಓ ದೈವೀ ಪ್ರಕಾಶವೆ, ಅತಿಮಾನಸ ದೈವೀ ನೈಜತೆಯೆ, ಈ ಆಹಾರದೊಂದಿಗೆ ಇಡೀ ದೇಹದಲ್ಲಿ ಒಳನುಗ್ಗು, ಪ್ರತಿಯೊಂದು ಜೀವಕೋಶದಲ್ಲಿ ಪ್ರವೇಶಿಸು, ಪ್ರತಿಯೊಂದು ಅಣುವಿನಲ್ಲಿ ಸ್ಥಾಪಿತವಾಗು, ಪ್ರತಿಯೊಂದೂ ಪರಿಪೂರ್ಣವಾಗಿ ನಿಷ್ಕಾಪಟ್ಯದ್ದು, ಗ್ರಹಿಸುವಂತಹದು ಆಗಲಿ, ಪ್ರಕಟಣೆಗೆ ಅಡ್ಡಿಯನ್ನುಂಟು ಮಾಡುವುದೆಲ್ಲದರಿಂದ ಮುಕ್ತಗೊಳಿಸು, ಸಂಕ್ಷಿಪ್ತವಾಗಿ ಹೇಳುವುದಾದರೆ, ನಿನ್ನವೇ ಆಗಿರದ ನನ್ನ ದೇಹದ ಎಲ್ಲ ಭಾಗಗಳನ್ನು ನಿನ್ನತ್ತ ತೆರೆದಿರಿಸು. ...

*



ಪರಮೋಚ್ಚ ಪ್ರಭುವಿಗೆ ನನ್ನ ದೇಹ ಹೇಳುತ್ತದೆ: "ನಾನೇನಾಗಬೇಕೆಂದು ನೀನು ಬಯಸುವಿಯೋ ಅದು ನಾನಾಗುವೆ, ನಾನೇನು ತಿಳಿದುಕೊಳ್ಳಬೇಕೆಂದು ನೀನು ಬಯಸುವಿಯೋ ನಾನದನ್ನು ತಿಳಿದುಕೊಳ್ಳುತ್ತೇನೆ, ನಾನೇನು ಕೈಕೊಳ್ಳ-ಬೇಕೆಂದು ನೀನು ಬಯಸುವಿಯೋ ನಾನದನ್ನು ಕೈಕೊಳ್ಳುವೆ."

**(CWM, 13/57)** **– ಶ್ರೀಮಾತೆ**

*

## ಭೌತಿಕ ಪರಿವರ್ತನೆಯ ಪ್ರಾರಂಭಗಳು

**ಅತಿಮಾನಸ ದೇಹದತ್ತ ಒಂದು ಹೆಚ್ಚಿನ ಹೆಜ್ಜೆ**

ಅತಿಮಾನಸ ಅಸ್ತಿತ್ವವೊಂದು ನನ್ನನ್ನು ಇಡಿಯಾಗಿ ವಶಪಡಿಸಿಕೊಂಡಿತ್ತು.

ನನಗಿಂತ ಸ್ವಲ್ಪ ಎತ್ತರವಾದ ಏನೋ ಒಂದಿತ್ತು: ಅದರ ಪಾದಗಳು ನನ್ನ ಪಾದಗಳಿರುವಲ್ಲಿಂದ ಕೆಳಗೆ ಚಾಚಿಕೊಂಡಿದ್ದವು, ಅದರ ಶಿರ ನನ್ನ ಶಿರವನ್ನು ದಾಟಿ ಮೇಲ್ಗಡೆಗೆ ಹೋಗಿತ್ತು.

ಚೌಕಾಕಾರದ್ದಾಗಿರುವ ಘನರೂಪದ ಒಂದು ಪಡಿಯಚ್ಚು (block), ಚಚ್ಚೌಕಾ (square) ಕಾರದ ಆಧಾರ. – ಒಂದೇ ಒಂದು ತುಂಡು.

ಪ್ರಕಾಶ, ಅತಿಮನಸ್ಸಿನ ಬಂಗಾರ ಬಣ್ಣದಂತಹದಲ್ಲ, ಕತ್ತಲಲ್ಲಿ ಕಂಡುಬರುವ ಶಾಖರಹಿತ ಮಿನುಗಿನಂತಹದು. ರಾತ್ರಿಯ ಕಾಲದಲ್ಲಿ ಅದು ಭೌತಿಕವಾಗಿ ಕಂಡುಬರಬಹುದೆಂಬ ಭಾವನೆ ನನಗೆ ಬಂದಿತು.

ಅದು ನನ್ನ ಭೌತಿಕ ದೇಹಕ್ಕಿಂತ ಹೆಚ್ಚು ಸಾಂದ್ರ(dense)ವಾಗಿತ್ತು. ಭೌತಿಕ ದೇಹ ಬಹುಮಟ್ಟಿಗೆ ನೈಜವಾಗಿಲ್ಲ ಎಂದು ತೋರಿಬಂದಿತು. – ಪುಡಿಪುಡಿಯಾಗಿದೆಯೇನೋ ಎನ್ನುವಂತಿತ್ತು – ನಿಮ್ಮ ಬೆರಳುಗಳ ಮಧ್ಯದಲ್ಲಿ ಹರಿದು ಹೋಗುವ ಉಸುಕಿನಂತಿತ್ತು.

ನಾನು ಮಾತನಾಡುವುದು ಸಾಧ್ಯವಾಗುವುದಿಲ್ಲವೇನೋ ಎಂಬಂತಿತ್ತು. ಶಬ್ದಗಳು ಎಷ್ಟೊಂದು ತುಚ್ಛ, ಸಂಕುಚಿತವಾದವುಗಳು ಹಾಗೂ ಅಜ್ಞಾನದವು ಎಂದು ತೋರಿಬರುವಂತಿತ್ತು.

ಇದನ್ನು ಸಿದ್ಧಿಸಿಕೊಳ್ಳಲು ಹಿಂದಿನ ಕಾಲದ ಸತ್ತೆಗಳಲ್ಲಿ ಒಂದರ ನಂತರ ಒಂದರಂತೆ ಬಂದಿರುವ ತಯಾರಿಗಳನ್ನು ನಾನು ನೋಡಿದೆ (ಅದನ್ನು ಹೇಗೆ ಹೇಳಲಿ?)

... ನನಗೆ ಹಲವಾರು ಶಿರಗಳಿರುವ ಭಾವನೆ ಬಂದಿತು.

... ಫೆ. 29 ರ ಅನುಭವ ಸಾರ್ವತ್ರಿಕ ಸ್ವರೂಪದ್ದಾಗಿತ್ತು. ಆದರೆ ಇದು ನನ್ನನ್ನು ಉದ್ದೇಶಿಸಿ ಆದದ್ದು. ಹಿಂದೆಂದೂ ಆಗಿರದಂತಹ ಅನುಭವ.

... ಅತಿಮಾನಸ ದೇಹ ಹೇಗಿರಬಲ್ಲದು ಎಂಬುದನ್ನು ನಾನು ನೋಡಲು ಪ್ರಾರಂಭಿಸಿದ್ದೇನೆ.

... ಪರಮೋಚ್ಚ ಸೃಷ್ಟ್ಯಾತ್ಮಕ ಮೂಲಕಾರಣದೊಂದಿಗೆ ಭೌತಿಕ ಪ್ರಜ್ಞೆ ಏಕತೆ ಪಡೆದಾಗ ಇದೇ ಬಗೆಯ ಅನುಭವ ಹಿಂದೆ ನನಗಾಗಿತ್ತು. ಆದರೆ ಅದು ಸೂಕ್ಷ್ಮ ಅನುಭವವಾಗಿತ್ತು, ಆದರೆ ಇದು ಭೌತಿಕವಾದದ್ದು – ದೇಹದಲ್ಲಾದ ಅನುಭವ.

... ಅದು ನನಗಾದ ಅನುಭವವಾಗಿರಲಿಲ್ಲ, ಅದರತ್ತ ನಾನು ನೋಡಲಿಲ್ಲ: ಅದೇ ನಾನಾಗಿದ್ದೆ.

... ಅದು ನನ್ನಿಂದ ಹೊರಸೂಸಿತು, ಅಸಂಖ್ಯಾತ ಚಿಕ್ಕ ಕಿಡಿಗಳ ರೂಪದಲ್ಲಿ ಅದು ಅಲ್ಲಿ ಉಪಸ್ಥಿತರಿದ್ದ ಪ್ರತಿಯೊಬ್ಬರಲ್ಲಿ ಒಳನುಗ್ಗಿತು – ಹಾಗೆ ಪ್ರವೇಶಿಸುತ್ತಿರುವುದನ್ನು ನಾನು ನೋಡಿದೆ.

... ಒಂದು ಹೆಚ್ಚಿನ ಹೆಜ್ಜೆ.

**(ಅನುಯಾಯಿಯೊಂದಿಗೆ ಮಾತುಕತೆ: 12–9–1956)**

*

**ದೇಹದಲ್ಲಿದ್ದ ಅತಿಮಾನಸ ದೈವೀ ಶಕ್ತಿ**

ಮೊನ್ನೆಯ ದಿನ ಮಧ್ಯರಾತ್ರಿ ಸಮಯದಲ್ಲಿ ನನಗೆ ಎಚ್ಚರವಾಯಿತು. ನಾನು ಸಾಮಾನ್ಯವಾಗಿ ಹೊಂದಿರುವುದಕ್ಕಿಂತ ಹೆಚ್ಚು ಭವ್ಯವಾದ, ಹೆಚ್ಚು ಸಾಮರ್ಥ್ಯಪೂರ್ಣ ಸತ್ತೆ ನನ್ನ ದೇಹದಲ್ಲಿ ಇದೆಯೆಂಬ ಭಾವನೆ ನನಗೆ ಬಂದಿತು. ಅದನ್ನು ಗಣನೀಯ ಕಾಲದವರೆಗೆ ಹಿಡಿದಿಟ್ಟುಕೊಳ್ಳಲು ಸಾಧ್ಯವಾಗದು ಎಂದೆನಿಸಿತು, ಆದರೆ ಅದು ಉಕ್ಕಿ ಹರಿದು ಹೋಗುತ್ತಿತ್ತು. ಅದು ಸಾಂದ್ರವಾಗಿ ಎಷ್ಟೊಂದು ಸಾಮರ್ಥ್ಯಪೂರ್ಣ–ವಾಗಿತ್ತೆಂದರೆ, ಬಹುಮಟ್ಟಿಗೆ ಸಹಿಸಿಕೊಳ್ಳಲು ಕಷ್ಟವಾಗುತ್ತಿರುವ ಭಾವನೆ ಬರುತ್ತಿತ್ತು.

ಮಧ್ಯರಾತ್ರಿ ಸಮಯ, ನಾನು ಹಾಸಿಗೆಯ ಮೇಲೆ ಒರಗಿಕೊಂಡಿದ್ದೆ. ಅಂಗಾತ ಮಲಗಿದಾಗ ನನ್ನ ಇಡೀ ದೇಹ ಏಕೈಕ ಕಂಪನ ಪಡೆಯಿತು, ಅದು ಅತ್ಯಂತ



ತೀವ್ರಗತಿಯದು ಹಾಗೂ ಗಾಢವಾದದ್ದು ಆಯಿತು, ಆದರೆ ಅದು ಚಲಿಸುತ್ತಿರಲಿಲ್ಲ. ಇದನ್ನು ಹೇಗೆ ವಿವರಿಸಬೇಕು ಎಂಬುದು ನನಗೆ ತಿಳಿದಿಲ್ಲ. ಏಕೆಂದರೆ ಅದು ಸ್ಥಳಾವಕಾಶ (space) ದಲ್ಲಿ ಚಲಿಸುತ್ತಿರಲಿಲ್ಲ, ಆದರೆ ಒಂದು ಕಂಪನವಾಗಿತ್ತು, ಸ್ಥಳಾವಕಾಶದಲ್ಲಿ ಚಲನೆರಹಿತವಾಗಿತ್ತು. ನನ್ನ ದೇಹದ ನಿಖರವಾದ ರೂಪ ಪರಮೋಚ್ಚ ದೈವೀ ಪ್ರಜ್ಞೆಯ ಅತ್ಯಂತ ಉಜ್ವಲ ಶುಭ್ರ ಪ್ರಕಾಶದ್ದಾಗಿತ್ತು, ಅದು ಪರಮೋಚ್ಚನ ಪ್ರಜ್ಞೆ, ಅದು ದೇಹದೊಳಗಿತ್ತು ಮತ್ತು ಪ್ರತಿಯೊಂದು ಜೀವಕೋಶದಲ್ಲಿ ಕಂಪನವಿದೆಯೇನೋ ಎನ್ನುವ ಹಾಗಿತ್ತು ಮತ್ತು ಅದೆಲ್ಲ ಕಂಪನದ ಏಕೈಕ ಪಡಿಯಚ್ಚಿನ ಭಾಗವಾಗಿದ್ದಹಾಗಿತ್ತು. ಅದು ದೇಹದ ಹೊರಗೆ ಇಷ್ಟರಮಟ್ಟಿಗೆ (ಸುಮಾರು ಆರು ಸೆಂಟಿಮೀಟರಗಳಷ್ಟು ಎಂಬ ಸಂಜ್ಞೆ ಮಾಡುತ್ತಾರೆ) ವಿಸ್ತರಿಸಿಕೊಂಡಿತ್ತು. ನನ್ನ ಹಾಸಿಗೆಯಲ್ಲಿ ಸಂಪೂರ್ಣ ನಿಶ್ಚಲಳಾಗಿದ್ದೆ. ಆಗ ಚಲಿಸದೆ, ಸ್ಥಾನ ಬದಲಾಯಿಸದೆ ಅದು ಪ್ರಜ್ಞಾಪೂರ್ವಕವಾಗಿ ಮೇಲಕ್ಕೇರಲು ಪ್ರಾರಂಭಿಸಿತು, – ಚಲಿಸದೆ ಹಾಗಾಯಿತು. ನಾನು ಹೀಗೆ ಉಳಿದುಕೊಂಡೆ (ಶ್ರೀಮಾತೆಯವರು ಜೋಡಿಸಿದ ಹಾಗೂ ಚಲಿಸದೆ ಇರುವ ತಮ್ಮ ಕೈಗಳನ್ನು ಹಣೆಯ ಸಮೀಪ ಹಿಡಿದಿಟ್ಟುಕೊಂಡಿರುತ್ತಾರೆ, ಅವರ ಇಡೀ ದೇಹ ಪ್ರಾರ್ಥನೆ ಕೈಕೊಳ್ಳುತ್ತ ಮೇಲಕ್ಕೇರುತ್ತಿರುವ ಹಾಗಿತ್ತು), ಪ್ರಜ್ಞಾಪೂರ್ವಕವಾಗಿ ಹಾಗಿದ್ದೆ. ಪರಮೋಚ್ಚ ದೈವೀ ಪ್ರಜ್ಞೆಯತ್ತ ಈ ಪ್ರಜ್ಞೆ ಆರೋಹಣ ಮಾಡುತ್ತಿರುವ ಹಾಗಿತ್ತು.

... ಕಾಲುಗಂಟೆಯ ಕಾಲ ಪ್ರಜ್ಞೆ, ಚಲಿಸದೆ, ಮೇಲಕ್ಕೇರುತ್ತ ಸಾಗಿತು, ಅದು ಇನ್ನೂ ಹೆಚ್ಚು ಮೇಲೆ ಸಾಗಿ ಹೋಗುತ್ತಿತ್ತು – ಮೇಲಿನ ಪ್ರಜ್ಞೆಯೊಂದಿಗೆ ಸಂಯೋಜನೆ (junction) ಯಾಗುವವರೆಗೆ ಅದು ಹಾಗಿದ್ದಿತು.

ಅದೊಂದು ಪ್ರಜ್ಞಾಪೂರ್ಣ ಸಂಯೋಜನೆಯಾಗಿತ್ತು, ಸಂಪೂರ್ಣವಾಗಿ ಎಚ್ಚರದ ಸ್ಥಿತಿಯಲ್ಲಿ ಇದ್ದಾಗಿನದು, ಸಮಾಧಿಯಲ್ಲಲ್ಲ.

ಹೀಗೆ ಪ್ರಜ್ಞೆ ಏಕೈಕ ದೈವೀ ಪ್ರಜ್ಞೆಯಾಯಿತು, ಅದು ಪರಿಪೂರ್ಣವಾದದ್ದು ಸನಾತನವಾದದ್ದು, ಕಾಲಾತೀತ, ಸ್ಥಳಾವಕಾಶಾತೀತ, ಚಲನೆಯಿಂದ ಅತೀತ. ಪ್ರತಿಯೊಂದರ ಆಚೆಗೆ ಇರುವಂತಹದು ... ದಿವ್ಯಾನಂದ, ಅತ್ಯಾನಂದದಲ್ಲಿರು–ವಂತಹದು, ವರ್ಣನಾತೀತವಾದ ಏನೋ ಒಂದು.

ಅದು ದೇಹದ ಪ್ರಜ್ಞೆಯಾಗಿತ್ತು.

ಇದು ಅದಲ್ಲ. ಕೊನೆಯ ಬದಲಾವಣೆ ಆಗುವುದರಿಂದ ಅದಿನ್ನೂ ಬಹಳ

ದೂರದಲ್ಲಿದೆ. ಕೈಕೊಳ್ಳಬೇಕಾದುದು ಇನ್ನೂ ಬಹಳಷ್ಟಿದೆ. ಆದರೆ ಅದು ದೇಹದಲ್ಲಿ ಅತಿಮಾನಸದ ಪ್ರಜ್ಞಾಪೂರ್ಣ ಹಾಗೂ ಇಡಿಯಾದ ಸಾನ್ನಿಧ್ಯವೆಂದು ಹೇಳಬಹುದು.

**(ಅನುಯಾಯಿಯೊಂದಿಗೆ ಮಾತುಕತೆ: ಜನವರಿ 24, 1961)**

*

**ಭೌತಿಕ ಅಹಂಕಾರದ ಇಡಿಯಾದ ವಿಭಜನೆ**

ಹೆಚ್ಚು ಕಡಿಮೆ ಮೂರು ಗಂಟೆಗಳ ಕಾಲ, ಮೊಟ್ಟಮೊದಲಿಗೆ ಭೌತಿಕ ಅಹಂಕಾರ ಎಷ್ಟೊಂದು ಇಡಿಯಾಗಿ ವಿಭಜನೆಗೊಂಡಿತ್ತು. ದೈವೀ ಶಕ್ತಿ ಹಾಗೂ ಸಚ್ಚಿದಾನಂದ ಇವುಗಳ ... ಹೊರತಾಗಿ ಬೇರೇನೂ ಉಳಿದಿರಲಿಲ್ಲ, ಅದು ಹಾಗಿದ್ದುದು ಕೇವಲ ಪ್ರಜ್ಞೆಯಲ್ಲಿ ಅಷ್ಟೇ ಅಲ್ಲ, ಆದರೆ ಭೌತಿಕ ಸಂವೇದನೆಯಲ್ಲಿಯೂ ಕೂಡ ಹಾಗಿತ್ತು. ದೈವೀ ಸಚ್ಚಿದಾನಂದ ವಿಶ್ವದಾದ್ಯಂತ ಸತತ ಹರಿಯುವ ಪ್ರವಾಹದಲ್ಲಿ ವಿಸ್ತರಿಕೊಳ್ಳುತ್ತಿತ್ತು.

ಮತ್ತು ಈ ಎಲ್ಲ ಕಾಲದಲ್ಲಿ, ಹೆಚ್ಚು ಕಡಿಮೆ ಮೂರು ಗಂಟೆಗಳ ಕಾಲ, ಪ್ರಜ್ಞೆ ಸಂಪೂರ್ಣವಾಗಿ ಭಿನ್ನವಾಗಿತ್ತು, ಹಾಗಿದ್ದಾಗ್ಯೂ ಅದು ಇಲ್ಲಿತ್ತು, ಅದು ಪೃಥ್ವಿಯ ಹೊರಗಿರಲಿಲ್ಲ, ಪೃಥ್ವಿಯ ಮೇಲೆಯೇ ಇತ್ತು, ಆದರೆ ಅದು ಪೂರ್ತಿ ಭಿನ್ನವಾಗಿತ್ತು. – ದೇಹದ ಪ್ರಜ್ಞೆ ಕೂಡ ಭಿನ್ನವಾಗಿತ್ತು. ಮತ್ತು ಉಳಿದದ್ದೆಲ್ಲ ಯಾಂತ್ರಿಕವಾಗಿತ್ತು, ಅದು ಒಂದು ದೇಹವಾಗಿತ್ತು, ಅದು ಬೇರೆ ಏನಾದರೂ ಆಗಿರಬಹುದಾಗಿತ್ತು. ಎಪ್ಪತ್ತಕ್ಕಿಂತಲೂ ಹೆಚ್ಚು ವರ್ಷಗಳ ಕಾಲ ದೇಹದ ಪ್ರತಿಯೊಂದು ಜೀವಕೋಶದಲ್ಲಿ ಅದು ಪ್ರಜ್ಞೆಯುಳ್ಳದ್ದಾಗಲೆಂದು ಕ್ರಮೇಣ ನಾನು ಒಳನುಗ್ಗಿಸಿದ್ದ ಪ್ರಜ್ಞೆಯನ್ನು ಹಿಂತೆಗೆದುಕೊಂಡ ಹಾಗಿತ್ತು. ....

ಆ ಮೂರು ಗಂಟೆಗಳ ಕಾಲದಲ್ಲಿ ಸನಾತನ ದೈವೀ ಮಾತೆಯ ಮೂಲಕ ಪರಮೋಚ್ಚನು ಪ್ರಕಟವಾಗುತ್ತಿರುವುದರ ಹೊರತಾಗಿ ಬೇರೇನೂ ಇರಲಿಲ್ಲ.

ಅದು ದೈವೀ ಪ್ರಭು ಪ್ರಕಟವಾಗುತ್ತಿರುವ ಅತ್ಯದ್ಭುತವಾದ, ವೈವಿಧ್ಯವುಳ್ಳ, ಮುಂದುವರಿದುಕೊಂಡು ಹೋಗುತ್ತಿರುವ ಸರ್ವಸಾಮರ್ಥ್ಯವುಳ್ಳ ಪ್ರವಾಹ. ಅದು ವಿಶ್ವದಷ್ಟು ವಿಶಾಲವಾಗಿತ್ತು, ಮುಂದುವರಿದುಕೊಂಡು ಹೋಗುತ್ತಿರುವ ಚಲನೆಯಾಗಿತ್ತು, ಮುಂದುವರಿಯುತ್ತಿದ್ದುದು ಒಂದೇ ಕಾಲಕ್ಕೆ ಎಲ್ಲವೂ ಆಗಿರುವ, ಏಕೈಕವಾಗಿ ಇಡಿಯಾಗಿರುವ ಏನೋ ಒಂದರ ಪ್ರಕಟಣೆಯಾಗಿತ್ತು. ಅಲ್ಲಿ ವಿಭಜನೆ ಇರಲಿಲ್ಲ. ಮತ್ತು ಬಣ್ಣಗಳ, ಕಂಪನಗಳ, ಸಾಮರ್ಥ್ಯಗಳ ಎಷ್ಟೊಂದು ವೈವಿಧ್ಯವಿತ್ತು



– ಅತ್ಯದ್ಭುತವಾಗಿತ್ತು! ಅದು ಏಕೈಕವಾದದ್ದಾಗಿತ್ತು ಮತ್ತು ಪ್ರತಿಯೊಂದು ಅದರೊಳಗಿತ್ತು.

ಮೂರು ಪರಮೋಚ್ಚ ದೈವೀ ತತ್ವಗಳು ಸ್ಪಷ್ಟವಾಗಿ ಅಲ್ಲಿದ್ದವು: ಅಸ್ತಿತ್ವ, ಪ್ರಜ್ಞೆ (ಕ್ರಿಯಾಶೀಲ ಹಾಗೂ ಸಿದ್ಧಿಸಿಕೊಳ್ಳುವ ಪ್ರಜ್ಞೆ) ಮತ್ತು ಆನಂದ. ವಿಶ್ವಂಭರ ವಿಸ್ತಾರವಿದ್ದು ಅದು ಮುಂದೆ ಮುಂದೆ ಸಾಗುತ್ತಲಿತ್ತು.

ಅದು ಚಲಿಸುತ್ತದೆ, ಹಾಗೆಯೇ ಚಲಿಸುತ್ತಿರುವುದಿಲ್ಲ. ಅದನ್ನು ವಿವರಿಸುವುದು ಹೇಗೆ? ಅದು ಸತತ ಇರುವ, ನಿಂತು ಹೋಗದ ಚಲನೆ, ಆದಾಗ್ಯೂ ಸ್ಥಳಾಂತರವಿರಲಿಲ್ಲ. ನನಗೆ ಅದರ ಗ್ರಹಿಕೆಯಿತ್ತು, ಅದಕ್ಕೂ ಹೆಚ್ಚಾಗಿ ಹಿಂದೆ ಆ ಗ್ರಹಿಕೆಯಿತ್ತು. ಅದು ಎಲ್ಲ ಕಾಲಕ್ಕೆ ಏನೋ ಒಂದಿರುವುದರ, ಪುನರಾವರ್ತಿಸದೆ ಇರುವುದರ ಪ್ರಾರಂಭ ಇಲ್ಲವೆ ಕೊನೆ ಇಲ್ಲದಿರುವುದರ, ಸ್ಥಳಾಂತರಗೊಳ್ಳದಿರುವ ಆದಾಗ್ಯೂ ಯಾವಾಗಲೂ ಚಲನೆಯಲ್ಲಿರುವುದರ ಗ್ರಹಿಕೆಯಾಗಿತ್ತು.

**(ಅನುಯಾಯಿಯೊಂದಿಗೆ ಮಾತುಕತೆ: ಮೇ 24, 1960)** **– ಶ್ರೀಮಾತೆ**

*



ಉಪಸ್ಥಿತನಿದ್ದ ಪ್ರತಿಯೊಬ್ಬ ವ್ಯಕ್ತಿಯೊಂದಿಗೆ ಪ್ರಜ್ಞಾಪೂರ್ಣ ಸಂಪರ್ಕವನ್ನು ಸ್ಥಾಪಿಸಿದ ನಂತರ ನಾನು ಪರಮೋಚ್ಚ ಪ್ರಭುವಿನಲ್ಲಿ ಮುಳುಗಿ ಹೋಗುತ್ತೇನೆ ಮತ್ತು ಆಗ ನನ್ನ ದೇಹ ಕೇವಲ ಒಂದು ವಾಹಿನಿಯಾಗುತ್ತದೆ, ಅದರ ಮೂಲಕ ಅವನು ಎಲ್ಲರ ಮೇಲೆ ತನ್ನ ದೈವೀ ಪ್ರಕಾಶವನ್ನು, ದೈವೀ ಪ್ರಜ್ಞೆಯನ್ನು, ದೈವೀ ಸಂತೋಷವನ್ನು ಧಾರೆಯೆರೆಯುತ್ತಾನೆ. ಪ್ರತಿಯೊಬ್ಬ ಅದನ್ನು ತನ್ನ ಕ್ಷಮತೆಗನುಗುಣವಾಗಿ ಸ್ವೀಕರಿಸುತ್ತಾನೆ.

**(CWM, 13/82)** **– ಶ್ರೀಮಾತೆ**



**ಅತಿಮಾನಸ ದೈವೀ ಪ್ರಕಾಶದತ್ತ ಹೊರಳಿದ ಪ್ರಜ್ಞೆ**

ಅದರಲ್ಲಿ ಸತ್ಯಕ್ಕಾಗಿ ದಾಹವಿರುತ್ತದೆ ಮತ್ತು ಅದು ಕೇವಲ ಸತ್ಯದಲ್ಲಿ ತನ್ನ ಸಂತೃಪ್ತಿಯನ್ನು ಕಂಡುಕೊಳ್ಳುತ್ತದೆ.

**(ಶ್ರೀಮಾತೆಯವರು ನೀಡಿದ ಆಧ್ಯಾತ್ಮಿಕ ಮಹತ್ವ ಹಾಗೂ ವಿವರಣೆ)**

*

## ದೇಹದಲ್ಲಿ ಸೇತುವೆಯೊಂದನ್ನು ನಿರ್ಮಾಣ ಮಾಡುವುದು

**ದೈವೀ ವಿಜಯದ ಹಾಡು: ಅದನ್ನು ಕೈಕೊಳ್ಳಲಾಯಿತು**

(ಎಪ್ರಿಲ್ 12, 1962 ರಂದು ರಾತ್ರಿ ಆದ ಅನುಭವ)

ಜಗತ್ತಿನ ಯೋಗ ಎಂದು ನಾವು ಕರೆಯುವುದನ್ನು ಕುರಿತು ಪೂರ್ತಿ ಅರಿವಿನೊಂದಿಗೆ ಒಮ್ಮೆಗೆ ರಾತ್ರಿ ಸಮಯದಲ್ಲಿ ಎಚ್ಚತ್ತುಕೊಂಡೆ. ಪರಮೋಚ್ಚ ದೈವೀ ಪ್ರೇಮ ಭವ್ಯ ಲಯಬದ್ಧ ಹಿಗ್ಗುವಿಕೆ ಹಾಗೂ ಕುಗ್ಗುವಿಕೆ(pulsation)ಗಳ ಮೂಲಕ ಪ್ರಕಟವಾಗುತ್ತಿತ್ತು. ಮತ್ತು ಪ್ರತಿಯೊಂದು ಲಯಬದ್ಧ ಹಿಗ್ಗುವಿಕೆ ಹಾಗೂ ಕುಗ್ಗುವಿಕೆ ಜಗತ್ತನ್ನು ಅದರ ಪ್ರಕಟಣೆಯಲ್ಲಿ ಮುಂದೆ ತರುತ್ತಿತ್ತು. ಅದು ಸನಾತನ ದಿಗಿಲು ಹುಟ್ಟಿಸುವ ದೈವೀ ಪ್ರೇಮದ ಭಯವಿಸ್ಮಿತಗೊಳಿಸುವ ಲಯಬದ್ಧ ಹಿಗ್ಗುವಿಕೆ ಹಾಗೂ ಕುಗ್ಗುವಿಕೆಯಾಗಿತ್ತು. ದೈವೀ ಪ್ರೇಮದ ಪ್ರತಿಯೊಂದು ಲಯಬದ್ಧ ಹಿಗ್ಗುವಿಕೆ ಹಾಗೂ ಕುಗ್ಗುವಿಕೆ ಜಗತ್ತನ್ನು ಅದರ ಪ್ರಕಟಣೆಯಲ್ಲಿ ಮುಂದೆ ಸಾಗುವಂತೆ ಕೊಂಡೊಯ್ಯುತ್ತಿತ್ತು.

ಮತ್ತು ಅಲ್ಲಿ ಕೈಕೊಳ್ಳಬೇಕಾದುದನ್ನು ಕೈಕೊಳ್ಳಲಾಗಿದೆ ಹಾಗೂ ಅತಿಮಾನಸ ಪ್ರಕಟಣೆಯನ್ನು ಸಿದ್ಧಿಸಿಕೊಳ್ಳಲಾಗಿದೆ ಎಂಬ ನಿಶ್ಚಿತತೆ ಇತ್ತು.

ಪ್ರತಿಯೊಂದೂ ಅವೈಯಕ್ತಿಕವಾಗಿತ್ತು, ಯಾವುದೂ ವೈಯಕ್ತಿಕವಾಗಿರಲಿಲ್ಲ.



ಇದು ಮುಂದೆ ಸಾಗಿ ಹೋಗುತ್ತಲೇ ಇತ್ತು. ಕೈಕೊಳ್ಳಬೇಕಾದುದನ್ನು ಕೈಕೊಳ್ಳಲಾಗಿದೆ ಎಂಬ ನಿಶ್ಚಿತತೆ ಇತ್ತು.

ಮಿಥ್ಯೆಯ ಎಲ್ಲ ಪರಿಣಾಮಗಳು ಮಾಯವಾಗಿದ್ದವು: ಮೃತ್ಯು, ಅನಾರೋಗ್ಯ, ಅಜ್ಞಾನ ಇವೆಲ್ಲ ಭ್ರಮೆಗಳಾಗಿದ್ದವು – ನೈಜತೆಯಿಲ್ಲದ ಅಸ್ತಿತ್ವದಲ್ಲಿ ಇಲ್ಲದ ವಿಷಯಗಳಾಗಿದ್ದವು. ಕೇವಲ ಭವ್ಯ, ದಿಗಿಲು ಹುಟ್ಟಿಸುವ, ಭಯವಿಸ್ಮಿತಗೊಳಿಸುವ, ಪ್ರತಿಯೊಂದನ್ನು ಕೊಂಡೊಯ್ಯುವ ದೈವೀ ಪ್ರೇಮವಿತ್ತು.

ಮತ್ತು ಅದನ್ನು ಜಗತ್ತಿನಲ್ಲಿ ಅಭಿವ್ಯಕ್ತಗೊಳಿಸುವುದು ಹೇಗೆ? ವೈರುಧ್ಯವಿದ್ದ ಕಾರಣದಿಂದಾಗಿ ಅದೊಂದು ಅಸಾಧ್ಯತೆಯ ಹಾಗಿತ್ತು. ಆದರೆ ಆಗ "ಅತಿಮಾನಸ ಸತ್ಯವನ್ನು ಜಗತ್ತು ತಿಳಿದುಕೊಳ್ಳಲಿ ಎಂಬುದನ್ನು ನೀನು ಒಪ್ಪಿಕೊಂಡಿರುವಿ – ಅದನ್ನು ಇಡಿಯಾಗಿ, ಸಮಗ್ರವಾಗಿ ಅಭಿವ್ಯಕ್ತಗೊಳಿಸಲಾಗುವುದು" ಎಂಬುದು ಬಂದಿತು, ಹೌದು.

ಮತ್ತು ಆ ವಿಷಯವನ್ನು ಪೂರ್ತಿಗೊಳಿಸಲಾಗಿದೆ.

(ದೀರ್ಘ ಮೌನ)

ವ್ಯಕ್ತಿಗತ ಪ್ರಜ್ಞೆ ಮರಳಿ ಬಂದಿತು. ಕೇವಲ ಸೀಮಿತತೆಯ ಭಾವನೆ, ನೋವಿರುವುದರಿಂದ ಉಂಟಾಗುವ ಸೀಮಿತತೆಯ ಭಾವನೆ, ಅದಿಲ್ಲದ ಯಾವ ವ್ಯಕ್ತಿಯೂ ಇಲ್ಲ. ಮತ್ತು ನಾವು ನಿಶ್ಚಿತ ವಿಜಯದ ಆ ಮಾರ್ಗದಲ್ಲಿ ಚಲಿಸಲು ಪ್ರಾರಂಭಿಸಿದೆವು. ಆಕಾಶಗಳು ವಿಜಯದ ಗೀತೆಗಳೊಂದಿಗೆ ತುಂಬಿಕೊಂಡಿವೆ.

ದೈವೀ ಸತ್ಯ ಮಾತ್ರ ಅಸ್ತಿತ್ವದಲ್ಲಿದೆ, ಕೇವಲ ಅದನ್ನೇ ಪ್ರಕಟಿಸಲಾಗುವುದು. ಮುಂದೆ ಸಾಗೋಣ.

ಜಯಶಾಲಿಯಾಗುವ ದೈವೀ ಪ್ರಭು, ನಿನ್ನ ಮಹಿಮೆ ಅಪಾರವಾಗಿದೆ.

(ಮೌನ)

ಈಗ ಕಾರ್ಯದತ್ತ ಹೊರಳೋಣ.

ಸಹಿಷ್ಣುತೆ, ತಾಳ್ಮೆ, ಪರಿಪೂರ್ಣ ಸಮತೆ ಮತ್ತು ಪರಿಪೂರ್ಣ ನಂಬಿಕೆ ಇವೆಲ್ಲವೂ ಇರಲಿ.

(ಮೌನ)

ನನ್ನ ಅನುಭವಕ್ಕೆ ಹೋಲಿಸಿದರೆ ನಾನು ಹೇಳುತ್ತಿರುವುದು ಏನೂ ಅಲ್ಲ, ಅಲ್ಲಿ ಕೇವಲ ಶಬ್ದಗಳಿವೆ.

ನಮ್ಮ ಪ್ರಜ್ಞೆ ದೈವೀ ಪ್ರಭುವಿನ ಪ್ರಜ್ಞೆಯೇ ಆಗಿದೆ, ಪರಿಪೂರ್ಣವಾಗಿ ಅವನದೇ ಆಗಿದೆ. ಅಲ್ಲಿ ಯಾವ ವ್ಯತ್ಯಾಸವೂ ಇರಲಿಲ್ಲ. ನಾವು ಆ 'ತತ್' ಆಗಿದ್ದೇವೆ.

**(CWM, 15/391–92)**

*

**ನೆರವೇರಿಕೆ ಕಂಡುಕೊಂಡ ಒಂದು ವಚನ**

(ಎಪ್ರಿಲ್ 12 ಹಾಗೂ 13 ರ ಅನುಭವವನ್ನು ಶ್ರೀಮಾತೆಯವರು ವಿಸ್ತರಿಸಿ ಹೇಳುತ್ತಾರೆ.)

ನಾನು ದೈವೀ ಮೂಲದಲ್ಲಿದ್ದೆ, – ನಾನೇ ದೈವೀ ಮೂಲವಾಗಿದ್ದೆ. ಎರಡು ಗಂಟೆಗಳ ಕಾಲ ಪ್ರಜ್ಞಾಪೂರ್ವಕವಾಗಿ ಹಾಸಿಗೆಯ ಮೇಲೆ ಒರಗಿಕೊಂಡಿದ್ದೆ, ನಾನೇ ದೈವೀ ಮೂಲವಾಗಿದ್ದೆ. ಮತ್ತು ಅದು ಬಿರುಗಾಳಿಗಳು ನುಗ್ಗಿಬಂದ ಹಾಗಿತ್ತು. – ಸ್ಫೋಟಗಳಲ್ಲಿ ಕೊನೆಗೊಳ್ಳುತ್ತಿದ್ದ ಬಿರುಗಾಳಿಗಳು ಮತ್ತು ಈ ಬಿರುಗಾಳಿಗಳಲ್ಲಿ ಪ್ರತಿಯೊಂದು ವಿಶ್ವವನ್ನು ವ್ಯಾಪಿಸಿಕೊಂಡಿತ್ತು.

ಅದರ ಪರಮೋಚ್ಚ ಸಾರದಲ್ಲಿ ಅದು ದೈವೀ ಪ್ರೇಮವಾಗಿತ್ತು. ಪ್ರೇಮ ಶಬ್ದ ಕುರಿತು ಜನರು ಸಾಮಾನ್ಯವಾಗಿ ತಿಳಿದುಕೊಳ್ಳುವಂತಹದಕ್ಕೆ ಅದರ ಯಾವ ಸಂಬಂಧವೂ ಇರಲಿಲ್ಲ.

ದೈವೀ ಪ್ರೇಮದ ಸಾರದ ಪ್ರತಿಯೊಂದು ಬಿರುಗಾಳಿ ವಿಭಜನೆಗೊಳ್ಳುತ್ತಿತ್ತು ಮತ್ತು ವಿಸ್ತರಿಸಿಕೊಳ್ಳುತ್ತಿತ್ತು... ಆದರೆ ಅವು ಶಕ್ತಿಗಳಾಗಿರಲಿಲ್ಲ, ಆದರೆ ಅದು (ಪ್ರೇಮ) ಶಕ್ತಿಗಳ ಪ್ರಾಂತದಿಂದಾಚೆಗೆ ಬಹಳ ದೂರದಲ್ಲಿತ್ತು. ನಾವು ತಿಳಿದುಕೊಂಡಿರುವ ಹಾಗಿರುವ ವಿಶ್ವ ಅಸ್ತಿತ್ವದಲ್ಲಿರಲಿಲ್ಲ, ಅದೊಂದು ವಿಲಕ್ಷಣ ಭ್ರಮೆಯಾಗಿತ್ತು, ಆ ವಿಶ್ವಕ್ಕೆ ಯಾವ ಸಂಬಂಧವನ್ನೂ ಹೊಂದಿರಲಿಲ್ಲ. ಅಲ್ಲಿ ಕೇವಲ ವಿಶ್ವದ ಸತ್ಯವಿತ್ತು, ಅದರೊಂದಿಗೆ ವರ್ಣರಂಜಿತ ಬಿರುಗಾಳಿಗಳಿದ್ದವು – ಅವು ವರ್ಣಗಳನ್ನು ಹೊಂದಿದ್ದವು – ಅವು ವರ್ಣದ ಸಾರವಾದ ಏನೋ ಒಂದರಿಂದ ವರ್ಣರಂಜಿತವಾಗಿದ್ದವು.

ಅದು ಭಯವಿಸ್ಮಿತವಾಗಿತ್ತು. ಆ ರೀತಿ ನಾನು ಎರಡು ಗಂಟೆಗಳಿಗಿಂತಲೂ ಹೆಚ್ಚಿನ ಕಾಲ ಪ್ರಜ್ಞಾಪೂರ್ವಕವಾಗಿ ಜೀವಿಸಿದ್ದೆ.



ಮತ್ತು ನಂತರ ಒಂದು ದೈವೀ ಧ್ವನಿ ಪ್ರತಿಯೊಂದನ್ನೂ ನನಗೆ ವಿವರಿಸಿ ಹೇಳುತ್ತಿತ್ತು. (ಅದು ನಿಖರವಾಗಿ ಧ್ವನಿಯಾಗಿರಲಿಲ್ಲ, ಆದರೆ ಶ್ರೀ ಅರವಿಂದರ ಮೂಲದಲ್ಲಿದ್ದ ಏನೋ ಒಂದು, ದೈವೀ ಮೂಲದಿಂದ ಬಂದ ಅತ್ಯಂತ ಇತ್ತೀಚೆಗಿನ ಬಿರುಗಾಳಿಯಂತಹದು.) ಅನುಭವ ತೆರೆದುಕೊಂಡ ಹಾಗೆ ಈ ದೈವೀ ಧ್ವನಿ ನನಗೆ ಪ್ರತಿಯೊಂದು ಬಿರುಗಾಳಿಯನ್ನು ಕುರಿತು, ವಿಶ್ವದ ಪ್ರತಿಯೊಂದು ವ್ಯಾಪ್ತಿಯನ್ನು ಕುರಿತು ವಿವರಿಸಲು ಪ್ರಾರಂಭಿಸಿತು. ಮತ್ತು ನಂತರ ಅದೆಲ್ಲ ಈ ರೀತಿಯಲ್ಲಿ ಹೇಗಾಯಿತೆಂಬುದನ್ನು ವಿವರಿಸಿ ಹೇಳಿತು(ಶ್ರೀಮಾತೆಯವರು ಹಿಮ್ಮೊಗವಾಗುವ ಸೂಚನೆ ಮಾಡುತ್ತಾರೆ.): ಅದು ವಿಶ್ವದ ವಿರೂಪಗೊಳ್ಳುವಿಕೆಯನ್ನು ಕುರಿತಾಗಿತ್ತು. ಆ ದೈವೀ ಪರಮೋಚ್ಚ ಪ್ರಜ್ಞೆಯೊಂದಿಗೆ ಸದ್ಯದ ವಿರೂಪಗೊಂಡ ವಿಶ್ವದ ಸಂಬಂಧ ಹೇಗೆ ಉಂಟಾಯಿತು ಎಂದು ನಾನು ಆಶ್ಚರ್ಯಪಡುತ್ತಿದ್ದೆ. ಆ ದೈವೀ ಪ್ರಜ್ಞೆಯನ್ನು ಕಳೆದುಕೊಳ್ಳದೆ ಈ ಸಂಪರ್ಕವನ್ನು ಹೇಗೆ ಮಾಡಬಹುದು? ಅವೆರಡರ ನಡುವೆ ಸಂಬಂಧ ಅಸಾಧ್ಯವಾದುದೆಂದು ತೋರಿಬಂದಿತು. ಆಗ ಆ ಬಗೆಯ ಧ್ವನಿ ನನ್ನ ವಚನವನ್ನು ಎಂದರೆ "ಆ ದೈವೀ ಕಾರ್ಯವನ್ನು ನಾನು ಕೈಕೊಳ್ಳುವೆ ಎಂದು ವಚನ ನೀಡಿದ್ದೆ ಮತ್ತು ಅದನ್ನು ಕೈಕೊಳ್ಳಲಾಗುವುದು" ಎಂಬುದನ್ನು ನನ್ನ ನೆನಪಿಗೆ ತಂದುಕೊಟ್ಟಿತು.

ಎಪ್ರಿಲ್ 13 ರ ಆ ಹಂತದ ವರೆಗೆ ನಾನು ಹಲವಾರು ವಿಷಯಗಳನ್ನು ಕಲಿತುಕೊಂಡಿದ್ದೆ, ಆದರೆ ಅದನ್ನು ಬೇಲಿಯ ಈ ಬದಿಯಿಂದ ಕೈಕೊಳ್ಳುತ್ತಿದ್ದೆ. ನಾನು ಈಗ ಬೇಲಿಯ ಆ ಬದಿಗಿದ್ದೇನೆ. ಇಡಿಯಾಗಿ ಅಲ್ಲ, ಆದರೆ ಕನಿಷ್ಠ ಪಕ್ಷ ಬಹಳಷ್ಟು ಭಾಗದಲ್ಲಿ ಇದ್ದೇನೆ.

**(ಜುಲೈ 4, 1962)**

*

**ದೈವೀ ಪ್ರಭುವಿಗೆ ಕೊನೆಯ ಜಯವಿರುತ್ತದೆ**

ಇಲ್ಲಿಯವರೆಗೆ ನಾನು ಜೀವಂತವಿದ್ದೇನೆ, ಏಕೆಂದರೆ ದೈವೀ ಪ್ರಭು ನಾನು ಜೀವಂತವಿರಲೆಂದು ಬಯಸಿದ್ದ, ಹಾಗಿಲ್ಲದಿದ್ದರೆ ನಾನು ಬಹಳ ಕಾಲದ ಹಿಂದೆ ದೇಹ ತ್ಯಜಿಸಿಬಿಡುತ್ತಿದ್ದೆ.

ನಾನು ನನ್ನ ದೇಹದಲ್ಲಿಲ್ಲ. ಅದರ ಕಾಳಜಿ ತೆಗೆದುಕೊಳ್ಳುವುದನ್ನು ದೈವೀ ಪ್ರಭುವಿಗೆ ಬಿಟ್ಟುಕೊಟ್ಟಿದ್ದೇನೆ, ಅದು ಅತಿಮಾನಸೀಕರಣವನ್ನು ಹೊಂದಬೇಕೋ

ಬೇಡವೋ ಎಂಬುದನ್ನು ಅವನೇ ನಿರ್ಧರಿಸಬೇಕು. ಸದ್ಯ ಕೊನೆಯ ಹೋರಾಟ ನಡೆದಿದೆ ಎಂದು ನಾನು ಹೇಳಿದ್ದು ನನಗೆ ತಿಳಿದಿದೆ. ಈ ದೇಹ ಜೀವಿಸಿದ್ದುದರ ಉದ್ದೇಶ ನೆರವೇರಬೇಕಾದರೆ, ಎಂದರೆ ಅತಿಮಾನಸ ಪರಿವರ್ತನೆಯತ್ತ ಮೊದಲ ಹೆಜ್ಜೆಗಳನ್ನಿರಿಸಬೇಕಾದರೆ, ಆಗ ಅದು ಇಂದು ಮುಂದುವರಿಯುವುದು. ಇದು ದೈವೀ ಪ್ರಭುವಿನ ನಿರ್ಧಾರ. ಅವನೇನನ್ನು ನಿರ್ಧರಿಸಿದ್ದಾನೆ ಎಂಬುದನ್ನು ನಾನು ಕೇಳುತ್ತಿಲ್ಲ. ಹೋರಾಟವನ್ನು ಸಹಿಸಿಕೊಳ್ಳಲು ಈ ದೇಹ ಅಸಮರ್ಥವಾದರೆ, ಆಗ ಅದನ್ನು ಕರಗಿಸಬೇಕಾದರೆ ಮನುಕುಲ ವಿಷಮ ಸ್ಥಿತಿ ಇರುವ ಕಾಲದ ಮೂಲಕ ಸಾಗಿ ಹೋಗಬೇಕಾಗುವುದು. ಶ್ರೀ ಅರವಿಂದರ ತೋರಿಕೆ ಇರುವುದನ್ನು ಧಾರಣ ಮಾಡಲು ಯಶಸ್ವಿಯಾದ ಆಸುರೀ ಶಕ್ತಿ ಬಹುಶಃ ಕ್ರೌರ್ಯವಿರುವ, ದಯೆಯಿಲ್ಲದ ಹೊಸ ಧರ್ಮವೊಂದನ್ನು ಇಲ್ಲವೆ ಯೋಚನೆಯೊಂದನ್ನು ಸೃಷ್ಟಿಸುವುದು, ಅದು ಅತಿಮಾನಸ ಸಿದ್ಧಿಯ ಹೆಸರಿನಲ್ಲಿರುವುದು. ಪ್ರತಿಯೊಬ್ಬನೂ ಅದು ಸತ್ಯವಲ್ಲ ಎಂಬುದನ್ನು ತಿಳಿದುಕೊಳ್ಳಬೇಕು, ಅದು ಶ್ರೀ ಅರವಿಂದರ ಬೋಧನೆಯಲ್ಲ, ಅವರ ಬೋಧನೆಯ ಸತ್ಯವಲ್ಲ. ಶ್ರೀ ಅರವಿಂದರ ಸತ್ಯ ಪ್ರೇಮ, ಪ್ರಕಾಶ ಮತ್ತು ದಯೆ ಇವುಗಳ ಸತ್ಯವಾಗಿರುತ್ತದೆ. ಅವರು ಒಳ್ಳೆಯವರು, ಶ್ರೇಷ್ಠರಾದವರು ಮತ್ತು ದಯಾಪೂರ್ಣರಾದವರು ಹಾಗೂ ದೈವಿಕವಾದವರು. ಅವರೇ ಕೊನೆಯ ವಿಜಯವನ್ನು ಪಡೆಯುವರು.

ಈಗ, ವೈಯಕ್ತಿಕವಾಗಿ, ನೀವು ಸಹಾಯ ಸಲ್ಲಿಸಲು ಬಯಸಿದರೆ, ಕೇವಲ ಪ್ರಾರ್ಥನೆ ಮಾಡಬೇಕು. ದೈವೀ ಪ್ರಭು ತಾನು ಬಯಸಿದ್ದನ್ನು ಈ ದೇಹದೊಂದಿಗೆ ಕೈಕೊಳ್ಳುವನು.

**(CWM, 15/389)**

*

**ಮೃತ್ಯುವನ್ನಪ್ಪುವ ಹೊಸ ರೀತಿ**

ಇಂದು ಬೆಳಿಗ್ಗೆ ನನಗೆ ಏನನ್ನೋ ಹೇಳಲಾಯಿತು (ಬೆಳಿಗ್ಗೆ ಇಲ್ಲವೆ ರಾತ್ರಿಯ ಸಮಯದಲ್ಲಾಗಿರಬಹುದು, ನನ್ನ ನೆನಪಿಗೆ ಬರುತ್ತಿಲ್ಲ.), ಅದನ್ನು ನನ್ನ ದೇಹಕ್ಕೆ ಹೇಳಲಾಯಿತು, ನನಗಲ್ಲ. ದೇಹ ಪರಿಶುದ್ಧವಾಗುವವರೆಗೆ ಮುಂದುವರಿದುಕೊಂಡು ಹೋಗುವುದು ಮತ್ತು ಆ ಹಂತದಲ್ಲಿ ಅದು ತನ್ನ ಕಾರ್ಯವನ್ನು ಮುಂದು–ವರಿಸಿಕೊಂಡು ಹೋಗಬೇಕೋ ಇಲ್ಲವೆ ಇಹಲೋಕ ತ್ಯಜಿಸಬೇಕೋ ಇವುಗಳ ನಡುವೆ ಆಯ್ಕೆ ಮಾಡಿಕೊಳ್ಳುವುದಿರುತ್ತದೆ ಎಂದು ದೇಹಕ್ಕೆ ಹೇಳಲಾಯಿತು. ಒಮ್ಮೆ



ಅದು ಜೀವಕೋಶಗಳ ದೃಷ್ಟಿಕೋನದಿಂದ ಪರಿಶುದ್ಧತೆಯನ್ನು ಸಿದ್ಧಿಸಿಕೊಂಡಾಗ (ಜನರು ದೇಹದ ಪರಿಶುದ್ಧತೆ ಎಂದು ಕರೆಯುವಂತಹದಲ್ಲ, ಅದಲ್ಲವೇ ಅಲ್ಲ) ಆ ಸಿದ್ಧಿ ದೈವೀ ಪ್ರಭಾವದ ದೃಷ್ಟಿಕೋನದಿಂದಲೂ ಆದಾಗ ಅದರರ್ಥ ಪ್ರತಿಯೊಂದು ಜೀವಕೋಶ ಪ್ರತ್ಯೇಕವಾಗಿ ಪರಮೋಚ್ಚನ ಪ್ರಭಾವದಡಿ ಇರುವಂತಾಗುತ್ತದೆ (ಆ ಕಾರ್ಯವನ್ನೇ ಸದ್ಯ ಕೈಕೊಳ್ಳಲಾಗುತ್ತದೆ) ಅಂತಹ ಸ್ಥಿತಿಯಲ್ಲಿ ಕಾರ್ಯವನ್ನು ಪೂರ್ತಿಗೊಳಿಸಲಾಗುವುದು ಎಂದು ದೇಹಕ್ಕೆ ಹೇಳಲಾಗಿತ್ತು. ಮತ್ತು ಒಮ್ಮೆ ಆ ಕಾರ್ಯ ಪೂರ್ತಿಗೊಂಡ ನಂತರ, ಪರಮೋಚ್ಚನ ಪ್ರಭಾವದಲ್ಲಿ ಇಡಿಯಾಗಿ ಉಳಿದುಕೊಂಡಿರುವ ದೇಹವೇ ಸ್ವತಃ ಮುಂದುವರಿದುಕೊಂಡು ಹೋಗಬೇಕೋ ಇಲ್ಲವೆ ಕರಗಿ ಹೋಗಬೇಕೋ ಎಂಬುದನ್ನು ನಿರ್ಧರಿಸುವುದು. ಅದು ಬಹಳ ಸ್ವಾರಸ್ಯಕರವಾಗಿತ್ತು, ಏಕೆಂದರೆ ಕರಗಿ ಹೋಗುವುದರ ಅರ್ಥ ಹರಡಿಕೊಳ್ಳುವು–ದಾಗಿದೆ, ಆದರೆ ಹರಡುವುದು (ತಿಳಿದುಕೊಳ್ಳಲು ಅದು ಸುಲಭವಾದದ್ದು) ಎಂದರೆ ಬಹಳ ವಿಸ್ತಾರವಾದ ಕ್ಷೇತ್ರದ ಮೇಲೆ ಪ್ರಜ್ಞೆಯನ್ನು ಹರಡುವುದಾಗಿದೆ. ಹಾಗಾಗಿ ಜೀವಕೋಶಗಳಿಗೆ ಆಯ್ಕೆ ಮಾಡಿಕೊಳ್ಳುವುದನ್ನು ಬಿಟ್ಟುಕೊಡಲಾಗುವುದು, ಅವು ಹರಡಿಕೊಳ್ಳುವ ರೀತಿಯಲ್ಲಿ ಕಾರ್ಯ ಮಾಡಬಹುದು ಇಲ್ಲವೆ ಗುಡ್ಡೆಗಟ್ಟಿದ ರೀತಿಯಲ್ಲಿ ಕಾರ್ಯ ಮಾಡಬಹುದು (ಶ್ರೀಮಾತೆಯವರು ಮುಷ್ಠಿ ಬಿಗಿಹಿಡಿದು ತೋರಿಸುತ್ತಾರೆ).

ಆ ಕೋನದಿಂದ ಸಮಸ್ಯೆಯನ್ನು ಮೊದಲ ಸಲ ಎದುರಿಸಲಾಗಿದೆ, ಎಂದರೆ ಸಾರ್ವತ್ರಿಕ ಕಾರ್ಯದ ದೃಷ್ಟಿಕೋನದಿಂದ ಎದುರಿಸಲಾಗಿದೆ.

**ಪ್ರಶ್ನೆ :** *ಹರಡಿಕೊಳ್ಳುವುದು ಹೇಗೆ ಸಹಾಯಕವಾಗಬಹುದು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಅದು ಹರಡಿಕೊಂಡರೆ, ಕರಗಿ ಹೋದರೆ ಇಡೀ ಕಾರ್ಯವೇ ಕರಗಿ ಹೋದಂತಾಗುವುದಿಲ್ಲವೆ?*

**ಶ್ರೀಮಾತೆ :** ಇಲ್ಲ, ಪ್ರತಿಯೊಂದು ಜೀವಕೋಶ ಪರಿಪೂರ್ಣವಾಗಿ ಪ್ರಜ್ಞೆಯುಳ್ಳದ್ದಾಗಿದೆ.

ಅದು ಸ್ಪಷ್ಟವಾಗಿ (ಬಾಹ್ಯ ತರ್ಕಕ್ಕನುಸಾರವಾಗಿ) ಹೊಸದೊಂದು ರೀತಿಯಲ್ಲಿ ಮೃತ್ಯು ಹೊಂದುವುದಾಗಿದೆ, ಅದು ಸಾಧ್ಯವಾಗಬಹುದು – ಅದು ಇನ್ನು ಮುಂದೆ ನಾವು ಭಾವಿಸುವ ರೀತಿಯ ಮೃತ್ಯುವಾಗುವುದಿಲ್ಲ.

**(ಅನುಯಾಯಿಯೊಂದಿಗೆ ಮಾತುಕತೆ: ಜುಲೈ 31, 1963)**

*

## ಸಾಮರ್ಥ್ಯಪೂರ್ಣ ಮತ್ತು ದೀರ್ಘಕಾಲ ಉಳಿದುಕೊಂಡಿದ್ದ ಅತಿಮಾನಸ ಶಕ್ತಿಗಳು

(ಅಗಸ್ಟ 26 ರಾತ್ರಿ ಕಾಲದಿಂದ 27, 1968 ರ ವರೆಗಿನದು)

"ಸಾಮರ್ಥ್ಯಪೂರ್ಣ ಮತ್ತು ದೀರ್ಘಕಾಲ ಉಳಿದುಕೊಂಡಿದ್ದ ಅತಿಮಾನಸ ಶಕ್ತಿಗಳು ದೇಹದಲ್ಲಿ ಹಾಗೂ ಎಲ್ಲೆಡೆಯಲ್ಲಿ ಒಂದೇ ಕಾಲಕ್ಕೆ ಒಳನುಗ್ಗಿದ್ದು."

ದೇಹದಲ್ಲಿ ಒಳನುಗ್ಗುವಿಕೆ. ಹೌದು, ಪ್ರವಾಹದ ಒಳನುಗ್ಗುವಿಕೆ. ಹಲವಾರು ಸಂದರ್ಭಗಳಲ್ಲಿ ನನಗೆ ಅದು ಒದಗಿ ಬಂದಿತ್ತು. ಆದರೆ ಆ ದಿನ ರಾತ್ರಿ (ಎಂದರೆ ಮೊನ್ನೆಯ ದಿನ ರಾತ್ರಿ) ಅದು ಒಮ್ಮಿಂದೊಮ್ಮೆಗೆ ಬಂದಿತು. ಅಲ್ಲಿ ಕೇವಲ ಅತಿಮಾನಸ ವಾತಾವರಣದ ಹೊರತಾಗಿ ಬೇರೇನೂ ಇರಲಿಲ್ಲ. ನನ್ನ ದೇಹ ಅದರೊಳಗಿತ್ತು. ಆ ವಾತಾವರಣ ಎಲ್ಲೆಡೆಯಿಂದ ಒಂದೇ ವೇಳೆಗೆ ಒಳಗೆ ಪ್ರವೇಶಿಸಲು ಒತ್ತಡ ತರುತ್ತಿತ್ತು. ಹಾಗಾಗಿ ಪ್ರವೇಶಿಸುತ್ತಿರುವುದು ಒಂದು ಪ್ರವಾಹವಾಗಿರಲಿಲ್ಲ, ಎಲ್ಲೆಡೆಯಿಂದ ವಾತಾವರಣವೇ ಒಳನುಗ್ಗುತ್ತಿತ್ತು. ಅದು ಕನಿಷ್ಠ ಪಕ್ಷ ನಾಲ್ಕೈದು ಗಂಟೆಗಳ ಕಾಲ ಮುಂದುವರಿಯಿತು. ಬಹಳ ಕಡಿಮೆ ಪ್ರಮಾಣದಲ್ಲಿ ಒಳನುಗ್ಗುವಿಕೆಗೆ ಒಳಗಾದ ಒಂದು ಭಾಗವಿತ್ತು. ಅದು ಇಲ್ಲಿಂದ ಅಲ್ಲಿಯವರೆಗೆ (ಶ್ರೀಮಾತೆಯವರು ಗಂಟಲು ಹಾಗೂ ನೆತ್ತಿ ಇರುವ ಸ್ಥಳ ಇವುಗಳ ನಡುವಿರುವ ಭಾಗವನ್ನು ತೋರಿಸುತ್ತಾರೆ.) ಅಲ್ಲಿ ಪ್ರವಾಹ ಕಡಿಮೆ ಮಟ್ಟದಲ್ಲಿ ಒಳನುಗ್ಗಿದೆ ಎಂದು ಸೂಚಿಸುವ ಹಾಗೆ ಆ ಭಾಗಕ್ಕೆ ನಿಸ್ತೇಜವಾಗಿರುವ ಹಾಗೂ ಮಬ್ಬಾಗಿರುವ ನೋಟವಿತ್ತು. ಆದರೆ ಅದರ ಹೊರತಾಗಿ ಉಳಿದ ಎಲ್ಲೆಡೆಗಳಲ್ಲಿ ಅದು ಒಳನುಗ್ಗುತ್ತಲೇ ಇತ್ತು. ಅದರಂತಹದನ್ನು ನಾನು ಹಿಂದೆಂದೂ ನೋಡಿರಲಿಲ್ಲ. ಅದು ಹಲವಾರು ಗಂಟೆಗಳ ಕಾಲ ಒಟ್ಟಿನಲ್ಲಿ ಪ್ರಜ್ಞಾಪೂರ್ವಕವಾಗಿ ಉಳಿದುಕೊಂಡಿತ್ತು.

ಹಾಗಾಗಿ ಆ ಸಮಯದಲ್ಲಿ ಮತ್ತು ಅದಿದ್ದ ಹಾಗೆ ಅದಿರುವ ಕಾಲದಲ್ಲಿ ನಾನು ಪ್ರಜ್ಞಾಪೂರ್ಣಳಾಗಿದ್ದೆ: "ಅಹಾ, ಅದನ್ನು ಓ ದೈವೀ ಪ್ರಭು, ನೀನು ನನ್ನಿಂದ ಬಯಸುತ್ತಿರುವಿ." ಆ ಕ್ಷಣದಲ್ಲಿ ಏನೋ ಒಂದು ಸಂಭವಿಸಲಿದೆ ಎಂಬ ಭಾವನೆ ನನಗೆ ಬಂದಿತು.

**(CWM, 11/122–23)** **– ಶ್ರೀಮಾತೆ**

*



ಶ್ರೀ ಅರವಿಂದರು 'ಪ್ರತಿಮೆ' ಎಂದು ಕರೆಯುವುದು ಭೌತಿಕ ದೇಹವಾಗಿದೆ. ಹಾಗಾಗಿ ಭೌತಿಕ ದೇಹವನ್ನು ಪರಿವರ್ತನೆಗೊಳಪಡಿಸಲು ದೈವೀ ಪ್ರಭು ಏನನ್ನು ಕೈಕೊಳ್ಳುವನೆಂದು ಅವನಿಗೆ ಕೇಳಿದೆ, ಮತ್ತು ನಿನ್ನೆ ರಾತ್ರಿ ಉತ್ತರ ರೂಪದಲ್ಲಿ ನನಗೆ ಎರಡು ದರ್ಶನಗಳನ್ನು ನೀಡಿದನು.

ಮೃತ್ಯು ಕುರಿತು ಇರುವ ಎಲ್ಲ ಸಂಪ್ರದಾಯಗಳಿಂದ ದೈಹಿಕ ಪ್ರಜ್ಞೆಯನ್ನು ಮುಕ್ತಗೊಳಿಸುವುದು ಒಂದು ದರ್ಶನದಲ್ಲಿತ್ತು. ಮತ್ತು ಇನ್ನೊಂದು ದರ್ಶನದಲ್ಲಿ ಅತಿಮಾನಸ ದೇಹ ಹೇಗಿರುತ್ತದೆಂಬುದನ್ನು ನನಗೆ ತೋರಿಸಿಕೊಡಲಾಯಿತು. ಪ್ರಶ್ನೆ ಕೇಳಿದ್ದರಿಂದ ನನಗೆ ಒಳ್ಳೆಯದಾಯಿತು.

**(CWM, 10/352–52; ಮೇ 9, 1970)** **– ಶ್ರೀಮಾತೆ**

*

## ಶ್ರೇಷ್ಠ ಸಂಕ್ರಮಣ

**ರೂಪಾಂತರ**

ನಾನು ಜೀವನವನ್ನು ಕುರಿತು ಹೊಸ ಗ್ರಹಿಕೆಯೊಂದನ್ನು ಪಡೆಯುವ ಅಂಚಿನಲ್ಲಿದ್ದೇನೆ.

ಇತರರ ಚಟುವಟಿಕೆಗಳನ್ನು ಕುರಿತು, ತಮ್ಮ ಸುತ್ತಲಿರುವ ಪ್ರತಿಯೊಂದನ್ನು ಕುರಿತು ಜನರ ಸರ್ವಸಾಮಾನ್ಯ ಪ್ರತಿಕ್ರಿಯೆ, ಅವರು ವಸ್ತು–ವಿಷಯಗಳನ್ನು ನೋಡುವ ಸರ್ವಸಾಧಾರಣ ದೃಷ್ಟಿ ಇದೆಲ್ಲವೂ ಪ್ರಜ್ಞೆಯ ಒಂದು ವಿಶಿಷ್ಟ ಮನೋಭಾವವನ್ನು ಪ್ರತಿನಿಧಿಸುತ್ತದೆ: ಅದನ್ನು ಒಂದು ಹಂತದಿಂದ ನೋಡಲಾಗಿರುತ್ತದೆ. ಇತ್ತೀಚೆಗೆ ಸೂಕ್ತಿ(aphorism)ಗಳನ್ನು ಕುರಿತು ವಿಮರ್ಶೆ ಮಾಡಿದಾಗ, ಒಮ್ಮೆಗೆ ಹಂತ ಭಿನ್ನವಾಗಿರುವುದನ್ನು ಗಮನಿಸಿದೆ, ಮತ್ತು ದೃಷ್ಟಿಕೋನ ಎಷ್ಟೊಂದು ಭಿನ್ನವಾಗಿತ್ತೆಂದರೆ, ವಸ್ತು–ವಿಷಯಗಳನ್ನು ಸಾಮಾನ್ಯ ರೀತಿಯಲ್ಲಿ ನೋಡುವ ಆ ಇನ್ನೊಂದು ಮನೋಭಾವಕ್ಕೆ ಅದನ್ನು ತಿಳಿದುಕೊಳ್ಳುವುದು ಸಾಧ್ಯವಾಗಲಿಕ್ಕಿಲ್ಲ ಎಂದು ತೋರಿಬಂದಿತು. ಅಷ್ಟೊಂದು ಭಿನ್ನವಾದ ಮನೋಭಾವವನ್ನು ಹೇಗೆ ಹೊಂದಬಹುದೆಂದು ನೀವು ಆಶ್ಚರ್ಯಪಡುತ್ತೀರಿ. ನಾನು ಮಾತನಾಡುತ್ತಿರುವಾಗ ನನಗೆ ಒಂದು ಬಗೆಯ ಸಂವೇದನೆ ಇಲ್ಲವೆ ಗ್ರಹಿಕೆ ಬಂದಿತು, ಅದೆಂದರೆ ಈ ಹೊಸ ಮನೋಭಾವ ಸ್ವಾಭಾವಿಕ ಹಾಗೂ ಸ್ವಯಂಪ್ರೇರಿತ ವಿಷಯವೊಂದೆಂದು ಸ್ಥಾಪಿತಗೊಳ್ಳುವುದಾಗಿತ್ತು.

ಅದು ಪರಿವರ್ತನೆಗಾಗಿ ಇದ್ದ ಪ್ರಯತ್ನವೊಂದರ ಪರಿಣಾಮವಾಗಿರಲಿಲ್ಲ: ಅದು ಈಗಾಗಲೆ ಸ್ಥಾಪಿತಗೊಂಡ ಪರಿವರ್ತನೆಯಾಗಿತ್ತು.

ಅದು ಇಡಿಯಾದುದಲ್ಲ, ಏಕೆಂದರೆ ಎರಡೂ ಬಗೆಯ ಕಾರ್ಯವಿಧಾನಗಳು ಗ್ರಹಿಕೆಗೆ ಬರುತ್ತವೆ, ಆದರೆ ಅದು ಸರಿಯಾದ ಮಾರ್ಗದಲ್ಲಿ ಸಾಗುತ್ತಿದೆ ಎಂಬುದರ ಬಗ್ಗೆ ನನ್ನಲ್ಲಿ ಆತ್ಮವಿಶ್ವಾಸವಿದೆ. ನಂತರ ಅದು ಸ್ವಾರಸ್ಯಕರವಾಗುತ್ತದೆ.

ಚಿಟ್ಟೆಯ ಪೂರ್ವಸ್ಥಿತಿ(ಕೋರಿ ಹುಳ)ಯಿಂದ ಚಿಟ್ಟೆ ಹೊರಬರುವ ಹಾಗೆ ಪ್ರಜ್ಞೆಯ ಕೆಲವೊಂದು ಸ್ಥಿತಿಗಳು ರೂಪಾಂತರಗೊಳ್ಳುತ್ತಿವೆ ಎನ್ನುವ ಹಾಗಿದೆ.

ಅದು ಸದ್ಯ ಮಾರ್ಗದಲ್ಲಿದೆ. ಆದರೆ ವ್ಯತ್ಯಾಸವನ್ನು ಗ್ರಹಿಕೆಗೆ ತೆಗೆದುಕೊಳ್ಳಲು ಬಾರದಷ್ಟು ದೂರದಲ್ಲಿದೆ. ಒಮ್ಮೆ ಅದನ್ನು ಕೈಕೊಂಡಾಗ ಏನೋ ಒಂದು ಸ್ಥಾಪಿತಗೊಳ್ಳುತ್ತದೆ.

(ಮೌನ)

ಜೀವಕೋಶಗಳಿಗೇ ಸ್ವತಃ ಮುಕ್ತ ಆಯ್ಕೆ ಮಾಡಿಕೊಳ್ಳುವುದನ್ನು ಕಲ್ಪಿಸಲಾಗುವುದು ಎಂದು ನನಗೆ ಹೇಳಲಾಯಿತು. ಹಾಗಾಗಿ ಆ ಎಲ್ಲ ಧ್ಯಾನದಿಂದ ಬಂದ ತೀರ್ಮಾನವೆಂದರೆ ಜೀವಕಣಗಳ (cellular) ಮೊತ್ತದಲ್ಲಿ ಒಂದು ಹೊಸ ಪ್ರಜ್ಞೆ ಇರಲೇಬೇಕೆಂಬುದಾಗಿತ್ತು. – ಒಂದು ಹೊಸ ಅಂಶ, ಅದು ಪ್ರಗತಿಯಲ್ಲಿ ಇರಲೇಬೇಕಾದ ಒಂದು ಹೊಸ ಅನುಭವ. ಪರಿಣಾಮ: ನಿನ್ನೆ ರಾತ್ರಿ ಜೀವಕಣಗಳ ವಿಲಕ್ಷಣ ಅನುಭವಗಳ ಸರಣಿ ಇರುವುದನ್ನು ಕಂಡುಕೊಂಡೆ, ಅದನ್ನು ನಾನು ವಿವರಿಸಿ ಹೇಳಲಾರೆ ಮತ್ತು ಅದು ಹೊಸ ಜ್ಞಾನಪ್ರಕಾಶನ (revelation).

**(ಅನುಯಾಯಿಯೊಂದಿಗೆ ಮಾತುಕತೆ: ಸಪ್ಟಂಬರ 18, 1964)**

*

**ಗ್ರಹಿಕೆಯ ನಡುವಣ ಒಂದು ಹೊಸ ಸ್ಥಿತಿ**

ನಿನ್ನೆ ಅಥವಾ ಅದಕ್ಕೂ ಹಿಂದಿನ ದಿನ, ಇಡೀ ದಿನ ಬೆಳಗಿನಿಂದ ಸಾಯಂಕಾಲದ ವರೆಗೆ ಏನೋ ಒಂದು ಹೇಳುತ್ತಿತ್ತು: "ನಾನಿದ್ದೇನೆ – ಇಲ್ಲವೆ ಪೃಥ್ವಿಯ ಮೇಲೆ ಮೃತರಾದವರ ಪ್ರಜ್ಞೆ ನನ್ನಲ್ಲಿದೆ." ನಾನು ಆ ಅನಿಸಿಕೆಯನ್ನು ಶಬ್ದಗಳಲ್ಲಿ ತರ್ಜುಮೆ ಮಾಡುತ್ತಿದ್ದೇನೆ, ಆದರೆ ಅದು ನನಗೆ: "ಪೃಥ್ವಿ ಮತ್ತು ಭೌತಿಕ ವಸ್ತುಗಳಿಗೆ ಸಾಪೇಕ್ಷವಾಗಿ ಈ ಪ್ರಜ್ಞೆ ಮೃತನಾದ ಮನುಷ್ಯನ ಪ್ರಜ್ಞೆಯ ಹಾಗಿದೆ, ನಾನು ಪೃಥ್ವಿಯ ಮೇಲಿರುವ ಮೃತ ವ್ಯಕ್ತಿ." ಪ್ರಜ್ಞೆಯ ನೆಲೆಗನುಸಾರವಾಗಿ – ಏಕೆಂದರೆ ಪ್ರಜ್ಞೆ ಯಾವಾಗಲೂ ತನ್ನ ನೆಲೆಯನ್ನು ಬದಲು ಮಾಡುತ್ತಿರುತ್ತದೆ,



ಅದಕ್ಕನುಸಾರವಾಗಿ ಅದು ಇದ್ದುದು ಹೀಗಿತ್ತು: "ಮೃತರಾದ ಜನರು ಪೃಥ್ವಿಯ ಸಂಬಂಧದಲ್ಲಿ ಇರುವುದು ಹೀಗೆ, ಪೃಥ್ವಿಯ ಸಂಬಂಧದಲ್ಲಿ ನಾನು ಸಂಪೂರ್ಣವಾಗಿ ಮೃತ ವ್ಯಕ್ತಿಯ ಹಾಗಿದ್ದೇನೆ" ಮತ್ತು ನಂತರ "ಪೃಥ್ವಿಯ ಪ್ರಜ್ಞೆಯಲ್ಲಿ ನಾನು ಮೃತ ವ್ಯಕ್ತಿಯ ಹಾಗೆ ಜೀವಿಸುತ್ತಿದ್ದೇನೆ", ನಂತರ "ನಾನು ಪೃಥ್ವಿಯ ಮೇಲೆ ನಿಖರವಾಗಿ ಮೃತ ವ್ಯಕ್ತಿಯ ಹಾಗಿದ್ದೇನೆ" ಇತ್ಯಾದಿ. ನಾನು ಎಂದಿನಂತೆ ನಡೆದುಕೊಳ್ಳುತ್ತಿದ್ದೆ, ಮಾತನಾಡುತ್ತಿದ್ದೆ, ರೂಢಿಯಾಗಿದ್ದ ರೀತಿಯಲ್ಲಿ ಕಾರ್ಯಕೈಕೊಳ್ಳುತ್ತಿದ್ದೆ. ಆದರೆ ಇದು ಎರಡು ವರ್ಷಗಳಿಗಿಂತಲೂ ದೀರ್ಘಕಾಲ ಈ ರೀತಿಯದಾಗಿದೆ, ನಾನು ಜಗತ್ತನ್ನು ಈ ರೀತಿ ನೋಡುತ್ತ ಬಂದಿದ್ದೇನೆ. (ಒಂದು ಸ್ತರದಿಂದ ಇನ್ನೊಂದು ಸ್ತರಕ್ಕೆ ಮೇಲ್ಮುಖವಾಗಿ ನೋಡುವುದು) ನಾನೀಗ ಅದನ್ನು ಹೀಗೆ (ಕೆಳ ಸ್ತರದತ್ತ) ನೋಡುತ್ತಿದ್ದೇನೆ. ಇದನ್ನು ಹೇಗೆ ವಿವರಿಸ–ಬೇಕೆಂಬುದು ನನಗೆ ತಿಳಿಯದು, ಏಕೆಂದರೆ ಅದನ್ನು ಕುರಿತು ಮಾನಸೀಕರಣ ಮಾಡಿದ್ದು ಯಾವುದೂ ಇಲ್ಲ. ಮತ್ತು ಮಾನಸೀಕರಣಗೊಂಡಿರದ ಸಂವೇದನೆಗಳು ತಮ್ಮ ಸುತ್ತ ಮಂಜು ಮಂಜಾದ ಏನನ್ನೋ ಇರಿಸಿಕೊಂಡಿರುತ್ತವೆ, ಅದಕ್ಕೆ ವ್ಯಾಖ್ಯೆ ನೀಡುವುದು ಕಠಿಣವಾದದ್ದು. ಆದರೆ ಶಬ್ದಗಳು ಹಾಗೂ ಯೋಚನೆ ಸ್ವಲ್ಪ ದೂರ ಉಳಿದುಕೊಂಡಿದ್ದವು. (ತಲೆಯ ಸುತ್ತ ಇದ್ದವು ಎಂಬ ಸಂಜ್ಞೆ) ಗಮನಿಸುತ್ತಿರುವ ಮತ್ತು ಮೌಲ್ಯಮಾಪನ ಮಾಡುತ್ತಿರುವ ಏನೋ ಒಂದರ ಹಾಗಿದ್ದವು, ಎಂದರೆ ತನ್ನ ಸುತ್ತ ಇರುವುದನ್ನು ನೋಡಿದ್ದನ್ನು ಹೇಳುವಂತಹದು. ಇಂದು ಎರಡು ಮೂರು ಸಲ ಅದು ಅತ್ಯಂತ ಬಲವತ್ತರವಾಗಿತ್ತು. – ಅದರರ್ಥ ಈ ಸ್ಥಿತಿ ಇಡೀ ಪ್ರಜ್ಞೆಯ ಮೇಲೆ ತನ್ನ ಪ್ರಾಬಲ್ಯವನ್ನಿರಿಸಿತ್ತು. – ಒಂದು ಬಗೆಯ ಭಾವನೆ ಇಲ್ಲವೆ ಸಂವೇದನೆ ಇಲ್ಲವೆ ಗ್ರಹಿಕೆ – ಆದರೆ ಇದಾವುದೂ ಆಗಿರಲಿಲ್ಲ: ನಾನು ಪೃಥ್ವಿಯ ಮೇಲೆ ಜೀವಿಸುತ್ತಿರುವ ಮೃತವಾದ ವ್ಯಕ್ತಿ.

ಮತ್ತು ಹಾಗಾಗಿ, ದೃಷ್ಟಿಯನ್ನು ಕುರಿತು ಹೇಳುವುದಾದರೆ ವಸ್ತುನಿಷ್ಠ ನಿಖರತೆ ಇಲ್ಲ (ಕಣ್ಣಿನಿಂದ ನೋಡಲಾಗದೆ ಇರುವುದನ್ನು ಶ್ರೀಮಾತೆಯವರು ಸಂಜ್ಞೆ ಮಾಡಿ ತೋರಿಸುತ್ತಾರೆ.) ನಾನು ಪ್ರಜ್ಞೆಯಾದ್ಯಂತ ಹಾಗೂ ಪ್ರಜ್ಞೆಯ ಮೂಲಕ ನೋಡುತ್ತೇನೆ. ಕೇಳಿಸಿಕೊಳ್ಳುವುದನ್ನು ಕುರಿತು ಹೇಳುವುದಾದರೆ ನಾನು ಬಹಳ ಭಿನ್ನ ರೀತಿಯಲ್ಲಿ ಕೇಳುತ್ತೇನೆ, ಅಲ್ಲಿ ಒಂದು ಬಗೆಯ ವ್ಯತ್ಯಾಸ ಗುರುತಿಸುವಿಕೆ ಇದೆ – ಅದು ಒಳನೋಟವಲ್ಲ – ಗ್ರಹಿಕೆಯಲ್ಲಿ ಆಯ್ದುಕೊಳ್ಳುವ, ನಿರ್ಧಾರ ಕೈಕೊಳ್ಳುವ ಏನೋ ಒಂದು, ಅದು ನಿರ್ಧರಿಸುತ್ತದೆ. ಆದರೆ ಸ್ವಯಂಚಾಲಿತವಾಗಿ ಅಲ್ಲ – ಇದು ಕೇಳಿಸಿಕೊಂಡದ್ದನ್ನು ಮತ್ತು ಕೇಳಿಸಿಕೊಳ್ಳಲಾರದೆ ಇದ್ದುದನ್ನು ಕುರಿತು ಹಾಗೂ ಗ್ರಹಿಸಿದ್ದನ್ನು ಹಾಗೂ ಗ್ರಹಿಸಲಾಗದೆ ಇದ್ದುದನ್ನು ಕುರಿತು ಇದೆ. ಅದು ಈಗಾಗಲೆ

ದೃಷ್ಟಿಯೊಂದಿಗಿದೆ, ಆದರೆ ಕೇಳಿಸಿಕೊಳ್ಳುವುದನ್ನು ಕುರಿತು ಇನ್ನೂ ಹೆಚ್ಚು ಬಲವತ್ತರವಾಗಿದೆ: ಕೆಲವೊಂದು ವಿಷಯಗಳನ್ನು ಕುರಿತು ಮನುಷ್ಯ ಕೇವಲ ಸತತ ಇರುವ ಅನಪೇಕ್ಷಣೀಯ ಶಬ್ದಗಳನ್ನು ಕೇಳಬಲ್ಲ, ಇನ್ನು ಕೆಲವು ಸಾಕಷ್ಟು ಸ್ಪಷ್ಟವಾಗಿರುತ್ತವೆ; ಇನ್ನು ಕೆಲವು ಅಸ್ಪಷ್ಟವಾಗಿರುತ್ತವೆ, ಅಪರೂಪಕ್ಕೆ ಕೇಳಿಬರುತ್ತವೆ: ದೃಷ್ಟಿಯನ್ನು ಕುರಿತು ಕೂಡ ವಿಷಯ ಅದೇ ಆಗಿದೆ: ಪ್ರತಿಯೊಂದೂ ಪ್ರಕಾಶಮಯ ಮಂಜಿನ ಹಿಂದೆ ಇದ್ದ ಹಾಗಿದೆ – ಹೆಚ್ಚು ಪ್ರಕಾಶಮಯ, ಆದಾಗ್ಯೂ ಮಂಜು ಮುಸುಕಿರುತ್ತದೆ, ಎಂದರೆ ಅಲ್ಲಿ ನಿಖರತೆ ಇರುವುದಿಲ್ಲ – ಮತ್ತು ನಂತರ ಒಮ್ಮೆಗೆ ಅಲ್ಲಿ ಪರಿಪೂರ್ಣವಾಗಿ ಸ್ಪಷ್ಟವಾದದ್ದು ಮತ್ತು ನಿಖರವಾದದ್ದು ಇರುತ್ತದೆ, ವಿವರಗಳನ್ನು ಕುರಿತು ಅಸಾಧಾರಣವಾದ, ನಿಖರವಾದ ದೃಷ್ಟಿ ಇರುತ್ತದೆ. ಸಾಮಾನ್ಯವಾಗಿ ಆ ದರ್ಶನ ವಸ್ತು–ವಿಷಯಗಳಲ್ಲಿರುವ ಪ್ರಜ್ಞೆಯ ಅಭಿವ್ಯಕ್ತಿ–ಯಾಗಿರುತ್ತದೆ, ಎಂದರೆ ಪ್ರತಿಯೊಂದು ಹೆಚ್ಚು ಹೆಚ್ಚಾಗಿ ವ್ಯಕ್ತಿನಿಷ್ಠವಾಗಿರುತ್ತದೆ, ಬಹಳ ಕಡಿಮೆ ರೀತಿಯಲ್ಲಿ ವಸ್ತುನಿಷ್ಠವಾಗಿರುತ್ತದೆ. ಆ ದರ್ಶನಗಳು ನೋಟದ ಮೇಲೆ ತಮ್ಮನ್ನು ಹೇರಿಕೊಳ್ಳುವಂತಹವಲ್ಲ, ಇಲ್ಲವೆ ಕೇಳಿಸಿಕೊಳ್ಳುವುದರ ಮೇಲೆ ಧ್ವನಿಗಳು ತಮ್ಮನ್ನು ಹೇರುವುದಿಲ್ಲ, ಅಲ್ಲಿ ಪ್ರಜ್ಞೆಯ ಒಂದು ಚಲನೆ ಇದೆ, ಅದು ಕೆಲವು ವಿಷಯಗಳು ಗ್ರಹಿಕೆಗೆ ಬರುವಂತೆ ಮಾಡುತ್ತದೆ. ಇತರ ವಿಷಯಗಳು ಅಸ್ಪಷ್ಟ ಹಿನ್ನೆಲೆಯಲ್ಲಿ ಉಳಿದುಕೊಳ್ಳುವಂತೆ ಮಾಡುತ್ತದೆ. ...

ಉದಾಹರಣೆಗೆ, ತಿನ್ನುವ ಕ್ರಿಯೆ ಬಹಳ ವಿಚಿತ್ರವಾಗಿದೆ... ಅದು ಯಾರೋ ಒಬ್ಬರು ದೇಹದತ್ತ ನೋಡುತ್ತಿರುವ ಹಾಗಿರುತ್ತದೆ.., ಅದು ನಿಖರವಾದ, ನಿಶ್ಚಿತವಾದ ಏನೋ ಒಂದಲ್ಲ, ಆದರೆ ಒಟ್ಟಿಗೆ ಹಿಡಿದುಕೊಂಡಿರುವ ಒಂದು ವಿವಿಧ ವಸ್ತುಗಳ ಮಿಶ್ರಣದ ಹಾಗಿರುತ್ತದೆ, ಮತ್ತು ಸಂಭವಿಸುತ್ತಿರುವ ಏನೋ ಒಂದನ್ನು ನೋಡುತ್ತ ಇರುವ ಹಾಗಿರುತ್ತದೆ! ಇಲ್ಲ, ಅದು ನಿಜವಾಗಿ ಬಹಳ ವಿಚಿತ್ರ ಸ್ಥಿತಿ. ಇಂದು ಅದು ಬಹಳ ಬಲವತ್ತರವಾಗಿತ್ತು, ಅದು ಇಡೀ ಪ್ರಜ್ಞೆಯ ಮೇಲೆ ತನ್ನ ಪ್ರಾಬಲ್ಯವನ್ನು ಇರಿಸಿತ್ತು. ಮತ್ತು ಅಲ್ಲಿ ಕೆಲವೊಂದು ಕ್ಷಣಗಳಿರುತ್ತವೆ ಆಗ ಅತ್ಯಲ್ಪ ವಿಷಯ ಕೂಡ ಅದರೊಂದಿಗಿರುವ ಸಂಪರ್ಕ ಕಳೆದು ಹೋಗುವ ಹಾಗೆ ಮಾಡುತ್ತದೆ (ಸಂಪರ್ಕ ಕಳೆದು ಹೋಗುವುದರ ಸಂಜ್ಞೆ, ದೇಹದೊಂದಿಗಿರುವ ಕೊಂಡಿ ಮುರಿದು ಹೋಗುವಂತಹದು). ಮತ್ತು ಬಹಳ ನಿಶ್ಚಲವಾಗಿ ಮತ್ತು ಉದಾಸೀನವಾಗಿ ಉಳಿದುಕೊಂಡಾಗ ಮಾತ್ರ ಅದು ಮುಂದುವರಿದುಕೊಂಡು ಹೋಗಬಲ್ಲದು.

**(CWM, 10/223–25)**

*




**ದೇಹದ ಸಂಪೂರ್ಣ ಶರಣಾಗತಿ**

ಈ ಅನುಭವಗಳು ಬರುವುದಕ್ಕಿಂತ ಮೊದಲು ಒಂದು ಬಗೆಯ ಬಹಳ ನಿಕಟವಾದ ಮತ್ತು ಬಹಳ ಆಂತರಿಕವಾಗಿ ಹತ್ತಿರವಿರುವ ಪರಮೋಚ್ಚ ದೈವೀ ಸಾನ್ನಿಧ್ಯವಿರುತ್ತದೆ, ಅದು "ಯಾವುದಕ್ಕಾದರೂ ನೀನು ತಯಾರಾಗಿರುವೆಯಾ?" ಎಂಬ ಸೂಚನೆಯನ್ನು ಕೊಡುತ್ತದೆ. ಸ್ವಾಭಾವಿಕವಾಗಿ "ಯಾವುದಕ್ಕಾಗಿಯೇ ಆಗಲಿ ತಯಾರಾಗಿದ್ದೇನೆ" ಎಂದು ನಾನು ಉತ್ತರ ಕೊಡುತ್ತೇನೆ. ಮತ್ತು ಆ ಸಾನ್ನಿಧ್ಯ ಎಷ್ಟೊಂದು ಅದ್ಭುತವಾಗಿ ಗಾಢವಾಗುತ್ತದೆಂದರೆ ಅಲ್ಲಿ ಇಡೀ ಸತ್ತೆಯಲ್ಲಿ ಒಂದು ಬಗೆಯ ದಾಹವಿರುತ್ತದೆ: ಅದು ಆ ರೀತಿಯಲ್ಲಿ ಸತತ ಇರಬೇಕೆಂಬುದರ ದಾಹ. ಕೇವಲ 'ತತ್' ಅಸ್ತಿತ್ವದಲ್ಲಿದೆ, ಮತ್ತು ಅದು ಅಸ್ತಿತ್ವದಲ್ಲಿರುವುದಕ್ಕೆ ಏನೋ ಒಂದು ಕಾರಣವಿರುತ್ತದೆ. ಅದರ ಮಧ್ಯೆ ಸೂಚನೆಯೊಂದು ಬರುತ್ತದೆ: "ಯಾವುದಕ್ಕಾದರೂ ನೀನು ಸಿದ್ಧಳಾಗಿರುವೆಯಾ?"

**(CWM, 10/225–26)**

*



ನಿನ್ನ ಸಂಕಲ್ಪ ಈಡೇರಲಿ, ನನ್ನದಲ್ಲ
ನೀನು ಸಂಕಲ್ಪಿಸಿದ ಹಾಗೆ
ಎಲ್ಲ ಕಾಲಕ್ಕೂ ನಾನು ನಿನ್ನವಳೇ ಆಗಿರುವೆ.

**(CWM, 14/303)** – ಶ್ರೀಮಾತೆ

*

**ಪರಮೋಚ್ಚನಿರುವನೆಂದಾಗಿ ಈ ದೇಹ ಜೀವಿಸುತ್ತಿದೆ**

ಅದು ಸಂಕ್ರಮಣದ ಸ್ಥಿತಿ.

ಪ್ರಜ್ಞೆಯ ದೃಷ್ಟಿಕೋನದಿಂದ ಅದು ಬಹಳ ಪ್ರಚಂಡವಾದ ಲಾಭ! ಏಕೆಂದರೆ ಪ್ರತಿಯೊಂದು ಬಂಧನ, ಬಾಹ್ಯ ವಸ್ತು–ವಿಷಯಗಳಿಗೆ ಪ್ರತಿಯೊಂದು ಅಂಟಿಕೊಳ್ಳುವಿಕೆ ಅದೆಲ್ಲವೂ ಮುಕ್ತಾಯಗೊಂಡಿದೆ. ಅದು ಸಂಪೂರ್ಣವಾಗಿ ಕಳಚಿ ಹೋಗಿದೆ: ಪರಿಪೂರ್ಣ ಸ್ವಾತಂತ್ರ್ಯವಿದೆ, ಎಂದರೆ ಕೇವಲ 'ತತ್' ಇದೆ – ಪರಮೋಚ್ಚ ದೈವೀ ಪ್ರಭು ಯಜಮಾನನಾಗಿದ್ದಾನೆ. ಈ ದೃಷ್ಟಿಕೋನದಿಂದ ಅದು ಕೇವಲ ಲಾಭವಾಗಬಲ್ಲದು. ಅದು ಎಷ್ಟೊಂದು ಮೂಲಭೂತ ಸಿದ್ಧಿಯಾಗಿದೆ ... ಇದು ಪರಿಪೂರ್ಣ ಸ್ವಾತಂತ್ರ್ಯ. ಪೃಥ್ವಿಯ ಮೇಲೆ ಸಾಮಾನ್ಯ ಜೀವನ ನಡೆಸುತ್ತಿರುವಾಗ ಸಿದ್ಧಿಸಿಕೊಳ್ಳಲು ಅಸಾಧ್ಯ ಎಂದು ಪರಿಗಣಿಸಲಾದ ಏನೋ ಒಂದು.

ಮನುಷ್ಯ ದೇಹದ ಮೇಲೆ ಇನ್ನು ಮುಂದೆ ಅವಲಂಬಿಸದೆ ಇದ್ದಾಗ ಆಗುವ ಅನುಭವ, ಅವನ ಉಚ್ಚತರ ಭಾಗಗಳಲ್ಲಿ ಆಗುವ ಪರಿಪೂರ್ಣ ಸ್ವಾತಂತ್ರ್ಯದ ಅನುಭವಕ್ಕೆ ಅನುಗುಣವಾಗಿರುತ್ತದೆ. ಗಮನಾರ್ಹವಾದುದೇನೆಂದರೆ – ನಾನು ಇದರ ಮೇಲೆ ಹೆಚ್ಚು ಒತ್ತುಕೊಟ್ಟು ಹೇಳುತ್ತೇನೆ – ದೇಹದ ಪ್ರಜ್ಞೆಗೆ ಈ ಅನುಭವಗಳಾಗುತ್ತಿವೆ, ಅದಿನ್ನೂ ಇಲ್ಲಿ ಗೋಚರವಾಗುತ್ತಿದೆ!

ಸ್ಪಷ್ಟವಾಗಿ ಮಾನವ ಸತ್ತೆಗಳಿಗೆ "ಜೀವನದಲ್ಲಿ ಆತ್ಮವಿಶ್ವಾಸ"ವನ್ನು ನೀಡುವಂತಹದು ಬೇರೆ ಏನೂ ಉಳಿದಿಲ್ಲ. ತೋರಿಕೆಗೆ ಇನ್ನು ಮುಂದೆ ಬಾಹ್ಯ ಜಗತ್ತಿನಿಂದ ಯಾವ ಆಧಾರವೂ ಇಲ್ಲ, ಅಲ್ಲಿ ಪರಮೋಚ್ಚ ಸಂಕಲ್ಪದ ಹೊರತಾಗಿ ಬೇರೇನೂ ಇಲ್ಲ. ಇದನ್ನು ಸರಳ ಶಬ್ದಗಳಲ್ಲಿ ತರ್ಜುಮೆ ಮಾಡಿ ಹೇಳುವುದಾದರೆ ಪರಮೋಚ್ಚ ಪ್ರಭು ಈ ದೇಹ ಬದುಕಲಿ ಎಂದು ಬಯಸುತ್ತಾನೆಂದಾಗಿ ಅದು ಜೀವಿಸುತ್ತಿದೆ ಎಂಬ ಭಾವನೆ ಅದಕ್ಕೆ ಬರುತ್ತಿದೆ, ಹಾಗಿಲ್ಲದಿದ್ದರೆ ಅದು ಬದುಕಲಾರದು.

**(CWM, 10/226–27)**

*

**ಅಲ್ಲಿ ಒಂದೇ ದೇಹವಿದೆ**

ಕಳೆದ ಕೆಲವು ದಿನಗಳಲ್ಲಿ ನಿನ್ನೆ ಹಾಗೂ ಮೊನ್ನೆಯ ದಿನ ಸಂಪೂರ್ಣವಾಗಿ ವಿಕೇಂದ್ರೀಕರಣಗೊಂಡಿದ್ದ ಪ್ರಜ್ಞೆಯಿರುವ ಅನುಭವವಾಯಿತು. (ನಾನು ಯಾವಾಗಲೂ ಭೌತಿಕ ಪ್ರಜ್ಞೆ ಕುರಿತು ಮಾತನಾಡುತ್ತೇನೆ, ಉಚ್ಚತರ ಪ್ರಜ್ಞೆ ಕುರಿತು ಮಾತನಾಡುವುದಿಲ್ಲ) ಇಲ್ಲಿ ಸಂಭವಿಸಿದ ವಿಕೇಂದ್ರೀಕರಣಗೊಂಡ ಪ್ರಜ್ಞೆ, ಅದು ಇಲ್ಲಿ, ಅಲ್ಲಿ, ಈ ದೇಹದಲ್ಲಿ, ಆ ದೇಹದಲ್ಲಿ (ಜನರು ಈ ವ್ಯಕ್ತಿಯಲ್ಲಿ ಮತ್ತು ಆ ವ್ಯಕ್ತಿಯಲ್ಲಿ ಎಂದು ಕರೆಯುವ ರೀತಿಯಲ್ಲಿತ್ತು, ಆದರೆ ಈ ವಿಚಾರ ಬಹಳಷ್ಟು ರೀತಿಯಲ್ಲಿ ಇನ್ನು ಮುಂದೆ ಅಸ್ತಿತ್ವದಲ್ಲಿರುವುದಿಲ್ಲ.) ನಂತರ ಜೀವಕೋಶಗಳನ್ನು ಕುರಿತು ವಿಶ್ವಂಭರ ಪ್ರಜ್ಞೆಯ ಮಧ್ಯ ಪ್ರವೇಶಿಸುವಿಕೆ ಇತ್ತು, ಅದು ಜೀವಕೋಶಗಳಿಗೆ ಅವು ಯಾವ ಕಾರಣಕ್ಕಾಗಿ ಈ ಜೋಡಣೆಯನ್ನು ಇಲ್ಲವೆ ಒಟ್ಟುಗೂಡಿ ಗುಡ್ಡೆಯಾದುದನ್ನು ಕಾಪಾಡಿಕೊಂಡು ಬಂದಿವೆ ಎಂದು ಅವುಗಳನ್ನು ಕೇಳುತ್ತಿರುವಂತಿತ್ತು. ನಿಜವಾಗಿ ಹಲವಾರು ವರ್ಷಗಳಿಂದ ಬರುತ್ತಿದ್ದ ತೊಂದರೆಗಳು ಎಂದರೆ ಹರಕಲಾಗುವಿಕೆ, ಬಾಹ್ಯದಿಂದ ಬರುವ ಘರ್ಷಣೆ ಹಾಗೂ ಉಪಯೋಗಿಸುವಿಕೆ ಇವುಗಳಿಂದ ಬರುವ ತೊಂದರೆಗಳನ್ನು ಕುರಿತು ಜೀವಕೋಶಗಳು ಅರಿತುಕೊಳ್ಳುವಂತೆ ಇಲ್ಲವೆ ಭಾವನೆಗೆ ತಂದುಕೊಳ್ಳುವಂತೆ ಮಾಡಲಾಯಿತು – ಆದರೆ ಅದು ಅವುಗಳಿಗೆ ಮಹತ್ವದ್ದೆಂದು ಅನಿಸಲಿಲ್ಲ. ಅವು ನೀಡಿದ ಉತ್ತರ ಸ್ವಾರಸ್ಯಕರವಾಗಿತ್ತು; ಅದು ಯಾವ ಅರ್ಥದಲ್ಲಿತ್ತೆಂದರೆ ಉಚ್ಚತರ ದೈವೀ ಶಕ್ತಿಯೊಂದಿಗೆ ಪ್ರಜ್ಞಾಪೂರ್ಣ ಸಂಪರ್ಕ ಇರಿಸಿಕೊಳ್ಳಲು ಬೇಕಾದ ಕ್ಷಮತೆಯ ಹೊರತಾಗಿ ಬೇರೆ ಯಾವುದಕ್ಕೂ ಅವು ಮಹತ್ವ ನೀಡಲಿಲ್ಲ. ಅದೊಂದು ಅಭೀಪ್ಸೆಯ ರೂಪದಲ್ಲಿತ್ತು (ಸ್ವಾಭಾವಿಕವಾಗಿ ಶಬ್ದಗಳಲ್ಲಿ ರೂಪು ಕೊಟ್ಟಿದ್ದಲ್ಲ) ದೈವೀ ಶಕ್ತಿ, ದೈವೀ ಸಾಮರಸ್ಯ, ದೈವೀ ಸತ್ಯದ ಶಕ್ತಿ, ದೈವೀ ಪ್ರೇಮದ ಶಕ್ತಿ ಇವೆಲ್ಲವುಗಳಿಗಾಗಿ ಅದೊಂದು ಹಾತೊರೆತವಾಗಿತ್ತು. ಮತ್ತು ಆ ಕಾರಣದಿಂದಾಗಿ ಅವು ಸದ್ಯದ ಜೋಡಣೆಯನ್ನು ಮೆಚ್ಚಿಕೊಳ್ಳುತ್ತವೆ.

**(CWM, 11/4)** **– ಶ್ರೀಮಾತೆ**

*

ಪೃಥ್ವಿ ಪ್ರಜ್ಞೆಯಲ್ಲಿ ಭೌತದ್ರವ್ಯದಿಂದ ಮೊದಲುಗೊಂಡು ಪ್ರಕಟಣೆಯಲ್ಲಿ ಅತಿಮನಸ್ಸನ್ನು ಪ್ರಕಟಿಸುವುದಕ್ಕೆ ನಾವು ಕೈಕೊಳ್ಳುತ್ತಿರುವುದೆಲ್ಲವೂ ಅರ್ಥ ನೀಡುತ್ತದೆ. ಹಾಗಾಗಿ ಅದು ನನ್ನ ಹಾಗೂ ಶ್ರೀಮಾತೆಯವರ ಭೌತಿಕಕ್ಕಾಗಿ ಮಾತ್ರ ಕೈಕೊಂಡದ್ದಲ್ಲ.

**(CWSA, 32/93)** **– ಶ್ರೀ ಅರವಿಂದರು**

*

ನನ್ನನ್ನು ವೇದನೆಗೆ ಒಳಪಡಿಸಿರದ ಯಾವ ರೋಗವೂ ಇಲ್ಲ. ಎಲ್ಲ ರೋಗಗಳು ನನ್ನ ದೇಹದಲ್ಲಿ ಬರುವಂತೆ ಮಾಡಿದ್ದೆ, ಅವು ಮುಂದು–ವರಿದುಕೊಂಡು ಹೋಗುವ ರೀತಿ, ನೀಡುವ ಅನುಭವ ಇವುಗಳ ಬಗ್ಗೆ ನಾನು ಜ್ಞಾನ ಪಡೆಯಬೇಕಾಗಿತ್ತು, ಅದರಿಂದಾಗಿ ನಾನು ಅವುಗಳ ಮೇಲೆ ಕಾರ್ಯ ಕೈಕೊಳ್ಳಲು ಶಕ್ತಳಾಗುವಂತೆ ಆಗಬೇಕಾಗಿತ್ತು. ನನ್ನ ಭೌತಿಕಕ್ಕೆ ಭಯ ಎಂಬುದು ಇಲ್ಲದೆ ಇರುವುದರ ಕಾರಣದಿಂದಾಗಿ ಮತ್ತು ಅದು ಉಚ್ಚತರ ಒತ್ತಡಕ್ಕೆ ಪ್ರತಿಸ್ಪಂದಿಸುವುದರಿಂದಾಗಿ ಅವುಗಳನ್ನು ತೊಡೆದು ಹಾಕುವುದು ನನಗೆ ಹೆಚ್ಚು ಸುಲಭವಾಗಿತ್ತು.

*

ಪರಮೋಚ್ಚ ದೈವೀ ಪ್ರಭುವಿಗೆ ದೇಹ ಹೇಳುತ್ತದೆ: "ನಾನು ಏನಾಗಬೇಕೆಂದು ನೀನು ಬಯಸುವಿಯೋ ಅದಾಗುವೆ, ನಾನೇನನ್ನು ತಿಳಿದುಕೊಳ್ಳಬೇಕೆಂದು ನೀನು ಬಯಸುವಿಯೋ ನಾನು ಅದನ್ನು ತಿಳಿದುಕೊಳ್ಳುತ್ತೇನೆ, ನಾನೇನನ್ನು ಕೈಕೊಳ್ಳಬೇಕೆಂದು ನೀನು ಬಯಸುವೆಯೋ ನಾನದನ್ನು ಕೈಕೊಳ್ಳುವೆ."

**(CWM, 13/54–59)** **– ಶ್ರೀಮಾತೆ**

*

## ದೈವೀ ಸಾಮರ್ಥ್ಯದ ವರ್ಗಾವಣೆ

### ಮೃತ್ಯು ಅಸ್ತಿತ್ವದಲ್ಲಿಲ್ಲ

ದಿನಾಂಕ ಹದಿನೈದರಿಂದ ಪರಿವರ್ತನೆಗಾಗಿ ತಯಾರಿ ಮಾಡುವ ಇಡೀ ಕಾರ್ಯವಿತ್ತು. ಅದನ್ನು ಏನೆಂದು ಕರೆಯಬಹುದು? – ದೈವೀ ಸಾಮರ್ಥ್ಯದ ವರ್ಗಾವಣೆ.

ಅದು ನಿರ್ದೇಶನ ಮಾಡುವ ಸಂಕಲ್ಪವನ್ನು ಸ್ಥಾನಾಂತರ ಮಾಡುವ ರೀತಿಯದಾಗಿದೆ. ಮತ್ತು ಅಲ್ಲಿ ಪ್ರಾಪಂಚಿಕವಾಗಿ, ಭೌತಿಕವಾಗಿ ಅದು ಒಂದು ಆಶ್ಚರ್ಯಕಾರಕ ವಿಷಯವಾಗಿದೆ, ಮತ್ತು ಅಲ್ಲಿ ಹೊಸ ನಿರ್ದೇಶನದೊಂದಿಗೆ ಗುರುತಿಸಿಕೊಳ್ಳುವ ಆವಶ್ಯಕತೆ ಇದೆ. – ಅದು ಸ್ವಲ್ಪ ಕಠಿಣವಾದದ್ದು. ವಿವರಿಸುವುದಕ್ಕೂ ಕೂಡ ಕಠಿಣವಾಗಿದೆ. ಇನ್ನು ಮುಂದೆ ನೀವು ಕಾರ್ಯಕೈಕೊಳ್ಳುವಂತೆ ಮಾಡುವುದು ಅದೇ ವಿಷಯ ಆಗಿರುವುದಿಲ್ಲ – "ಕ್ರಿಯೆ ಕೈಕೊಳ್ಳುವುದು" ಇದರ ಅರ್ಥ ಎಲ್ಲವೂ ಆಗಿದೆ, ಚಲಿಸುವುದು ನಡೆದಾಡುವುದು ಹೀಗೆ ಎಲ್ಲವೂ ಆಗಿದೆ, ನೀವು ಕಾರ್ಯಕೈಕೊಳ್ಳುವಂತೆ ಮಾಡುವುದು ಇನ್ನು



ಮುಂದೆ ಅದೇ ಕೇಂದ್ರವಾಗಿರುವುದಿಲ್ಲ. ಮತ್ತು ನಂತರ ರೂಢಿಯ ಮೂಲಕ ಹಳೆಯ ಕೇಂದ್ರಕ್ಕೆ ಅಂಟಿಕೊಳ್ಳಲು ನೀವು ಪ್ರಯತ್ನಿಸಿದರೆ, ಓಹ್! ಅದು ಭವ್ಯ ರೀತಿಯ ಅಸ್ತವ್ಯಸ್ತತೆಯನ್ನು ಉಂಟುಮಾಡುತ್ತದೆ ಮತ್ತು ನೀವು ರೂಢಿಗೆ, ಅನುವು ಮಾಡಿಕೊಡದೆ ಇರುವುದಕ್ಕೆ ಬಹಳ ಕಾಳಜಿ ವಹಿಸಬೇಕು, ಹಳೆಯ ರೂಢಿಗೆ ತನ್ನನ್ನು ಅಭಿವ್ಯಕ್ತಪಡಿಸಲು, ಪ್ರಕಟಿಸಲು ಅನುವು ಮಾಡಿಕೊಡಬಾರದು.

(ಮೌನ)

ಇಂದು ಮುಂಜಾನೆ, ಉದಾಹರಣೆಗೆ, ಹಲವಾರು ಸಲ, ಕೆಲ ಕಾಲದವರೆಗೆ (ಎಷ್ಟು ಕಾಲದವರೆಗೆ ಎಂಬುದು ನನಗೆ ತಿಳಿಯದು, ಕಾಲು ಗಂಟೆಯ ಕಾಲ, ಅರ್ಧ ಗಂಟೆಯ ಕಾಲ ಆಗಿರಬಹುದು, ನನಗೆ ಅದು ತಿಳಿಯದು), ದೇಹದ ಜೀವಕೋಶಗಳು, ಎಂದರೆ ದೇಹದ ರೂಪ ಇದಕ್ಕೆ ಆದ ಅನುಭವ ಹೀಗಿದೆ: ಒಟ್ಟಾಗಿ ಉಳಿದುಕೊಳ್ಳುವುದು ಇಲ್ಲವೆ ಕರಗಿ ಹೋಗುವುದು ಒಂದು ಮನೋಭಾವದ ಮೇಲೆ ಅವಲಂಬಿಸಿದೆ – ಮನೋಭಾವ ಇಲ್ಲವೆ ಸಂಕಲ್ಪ ಹಾಗೂ ಮನೋಭಾವ ಇವೆರಡರ ಏನೋ ಒಂದು. ಒಂದು ವಿಷಯ ಹೆಚ್ಚಾಗಿ ನೆನಪಿನದು, ಇನ್ನೊಂದು ಜೀವಿಸಿದ್ದ ವಿಷಯ, ಕೆಲವೊಮ್ಮೆ ಬಹುಮಟ್ಟಿಗೆ ಅವೆರಡೂ ಇರುವುದರ ಗ್ರಹಿಕೆ ಇತ್ತು. ಅದು ನೀವು ಚಲಿಸುವಂತೆ, ಕಾರ್ಯ ಕೈಕೊಳ್ಳುವಂತೆ, ತಿಳಿದುಕೊಳ್ಳುವಂತೆ ಮಾಡುವಂತಹದು: ಹಳೆಯ ರೀತಿ ನೆನಪಿನದು, ಮತ್ತು ಹೊಸ ರೀತಿಯಲ್ಲಿ, ಸ್ಪಷ್ಟವಾಗಿ, ನೀವು ಆಯ್ದುಕೊಳ್ಳದೆ ಇದ್ದರೆ ಕರಗಿಹೋಗುವ ಆವಶ್ಯಕತೆ ಇರುವುದಿಲ್ಲ – ಅದಕ್ಕೆ ಅರ್ಥವಿಲ್ಲ, ಅದು ಅರ್ಥವಿಲ್ಲದ ವಿಷಯ; ಕರಗಿ ಹೋಗುವುದೇಕೆ?

ಮನುಷ್ಯ ಗತಕಾಲವನ್ನು ಮರಳಿ ನೆನಪಿಗೆ ತಂದುಕೊಂಡಾಗ – ನಿಖರವಾಗಿ ಅದಲ್ಲ – ಹಳೆಯ ಪ್ರಜ್ಞೆ ಮರಳಿ ಮೇಲ್ಭಾಗಕ್ಕೆ ಬಂದಾಗ ಅವನು ಕಾಳಜಿಪೂರ್ವಕವಾಗಿ ಉಳಿದುಕೊಂಡಿರದೆ ಇದ್ದರೆ ಅದು ಸ್ವಾಭಾವಿಕವಾಗಿ ಮೂರ್ಛೆಯ ಸ್ಥಿತಿಯನ್ನು ಉತ್ಪಾದಿಸುತ್ತದೆ. ಅಂತಹ ಒಂದು ಸ್ಥಿತಿಯಲ್ಲಿ ಅದು ದೀರ್ಘಕಾಲದ್ದಾಗಿತ್ತು, ಐದರಿಂದ ಐದೂ ಮುಕ್ಕಾಲು ಗಂಟೆಯವರೆಗೆ ಅದು ಆ ರೀತಿಯದಾಗಿತ್ತು. ಅದು ಒಂದೇ ಕಾಲಕ್ಕೆ ಜೀವನಕ್ಕೆ ನೈಜತೆ ಇಲ್ಲ ಎಂಬುದರ ಹಾಗೂ ಸನಾತನವಾದ ನೈಜತೆ ಎಂದು ಕರೆಯಬಹುದಾದುದರ ಭಾವನೆ ತಂದುಕೊಡುತ್ತದೆ: ಮೃತ್ಯುವಿನ ಭಾವನೆ ಅಸ್ತಿತ್ವದಲ್ಲಿರುವುದಿಲ್ಲ, ಅದಕ್ಕೆ ಯಾವ ಅರ್ಥವೂ ಇಲ್ಲ, ಅದು ಕೇವಲ ಆಯ್ಕೆ ಮಾಡಿಕೊಳ್ಳುವುದಾಗಿದೆ. ಮತ್ತು ಸ್ಥಾನ

ಪಲ್ಲಟ, ಅದಕ್ಕೆ ಯಾವ ಅರ್ಥವೂ ಇಲ್ಲ, ಅದು ಅಲ್ಲಿರುವುದಕ್ಕೆ ಕಾರಣವಿಲ್ಲ, ಅದೊಂದು ಕಲ್ಪನಾ ಚಿತ್ರ (fantasy) ....

ಆದರೆ ಆರಂಭಿಸುವ ಸಾಮರ್ಥ್ಯದ ಈ ಬದಲಾವಣೆ, ಅದನ್ನು ಹಾಗೆ ಹೇಳುವುದಾದರೆ, ಸಾಮರ್ಥ್ಯದ ಈ ವರ್ಗಾವಣೆ ಅನನ್ಯವಾದ ಅನುಭವದ ಪರಿಣಾಮ ಬೀರಿತ್ತು. ಅಂತಹದು, ಹಿಂದೆಂದೂ ಸಂಭವಿಸಿರಲಿಲ್ಲ. ದುರ್ದೈವ–ದಿಂದಾಗಿ ಅದು ಬಹಳ ಕಾಲ ಉಳಿದುಕೊಳ್ಳಲಿಲ್ಲ. ಆದರೆ ಆ ಅನುಭವ ದೇಹದಲ್ಲಿ ಒಂದು ಬಗೆಯ ನಿಶ್ಚಿತತೆ ಉಳಿದುಕೊಳ್ಳುವಂತೆ ಮಾಡಿದೆ – ಅದು ಭವಿಷ್ಯತ್ತಿನ ಬಗ್ಗೆ ಕಡಿಮೆ ಅನಿಶ್ಚಿತವಾದದ್ದನ್ನಾಗಿ ಮಾಡಿದೆ. "ಅದು ಹಾಗಾಗಲಿದೆ" ಎಂದು ಹೇಳುವುದಕ್ಕೆ ಬಂದಿತ್ತು.

ಅದು ಉಳಿದುಕೊಂಡರೆ ಅದು ಅಮರತ್ವ ಎಂಬುದು ಸ್ಪಷ್ಟವಾಗಿರುತ್ತದೆ.

**(CWM, 11/16–18)**

*

**ಸಾಮರ್ಥ್ಯದ ವರ್ಗಾವಣೆಯ ಸಂಧಿಕಾಲದ ಅವಧಿ**

ಅತ್ಯಂತ ದೊಡ್ಡ ತೊಂದರೆ ನರಗಳಲ್ಲಿದೆ, ಏಕೆಂದರೆ ಅವು ಸಾಮಾನ್ಯ ಪ್ರಜ್ಞೆಯ ಸಂಕಲ್ಪಕ್ಕೆ ಎಷ್ಟೊಂದು ರೂಢಿಸಿಕೊಂಡಿರುತ್ತವೆ ಎಂದರೆ, ಅದು ನಿಂತು ಹೋದಾಗ ಮತ್ತು ಅತ್ಯುಚ್ಚವಾದುದರಿಂದ ನೇರವಾದ ದೈವೀಕ್ರಿಯೆಗಾಗಿ ಕೇಳಿಕೊಂಡಾಗ ಅವುಗಳಿಗೆ ಹುಚ್ಚು ಹಿಡಿದಂತಾಗುತ್ತದೆ, ಇತ್ತೀಚೆಗೆ ನನಗೆ ಈ ಅನುಭವವಾಯಿತು, ಅದು ಒಂದು ಗಂಟೆಗಿಂತಲೂ ಹೆಚ್ಚಿನ ಕಾಲ ಉಳಿದುಕೊಂಡಿತ್ತು ಮತ್ತು ಅದು ತೊಂದರೆದಾಯಕವಾಗಿತ್ತು. ಆದರೆ ಇದು ನನಗೆ ಬಹಳಷ್ಟು ವಿಷಯಗಳನ್ನು ಕಲಿಸಿಕೊಟ್ಟಿತು. ಮತ್ತು ಇದೆಲ್ಲವನ್ನು ಸಾಮರ್ಥ್ಯದ ವರ್ಗಾವಣೆ ಎಂದು ಕರೆಯಬಹುದಾಗಿದೆ. ಮೊದಲಿನ ಸಾಮರ್ಥ್ಯ ಹಿಂದೆಗೆದು ಹೋಗುತ್ತದೆ ಮತ್ತು ಈ ಹೊಸ ಸಾಮರ್ಥ್ಯದೊಡನೆ ದೇಹ ಹೊಂದಾಣಿಕೆ ಮಾಡಿಕೊಳ್ಳುವವರೆಗೆ ವಿಷಮ ಪರಿಸ್ಥಿತಿ ಇರುವ ಅವಧಿ ಇರುತ್ತದೆ. ಎಲ್ಲ ಜೀವಕೋಶಗಳು ಸತತ ಅಭೀಪ್ಸೆ ಹೊಂದಿರುವ ಸ್ಥಿತಿಯಲ್ಲಿ ಇರುವುದರಿಂದ ಅದು ಸಾಪೇಕ್ಷವಾಗಿ ತೀವ್ರಗತಿಯಿಂದ ಸಾಗುತ್ತದೆ. ಆದರೆ ಅದೇನೇ ಆಗಿದ್ದರೂ ನಿಮಿಷಗಳು ದೀರ್ಘವಾಗಿರುವಂತೆ ತೋರಿಬರುತ್ತದೆ.

ಸಂಭವಿಸುವುದು ಏನೇ ಆಗಿರಲಿ, ಈ ಪರಿವರ್ತನೆಯ ಮತ್ತು ಸಾಮರ್ಥ್ಯವನ್ನು ನಿರ್ದೇಶಿಸುವುದರ ವರ್ಗಾವಣೆ ಇವುಗಳ ದೃಷ್ಟಿಕೋನದಿಂದ ಜೀವಕೋಶಗಳಲ್ಲಿ



ಹೆಚ್ಚು ಹೆಚ್ಚಾಗಿ ಒಂದು ಬಗೆಯ ನಿಶ್ಚಿತತೆ ಇರುತ್ತದೆ. ಪ್ರಾಪಂಚಿಕವಾಗಿ ವೇದನಾಪೂರ್ಣವಾದ (ಭೌತಿಕವಾಗಿ ಅಲ್ಲ) ಸಮಯದಲ್ಲಿ ಜೀವಕೋಶಗಳು ಈ ನಿಶ್ಚಿತತೆಯನ್ನು ಇಟ್ಟುಕೊಂಡಿರುತ್ತವೆ. ಮತ್ತು ನಂತರ ಅವು ಪ್ರತಿರೋಧ ಒಡ್ಡುತ್ತವೆ, ಈ ನಿಶ್ಚಿತತೆಯೊಂದಿಗೆ ಖಿನ್ನತೆ ಇಲ್ಲದೆ, ಯಾವುದೇ ರೀತಿಯ ಪರಿಣಾಮಕ್ಕೆ ಒಳಪಡದೆ ಸಹಿಸಿಕೊಳ್ಳುತ್ತವೆ, ಆ ನಿಶ್ಚಿತತೆ ಪರಿವರ್ತನೆಗಾಗಿ, ಪರಿವರ್ತನೆಯ ಹಾಗೂ ನಿರ್ದೇಶಿಸುವ ಸಾಮರ್ಥ್ಯದ ವರ್ಗಾವಣೆಯ ವಿಧಾನಕ್ಕಾಗಿ ತಯಾರು ಮಾಡಿಕೊಳ್ಳುವುದಕ್ಕಾಗಿ ಇರುತ್ತದೆ. ನಾನು ಹೇಳಿದ ಹಾಗೆ ನರಗಳಲ್ಲಿ ಆ ಅನುಭವ ಬಹಳ ವೇದನಾಪೂರ್ಣವಾಗಿರುತ್ತದೆ – ಏಕೆಂದರೆ ಸ್ವಾಭಾವಿಕವಾಗಿ ಅವು ಅತ್ಯಂತ ಸೂಕ್ಷ್ಮ ಹಾಗೂ ತೀಕ್ಷ್ಣ ಸಂವೇದನೆ ಇರುವ ಜೀವಕೋಶಗಳು. ಆದರೆ ಅವುಗಳಲ್ಲಿ ಗಮನಾರ್ಹ, ಸ್ವಯಂಪ್ರೇರಿತವಾಗಿ ಬಲವತ್ತರವಾದ ಗ್ರಹಣಶಕ್ತಿ ಸಾಮರಸ್ಯದಿಂದಿರುವ ಭೌತಿಕ ಕಂಪನಗಳಿಗಾಗಿರುತ್ತದೆ (ಅದು ಅಪರೂಪಕ್ಕೆ ಕಂಡುಬರುವಂತಹದು ಆದಾಗ್ಯೂ ಕೆಲವು ವ್ಯಕ್ತಿಗಳಲ್ಲಿ ಅದು ಅಸ್ತಿತ್ವದಲ್ಲಿರುತ್ತದೆ) ಈ ಭೌತಿಕ ಕಂಪನವನ್ನು ಭೌತಿಕ ಶಕ್ತಿ ಎಂದು ಕರೆಯಬಹುದು, ಅದು ಸಾಮರಸ್ಯದಿಂದಿರುವ ಭೌತಿಕ ಕಂಪನ (ಸ್ವಯಂಪ್ರೇರಿತವಾಗಿ ಮಾನಸಿಕ ಕಂಪನವೊಂದರ ಆವಶ್ಯಕತೆ ಇಲ್ಲದೆ ಸಾಮರಸ್ಯದಲ್ಲಿ ಇರುವಂತಹದು, ಉದಾಹರಣೆಗೆ ಹೂವಿನಲ್ಲಿರುವಂತಹ ಕಂಪನ, ಆ ರೀತಿಯಲ್ಲಿ ಭೌತಿಕ ಕಂಪನಗಳಿರುತ್ತವೆ. ಅವು ತಮ್ಮಲ್ಲಿ ಸಾಮರಸ್ಯವಿರುವ ಶಕ್ತಿಯನ್ನು ಕೊಂಡೊಯ್ಯುತ್ತವೆ.) – ನರಗಳು ಬಹಳ ಸೂಕ್ಷ್ಮ ಸಂವೇದನೆಯನ್ನು ಹೊಂದಿರುತ್ತವೆ ಮತ್ತು ಈ ಕಂಪನವನ್ನು ಗ್ರಹಿಸುವ ಶಕ್ತಿ ಅವುಗಳಲ್ಲಿರುತ್ತದೆ, ಅದು ಅವುಗಳನ್ನು ಕೂಡಲೆ ಸರಿಯಾಗಿರಿಸುತ್ತದೆ.

**(CWM, 11/20–21)**

*

**ಪ್ರಜ್ಞೆಗೆ ಪ್ರತಿಯಾಗಿ ಬೇರೊಂದನ್ನು ತರುವುದು ಮತ್ತು ಹೊಸ ಕಾರ್ಯವಿಧಾನ**

ಪ್ರಜ್ಞೆಗೆ ಪ್ರತಿಯಾಗಿ ಬೇರೊಂದನ್ನು ತರುವುದನ್ನು ಕುರಿತು ನಾನು ವಿವರಿಸಿ ಹೇಳಿದ ಹಾಗೆ ವಿಧಿವತ್ತಾಗಿ, ಮುಂದುವರಿಸಿಕೊಂಡು ಹೋಗುತ್ತ ಕೈಕೊಳ್ಳಲಾಗುತ್ತಿದೆ, ಆದರೆ ತೋರಿಕೆಗೆ ಕಂಡುಬರುವ ಹಾನಿಗಳೊಂದಿಗೆ ಇಲ್ಲವೆ ಯಾವುದೇ ಸಂದರ್ಭದಲ್ಲಿ, ಸ್ವಲ್ಪ ಕಾಲಾವಧಿಯಲ್ಲಾಗುವ ಕ್ಷಮತೆಗಳ ದೊಡ್ಡ ಪ್ರಮಾಣದ ಕುಗ್ಗುವಿಕೆಯೊಂದಿಗೆ ಕೈಕೊಳ್ಳಲಾಗುತ್ತಿದೆ. ಆದರೆ ಅದು ಕುತೂಹಲಕರ ಗೋಚರ ಸಂಗತಿ, ನೋಟ ಮತ್ತು ಕೇಳಿಸಿಕೊಳ್ಳುವಿಕೆ ಇವುಗಳೊಂದಿಗೆ ಆಗುವಂತಹದು: ಅನೇಕ ಸಲ ಅದು ಸಾಧ್ಯವಿದ್ದಷ್ಟು ಸ್ಪಷ್ಟವಾಗಿರುತ್ತದೆ, ಮತ್ತು ಅನೇಕ ಸಲ ಪೂರ್ತಿ

ಪರದೆಯ ಹಿಂದಿರುತ್ತದೆ. ಅದಕ್ಕೆ ಸ್ಪಷ್ಟವಾಗಿ ಇನ್ನೊಂದು ಮೂಲವಿದೆ – ಅದು ಇನ್ನೊಂದು ಪ್ರಭಾವದ ಮೂಲ. ನಾನು ಸ್ಪಷ್ಟವಾಗಿ ನೋಡಲು ಸಾಧ್ಯವಾಗುವುದಕ್ಕೆ ತಿಂಗಳುಗಳ ಕಾಲ ಬೇಕಾಗಬಹುದು ಎಂದು ನನಗನಿಸುತ್ತದೆ. ಯಾವುದೇ ಸಂದರ್ಭದಲ್ಲಿ ಸರ್ವಸಾಧಾರಣ ಪ್ರಜ್ಞೆ (ಶಿರದ ಮೇಲೆ ಎಂಬ ಅದೇ ಸಂಜ್ಞೆ), ಅದನ್ನು ವಿಶ್ವಂಭರ ಪ್ರಜ್ಞೆ ಎಂದು ಕರೆಯಬಹುದು (ಯಾವುದೇ ಸಂದರ್ಭದಲ್ಲಿ ಪೃಥ್ವಿಯ ಮೇಲಿರುವ ಪ್ರಜ್ಞೆ) ಒಂದು ಕ್ಷಣಕಾಲ ಕೂಡ ಚಲಿಸಿಲ್ಲ. ಅದು ಅಲ್ಲಿ ಯಾವಾಗಲೂ ಉಳಿದುಕೊಂಡಿತ್ತು ....

ಈಗ ಅದು ಕಾರ್ಯಕೈಕೊಳ್ಳುತ್ತಿದೆ. ಅದು ಸ್ವಾರಸ್ಯಕರವಾದದ್ದು.

**ಪ್ರಶ್ನೆ:** *ನಿಮ್ಮ ಗ್ರಹಿಕೆಯಲ್ಲಿ ಬದಲಾದದ್ದು ಸತ್ತೆಗಳನ್ನು ಹಾಗೂ ಘಟನೆಗಳನ್ನು ಕುರಿತಾಗಿದೆಯೆ? ನೀವು ಗ್ರಹಿಸುವ ರೀತಿಯಲ್ಲಿ ಬದಲಾವಣೆ ಆಗಿದೆಯೆ?*

**ಶ್ರೀಮಾತೆ:** ಹೌದು, ಒಟ್ಟಿನಲ್ಲಿ ಹಾಗಾಗಿದೆ. ಅದು ಬಹಳ ವಿಚಿತ್ರವಾದದ್ದು. ವಾಸ್ತವದಲ್ಲಿ ಈ ಎಲ್ಲ ಕಾಲವನ್ನು ಭೌತಿಕ ಸತ್ತೆಯ ಪ್ರಜ್ಞೆಯನ್ನು ಅಭಿವೃದ್ಧಿ–ಪಡಿಸುವುದಕ್ಕಾಗಿ ಉಪಯೋಗಿಸಲಾಗಿದೆ. ಮತ್ತು ಈ ಭೌತಿಕ ಸತ್ತೆ(ಶ್ರೀಮಾತೆಯವರು ತಮ್ಮ ದೇಹವನ್ನು ಸ್ಪರ್ಶಿಸುತ್ತಾರೆ)ಯನ್ನು, ನಿಜವಾಗಿ, ಇನ್ನೊಂದು ಪ್ರಜ್ಞೆಯನ್ನು ಹೊಂದುವುದಕ್ಕಾಗಿ ತಯಾರು ಮಾಡಲಾಗಿದೆ ಎಂದು ತೋರಿಬರುತ್ತದೆ, ಏಕೆಂದರೆ ಕೆಲವು ವಿಷಯಗಳಿವೆ: ಅದರ (ಪ್ರಜ್ಞೆಯ) ಪ್ರತಿಕ್ರಿಯೆಗಳು ಒಟ್ಟಿನಲ್ಲಿ ಭಿನ್ನವಾಗಿವೆ, ಮನೋಭಾವ ಭಿನ್ನವಾಗಿದೆ. ಇಡಿಯಾದ ಉದಾಸೀನತೆ ಇರುವ ಅವಧಿಯೊಳಗಿಂದ ನಾನು ಹಾಯ್ದು ಬಂದಿದ್ದೇನೆ, ಆಗ ಜಗತ್ತು ಏನನ್ನೂ ಪ್ರತಿನಿಧಿಸುತ್ತಿರಲಿಲ್ಲ, ಅದಕ್ಕೆ ಯಾವ ಅರ್ಥವೂ ಇರುತ್ತಿರಲಿಲ್ಲ. ಮತ್ತು ನಂತರ ಕ್ರಮೇಣ ಆ ಸ್ಥಿತಿಯಿಂದ ಹೊಸ ಗ್ರಹಿಕೆ ಹೊರಹೊಮ್ಮಿತು ಅದು ಮಾತ್ರ ಮಾರ್ಗದಲ್ಲಿದೆ.

**(CWM, 11/245–46)**

*

### ಸತ್ತೆಯ ಹೊಸದಾದ ರೀತಿಗೆ ಕಠಿಣತೆ ಮಣಿಯುತ್ತಿದೆ

ಸತ್ತೆಯ ಹೊಸ ರೀತಿಗೆ ರೂಪದ ಕಠಿಣತೆ ಮಣಿಯುತ್ತಿರುವ ಹಾಗೆ ತೋರಿಬರುತ್ತಿದೆ. ಆದರೆ, ಸರಿ, ಮೊದಲ ಸಂಪರ್ಕ ಯಾವಾಗಲೂ ಬಹಳ ಆಶ್ಚರ್ಯಕಾರಕ ಎಂಬುದನ್ನು ನಾವು ತಿಳಿದುಕೊಂಡಿದ್ದೇವೆ, ಆದರೆ ಕ್ರಮೇಣ ದೇಹ ರೂಢಿಸಿಕೊಳ್ಳುತ್ತದೆ. ಒಂದು ರೀತಿಯಿಂದ ಇನ್ನೊಂದು ರೀತಿಗೆ ಸಾಗಿ ಹೋಗುವಿಕೆಯ ಕ್ಷಣ ಸ್ವಲ್ಪ ಕಠಿಣವಾದದ್ದು. ಅದನ್ನು ಬಹಳ ಪ್ರಗತಿಪರವಾಗಿ ಕೈಕೊಳ್ಳಲಾಗುತ್ತದೆ, ಹಾಗಿದ್ದಾಗ್ಯೂ ಕೆಲವು ಸೆಕೆಂಡುಗಳ ಒಂದು ಕ್ಷಣವಿರುತ್ತದೆ (ಸಾಗಿ ಹೋಗುತ್ತಿರುವಾಗಿನ ಕ್ಷಣ), ಅದನ್ನು ಕುರಿತು ಸ್ವಲ್ಪದರಲ್ಲಿ ಹೇಳುವುದಾದರೆ ಅದು 'ಅನಿರೀಕ್ಷಿತ'ವಾದದ್ದು ಎಂದು ಹೇಳಬಹುದು.



ಈ ರೀತಿಯಲ್ಲಿ ಎಲ್ಲ ರೂಢಿಗಳನ್ನು ತೆಗೆದು ಹಾಕಲಾಗುವುದು, ಮತ್ತು ಎಲ್ಲ ಕಾರ್ಯವಿಧಾನಗಳಿಗೂ ಅದೇ ಅನ್ವಯಿಸುತ್ತದೆ: ರಕ್ತ ಸಂಚಲನ, ಜೀರ್ಣಿಸಿ–ಕೊಳ್ಳುವಿಕೆ, ಉಸಿರಾಡಿಸುವಿಕೆ ಹೀಗೆ ಎಲ್ಲ ಕಾರ್ಯವಿಧಾನಗಳಿಗೆ ಅದು ಅನ್ವಯವಾಗುತ್ತದೆ. ಸಾಗಿ ಹೋಗುವಿಕೆಯ ಕ್ಷಣದಲ್ಲಿ ಮನುಷ್ಯ ಒಂದರ ಸ್ಥಾನದಲ್ಲಿ ಇನ್ನೊಂದನ್ನು ಒಮ್ಮೆಗೆ ತರುತ್ತಾನೆ ಎಂದಲ್ಲ, ಆದರೆ ಅದು ಅವೆರಡರ ನಡುವೆ ದ್ರವ (fluid) ಸ್ವರೂಪದ್ದು ಮತ್ತು ಕಠಿಣವಾದದ್ದು. ಪರಮೋಚ್ಚ ದೈವೀ ಪ್ರಭುವಿನ ನಿಜವಾದ ಅಸ್ತಿತ್ವದಲ್ಲಿ, ಪರಮೋಚ್ಚನ ಏಕೈಕ ನಿಜವಾದ ಅಸ್ತಿತ್ವದಲ್ಲಿ ಇರಿಸಿರುವ ಇಡಿಯಾಗಿ ಸ್ಥಿರವಾಗಿರುವ, ಪ್ರಕಾಶಮಯವಾಗಿರುವ, ಸತತ ಇರುವ, ಬದಲಾಗದೆ ಇರುವ ಶ್ರೇಷ್ಠ ನಂಬಿಕೆ ಮಾತ್ರ ಎಲ್ಲವೂ ತೋರಿಕೆಯಲ್ಲಿ ಒಂದೇ ಆಗಿ ಮುಂದು–ವರಿಯುವುದನ್ನು ಸಾಧ್ಯವಾಗಿಸುತ್ತದೆ.

**(CWM, 11/58)** – **ಶ್ರೀಮಾತೆ**

*

## ಅತಿಮಾನವನ ಅವರೋಹಣ

### ಪೃಥ್ವಿ ಹಾಗೂ ಮನುಕುಲ ಇವುಗಳಿಗಾಗಿ ಒಂದು ಹೊಸ ದೈವೀ ಪ್ರಜ್ಞೆ

ಜನವರಿ 1, 1969 ರಂದು ನಿಜವಾಗಿ ವಿಚಿತ್ರವಾದ ಏನೋ ಒಂದು ಸಂಭವಿಸಿತು. ಕೇವಲ ನಾನಷ್ಟೇ ಅದರ ಬಗ್ಗೆ ಭಾವನೆಗೆ ತಂದುಕೊಂಡಿರಲಿಲ್ಲ, ಬೇರೆ ಕೆಲವು ಜನರಿಗೂ ಅದರ ಬಗ್ಗೆ ಭಾವನೆ ಬಂದಿತ್ತು. ಅದು ಮಧ್ಯರಾತ್ರಿ ಕಳೆದ ಕೂಡಲೆ ಬಂದಿತ್ತು. ಆದರೆ ನಾನು ಅದರ ಬಗ್ಗೆ ರಾತ್ರಿ ಎರಡು ಗಂಟೆಗೆ ಭಾವನೆ ತಂದುಕೊಂಡಿದ್ದೆ ಮತ್ತು ಇತರರು ರಾತ್ರಿ ನಾಲ್ಕು ಗಂಟೆಗೆ ಅದರ ಬಗ್ಗೆ ಭಾವನೆ ತಂದುಕೊಂಡಿದ್ದರು. ಅದು ಅತ್ಯಂತ ಭೌತಿಕವಾದದ್ದಾಗಿತ್ತು ಎಂದರೆ ಅದು ಬಾಹ್ಯದಲ್ಲಿ ಕಂಡುಬರುವಂತಹದು, ಪ್ರಕಾಶಮಾನವಾದದ್ದು ಬಂಗಾರದ ಬಣ್ಣದ್ದು ಆಗಿತ್ತು. ಅದು ಬಲಿಷ್ಠವಾಗಿತ್ತು, ಸಾಮರ್ಥ್ಯಪೂರ್ಣವಾಗಿತ್ತು, ಹಾಗಿದ್ದಾಗ್ಯೂ ಅದರ ಗುಣಲಕ್ಷಣದಲ್ಲಿ ಮುಗುಳ್ನಗುತ್ತ ಹಿತಚಿಂತನೆ ಮಾಡುವಂತಹದು, ಶಾಂತಿಯುಕ್ತವಾದ ಆನಂದ ಮತ್ತು ಆನಂದ ಹಾಗೂ ಪ್ರಕಾಶಗಳಲ್ಲಿ ಒಂದು ಬಗೆಯ ತೆರೆದಿರಿಸಿಕೊಳ್ಳುವಿಕೆ ಇದ್ದದ್ದು ಆಗಿತ್ತು. ಅದು ಹೊಸ ವರ್ಷದ ಶುಭಾಶಯಗಳನ್ನು ಹೇಳುತ್ತಿದ್ದ ಹಾಗಿತ್ತು.

... ಒಂದು ಬಗೆಯ ಸಂತೋಷ, ಸ್ನೇಹದಿಂದ ಹಾಗೂ ಸಾಮರ್ಥ್ಯದಿಂದ ಕೂಡಿರುವ ಸಂತೋಷ, ಬಹಳ ಮೃದುವಾದದ್ದು, ಬಹಳ ಉಪಕಾರಿ ಬುದ್ಧಿಯದು ....

... ಅದು ಮಹತ್ತಾದ ವ್ಯಕ್ತಿ–ವಿಶಿಷ್ಟತೆಯನ್ನು ಹೊಂದಿತ್ತೆಂದು ನನಗನಿಸಿತು. ಅಸೀಮವಾದದ್ದು ಎಂದರೆ ಅದಕ್ಕೆ ಪೃಥ್ವಿ ಚಿಕ್ಕದಾಗಿತ್ತು, ಹೀಗೆ (ಶ್ರೀಮಾತೆಯವರು ತಮ್ಮ ಮುಷ್ಟಿಯಲ್ಲಿ ಚಿಕ್ಕ ಚೆಂಡೊಂದನ್ನು ಹಿಡಿದುಕೊಂಡ ಸೂಚನೆ ಮಾಡುತ್ತಾರೆ) ಒಂದು ಚೆಂಡಿನ ಹಾಗೆ. ಅದು ದೈವಿಕವಾಗಿ ವ್ಯಕ್ತಿ–ವಿಶಿಷ್ಟತೆ ಹೊಂದಿದೆ ಎಂದು ನನಗನಿಸಿತು. (ಅದಾಗ್ಯೂ ಅದು ಏನಿತ್ತೆಂಬುದು ನನಗೆ ತಿಳಿಯದು) ಸಹಾಯ ನೀಡಲು ಬಂದಿತ್ತು. ಅದು ಎಷ್ಟೊಂದು ಬಲಿಷ್ಠವಾಗಿತ್ತಾದರೂ, ಅಷ್ಟೇ ಮೃದುವಾಗಿತ್ತು ಎಲ್ಲವನ್ನೂ ಅಪ್ಪಿಕೊಳ್ಳುತ್ತಿರುವಂತಿತ್ತು. ಅದು ಬಾಹ್ಯದಲ್ಲಿತ್ತು: ನನ್ನ ದೇಹ ಅದು ಎಲ್ಲೆಡೆಯಲ್ಲಿ ಇರುತ್ತಿದ್ದುದರ ಭಾವನೆ ತಂದುಕೊಂಡಿತು.

... ಅದು ವರ್ಷದ ಪ್ರಾರಂಭವಾಗಿತ್ತು.

ದೇವನ ಆಯಾಮಗಳನ್ನು ಹೊಂದಿದ್ದ ಯಾರೋ ಒಬ್ಬರು, ತನ್ನಲ್ಲಿರುವ ಎಲ್ಲ ಸಾಮರ್ಥ್ಯದೊಡನೆ ಹೊಸ ವರ್ಷದ ಶುಭಾಶಯಗಳನ್ನು ಹೇಳಲು ಬಂದ ಹಾಗಿತ್ತು.

ಅದು ಅತಿಮಾನಸ ವ್ಯಕ್ತಿ–ವಿಶಿಷ್ಟತೆಯೆ? ... ಅದು ಅತಿಮಾನಸ ದೇಹವಿರುವ ಎಲ್ಲರಲ್ಲಿ ಅವತಾರ ತಾಳುತ್ತದೆ ....

ಅದು ಪ್ರಕಾಶಮಯವಾಗಿತ್ತು, ಮುಗುಳ್ನಗುತ್ತಿತ್ತು, ಹೆಚ್ಚಿನ ಸಾಮರ್ಥ್ಯ ಹೊಂದಿದ್ದರ ಕಾರಣದಿಂದಾಗಿ ಬಹಳ ಉಪಕಾರ ಬುದ್ಧಿಯದಾಗಿತ್ತು. ಸಾಮಾನ್ಯವಾಗಿ ಮಾನವ ಸತ್ತೆಯಲ್ಲಿ ಉಪಕಾರ ಬುದ್ಧಿ ದುರ್ಬಲವಾದ ಏನೋ ಒಂದು, ಅದು ಯಾವ ಅರ್ಥದಲ್ಲಿ ಎಂದರೆ ಅದಕ್ಕೆ ಸಮರ ಇಷ್ಟವಾಗುವುದಿಲ್ಲ, ಹೋರಾಟ ಇಷ್ಟವಾಗುವುದಿಲ್ಲ, ಆದರೆ ಇದು (ಅತಿಮಾನಸ ವ್ಯಕ್ತಿ, ವಿಶಿಷ್ಟತೆ) ಆ ಬಗೆಯದಲ್ಲ! ತನ್ನನ್ನು ಮೇಲೆ ಹೇರುವ ಉಪಕಾರ ಬುದ್ಧಿಯನ್ನು ಹೊಂದಿರುವಂತಹದು (ಶ್ರೀಮಾತೆಯವರು ತಮ್ಮ ಮುಷ್ಟಿಗಳನ್ನು ಕುರ್ಚಿಯ ತೋಳುಗಳ ಮೇಲೆ ಇರಿಸುತ್ತಾರೆ) ಅದು ನನಗೆ ಸ್ವಾರಸ್ಯಕರವಾದದ್ದೆನಿಸಿತು, ಏಕೆಂದರೆ ಅದು ಒಟ್ಟಿನಲ್ಲಿ ಹೊಸದಾಗಿತ್ತು. ಮತ್ತು ಎಷ್ಟೊಂದು ಮೂರ್ತರೂಪದ್ದು.

**ಪ್ರಶ್ನೆ:** *ತಯಾರಾಗಿರುವ ದೇಹಗಳನ್ನು ಅದು ತುಂಬುವಂತಹ ಏನೋ ಒಂದಾಗಿದೆಯೆ?*



**ಶ್ರೀಮಾತೆ:** ಹೌದು ಹಾಗಿರಬಹುದೆಂಬ ನಂಬಿಕೆಯಿದೆ, ಹೌದು ಅದೊಂದು ರೂಪತಾಳುವಿಕೆಯಾಗಿದ್ದು ದೇಹಗಳಲ್ಲಿ ಪ್ರವೇಶಿಸುವುದು ಹಾಗೂ ತನ್ನನ್ನು ಪ್ರಕಟಿಸುವುದು, ಆ ದೇಹಗಳು ಅತಿಮಾನಸದ್ದಾಗುವವು ಇಲ್ಲವೆ ಬಹುಶಃ ಅದು ಅತಿಮಾನವನಾಗಿರಬಹುದು. ನನಗದು ತಿಳಿಯದು. ಅವೆರಡರ ನಡುವಿನದಾಗಿರ–ಬಹುದು. ಬಹುಶಃ ಅತಿಮಾನವ: ಅದು ಬಹಳಷ್ಟು ರೀತಿಯಲ್ಲಿ ಮಾನವನಾಗಿತ್ತು, ಆದರೆ ದೈವಿಕ ಪ್ರಮಾಣಗಳಲ್ಲಿ ಮಾನವ, ಹಾಗೆ ನಾನು ಹೇಳಲೇಬೇಕು.

ದೌರ್ಬಲ್ಯಗಳಿಲ್ಲದ ಹಾಗೂ ಛಾಯೆಗಳಿಲ್ಲದ ಮಾನವ: ಅದು ಇಡಿಯಾದ ಪ್ರಕಾಶವಾಗಿತ್ತು – ಎಲ್ಲ ಪ್ರಕಾಶವಿದ್ದದ್ದು ಹಾಗೂ ಮುಗುಳ್ನಗುತ್ತಿರುವಂತಹದು – ಅದೇ ವೇಳೆಗೆ ಮಾಧುರ್ಯವುಳ್ಳದ್ದು. ಹೌದು, ಬಹುಶಃ ಅದು ಅತಿಮಾನವನಾಗಿತ್ತು.

**(CWM, 11/149–151)**

*

**ದೇಹಕ್ಕೆ ನಂಬಿಕೆಯ ಸಲಹೆಗಾರ**

ದೇಹದ ಒಳಗೆ ಒಂದು ಪ್ರಜ್ಞೆಯಿದೆ – ಅದು ಬಹಳ ಮೌಲ್ಯವಿರುವ ವಿಷಯ – ಅದು ದೇಹಕ್ಕೆ ಪಾಠ ಕಲಿಸುತ್ತದೆ, ಅದು ಕೈಕೊಳ್ಳಬೇಕಾದುದು ಏನು, ಅದು ಹೊಂದಿರಬೇಕಾದ ಮನೋಧರ್ಮ ಎಂತಹದಿರಬೇಕು, ಪ್ರತಿಕ್ರಿಯೆ ಹೇಗಿರಬೇಕು ... ನಾನು ನಿಮಗೆ ಈಗಾಗಲೆ ಹಲವಾರು ಸಲ ಹೇಳಿದ್ದೇನೆ: ಪರಿವರ್ತನೆಯ ವಿಧಾನವನ್ನು ಕಂಡುಹಿಡಿಯುವುದು ಬಹಳ ಕಠಿಣವಾಗಿದೆ, ಅದರ ಬಗ್ಗೆ ಸೂಚನೆ ಕೊಡಲು ಯಾರೂ ಇಲ್ಲದೆ ಇದ್ದಾಗ ಇನ್ನೂ ಹೆಚ್ಚು ಕಠಿಣವಾಗಿರುತ್ತದೆ. ಸರಿ ಅದಕ್ಕೆ ಉತ್ತರ ನೀಡುವ ರೀತಿಯಲ್ಲಿ ಅದು ದೇಹಕ್ಕೆ ಹೇಳಿಕೊಡಲು ಬಂದಿತು: "ಈ ಮನೋಭಾವ ಹೊಂದಿರು, ಇದನ್ನು ಈ ರೀತಿಯಲ್ಲಿ ಮಾಡು, ಅದನ್ನು ಆ ರೀತಿಯಲ್ಲಿ ಮಾಡು." ಹಾಗಾಗಿ ದೇಹಕ್ಕೆ ಸಮಾಧಾನವಾಗಿದೆ, ಪುನರಾಶ್ವಾಸನೆ ದೊರಕಿದೆ, ಅದು ಇನ್ನುಮುಂದೆ ತಪ್ಪಾಗಿ ತಿಳಿದುಕೊಳ್ಳಲಾರದು.

ಅದೊಂದು ನಂಬಿಕೆಯ ಸಲಹೆಗಾರನ ರೀತಿಯಲ್ಲಿ ಬಂದಿತು, ಅದು ಬಹಳ ವ್ಯಾವಹಾರಿಕವಾದದ್ದಾಗಿತ್ತು, "ಈ ವಿಷಯವನ್ನು ತಿರಸ್ಕರಿಸಬೇಕು, ಅದನ್ನು ಒಪ್ಪಿಕೊಳ್ಳಬೇಕು ಇದನ್ನು ಸಾರ್ವತ್ರಿಕವಾದದ್ದನ್ನಾಗಿ ಮಾಡಬೇಕು ..." ಅದರಲ್ಲಿ ಎಲ್ಲ ಆಂತರಿಕ ಚಲನೆಗಳಿದ್ದವು. ಮತ್ತು ಅದು ಲೌಕಿಕವಾದದ್ದೂ ಕೂಡ ಆಗುತ್ತದೆ, ಯಾವ ಅರ್ಥದಲ್ಲಿ ಎಂದರೆ ಅದು ಕೆಲವೊಂದು ಕಂಪನಗಳನ್ನು ಕುರಿತು ಹೇಳುತ್ತದೆ: "ಇದಕ್ಕೆ ನೀನು ಪ್ರೋತ್ಸಾಹ ನೀಡಬೇಕು," ಇತರ ವಿಷಯಗಳನ್ನು

ಕುರಿತು "ಅದನ್ನು ಒಂದು ದಿಕ್ಕಿನಲ್ಲಿ ಹರಿಸಬೇಕು" ಮತ್ತೆ ಇನ್ನೂ ಬೇರೆ ವಿಷಯಗಳನ್ನು ಕುರಿತು "ಇದನ್ನು ತೆಗೆದು ಹಾಕಬೇಕು" ಇತ್ಯಾದಿ. ಅ ರೀತಿಯ ಚಿಕ್ಕ ಸೂಚನೆಗಳನ್ನು ಕೊಡುತ್ತದೆ.

*

**ಕರುಣೆ ತೋರುವ ಹಾಗೂ ಉಪಕಾರ ಬುದ್ಧಿಯ ದೈವೀ ಸಾಮರ್ಥ್ಯ ಹಾಗೂ ಶಾಂತಿ**

ಅದು ಬಹಳ ವಿಚಿತ್ರವಾದ ಏನೋ ಒಂದು, ಮನುಷ್ಯನ ಎಲ್ಲ ಗುಣಲಕ್ಷಣಗಳು ಮತ್ತು ಕುಂದುಕೊರತೆಗಳು ಬಾಲಿಶವಾಗಿರುವಂತೆ, ಮೂರ್ಖತನದ್ದವಾಗಿರುವಂತೆ ತೋರಿಬರುತ್ತವೆ, ಅದು ಕುತೂಹಲಕಾರಿಯಾದದ್ದು. ಅದೊಂದು ಯೋಚನೆಯಲ್ಲ, ಅದು ಮೂರ್ತರೂಪದ ಸಂವೇದನೆ. ಅದು ಪ್ರಾಣವಿಲ್ಲದ ವಸ್ತುವಿನ ಹಾಗೆ, ಎಲ್ಲ ಸಾಮಾನ್ಯ ವಸ್ತುಗಳು ಪ್ರಾಣವಿಲ್ಲದ ನಿಜವಾದ ಪ್ರಾಣವಿಲ್ಲದ ದ್ರವ್ಯಗಳಿದ್ದ ಹಾಗೆ. ಕೃತ್ರಿಮ ಹಾಗೂ ಮಿಥ್ಯೆಯಾದವುಗಳು, ಅದು ವಿಚಿತ್ರವಾದದ್ದು. ಇತರ ವಿಷಯಗಳಲ್ಲಿ ಅಷ್ಟರಮಟ್ಟಿಗಿಲ್ಲ, ಅದು ಅದಲ್ಲ; ಅದು ಆಂತರಿಕ ತರಬೇತು ಮತ್ತು ಈ ನಿಜವಾದ ಪ್ರಜ್ಞೆ ಮತ್ತು ಈ ನಿಜವಾದ ಮನೋಭಾವ ಇವು ಭಯಂಕರವಾಗಿ ಬಲವತ್ತರವಾಗಿವೆ, ಸಾಮರ್ಥ್ಯಪೂರ್ಣವಾಗಿವೆ, ಶಾಂತಿಯಲ್ಲಿ ಎಷ್ಟೊಂದು ಮುಗುಳ್ನಗುತ್ತಿರುತ್ತವೆ! ಎಷ್ಟೊಂದು ಮುಗುಳ್ನಗುತ್ತವೆ ಎಂದರೆ ಅದನ್ನು ತಿರಸ್ಕರಿಸಲಾಗದು, ಅದು ಸಂಪೂರ್ಣವಾಗಿ ಅಸಾಧ್ಯವಾದದ್ದು. ಮುಗುಳ್ನಗುತ್ತ, ಗಮನಿಸುತ್ತ ಇರುವಂತಹದು.

(ಮೌನ)

ಈ ಹೊಸ ಪ್ರಜ್ಞೆಯ ಗುಣಲಕ್ಷಣವೆಂದರೆ ಅದು ಅರ್ಧ ಪರಿಮಾಣದ್ದಲ್ಲ, ಅಂದಾಜು ಮಾಡುವುದಾಗಿರುವುದಿಲ್ಲ. ಅದು ಅದರ ಗುಣಲಕ್ಷಣ. 'ಓ ಆಗಲಿ, ನಾವು ಅದನ್ನು ಸ್ವಲ್ಪ ಸ್ವಲ್ಪವಾಗಿ ಕೈಕೊಳ್ಳುತ್ತೇವೆ...." ಇಲ್ಲ, ಇಲ್ಲ, ಆ ರೀತಿಯದಲ್ಲ: ಅದು ಹೌದು ಅಥವಾ ಇಲ್ಲ, ನಿಮಗೆ ಸಾಧ್ಯವಿದೆ ಇಲ್ಲವೆ ಸಾಧ್ಯವಿಲ್ಲ ಎನ್ನುವಂತಹದು. ನಿಜವಾಗಿ ಅದೊಂದು ದೈವೀ ಕೃಪೆ, ಕಾಲ ಕಳೆದುಕೊಳ್ಳುವುದಿಲ್ಲ ಎನ್ನುವ ರೀತಿಯದು, ಅದನ್ನು ಕೈಕೊಳ್ಳಲೇಬೇಕು ಇಲ್ಲವೆ ... ಆದರೆ ಈ ಭಯಾನಕ ದೈವೀ ಸಾಮರ್ಥ್ಯ, ಎಲ್ಲದಕ್ಕಿಂತಲೂ ಹೆಚ್ಚಾಗಿ ಕರುಣೆ ತೋರಿಸುವುದರೊಂದಿಗೆ ಇದೆ, ಮೃದುವಾಗಿದೆ! ... ಇಲ್ಲ ಅಲ್ಲಿ ಶಬ್ದಗಳಿಲ್ಲ, ಅದನ್ನು ವರ್ಣಿಸಲು ನಮ್ಮಲ್ಲಿ ಶಬ್ದಗಳಿಲ್ಲ, ಅದು ಏನೋ ಒಂದಾಗಿದೆ. ಲಕ್ಷ್ಯಗೊಡುತ್ತಿರುವುದರ ಹೊರತಾಗಿ ಬೇರೇನೂ ಇಲ್ಲ ಮತ್ತು ಅದು ಪರಮಾನಂದವಾಗಿರುತ್ತದೆ. ಮನುಷ್ಯ ಆ ಬದಿಯತ್ತ ತನ್ನ ಲಕ್ಷ್ಯವನ್ನಿರಿಸಬೇಕು, ಕೂಡಲೆ ಅಲ್ಲಿ ಆನಂದವಿರುತ್ತದೆ ಮತ್ತು ನಾನು ತಿಳಿದುಕೊಳ್ಳುತ್ತೇನೆ (ಅದು ನಾನು ಕೆಲವೊಂದು ವಿಷಯಗಳನ್ನು ತಿಳಿದುಕೊಳ್ಳುವಂತೆ ಮಾಡಿದೆ) ಪೀಡೆಯ ಮಧ್ಯೆ ಆನಂದವಿರುವುದರ ಸಂತೋಷ ಪಡೆದ ಜನರ ಬಗ್ಗೆ ನಾವು ಕೇಳಿದ್ದೇವೆ – ಅದು ಆ ರೀತಿಯದಾಗಿದೆ. ದಿವ್ಯಾನಂದ.



ಅದಿರುವುದು ಹಾಗೆ. (ಶ್ರೀ ಮಾತೆಯವರು ಬಿಳಿಯ ದಾಸವಾಳ ಹೂವನ್ನು ಎತ್ತಿಕೊಂಡು ಕೊಡುತ್ತಾರೆ, ಅದಕ್ಕೆ ಅವರು 'ದೈವೀ ಕೃಪೆ' ಎಂಬ ಹೆಸರನ್ನು ಕೊಟ್ಟಿದ್ದಾರೆ.)

**(CWM, 11/156–60)** **– ಶ್ರೀಮಾತೆ**

*

## ಶ್ರೀಮಾತೆಯವರ ಹೊಸ ದೇಹ

**ಮುಕ್ತಿಸಾಧನ ಭೌತಿಕವಾದದ್ದು**

ಈ ದೇಹಕ್ಕೆ ಹಿಂದೆಂದೂ ಆ ರೀತಿಯ ಭಾವನೆ ಬಂದಿರಲಿಲ್ಲ, ಅಲ್ಲದೆ ಅದು ದೇಹವನ್ನು ಕೆಲವು ಗಂಟೆಗಳ ಕಾಲ ವಿಷಮ ಪರಿಸ್ಥಿತಿಯಲ್ಲಿ ಇರಿಸಿತು ಮತ್ತು ನಂತರ ಪ್ರತಿಯೊಂದು ವಿಷಯ ಮುಗುಳ್ನಗೆಯೊಂದಿಗೆ, ಹೊಳೆಯುವ ಪ್ರಕಾಶದೊಂದಿಗೆ ಬರುತ್ತಿದ್ದ ಹಾಗಿತ್ತು. ಬಾಲಕನೊಬ್ಬನ ಪ್ರತೀಕದಲ್ಲಿ ಹೇಳುವುದಾದರೆ ದೈವೀ ಪ್ರಭು: "ನೀನು ನೋಡು, ನಾನು ಎಲ್ಲೆಡೆಯಲ್ಲಿ ಇದ್ದೇನೆ, ನಾನು ಪ್ರತಿಯೊಂದರಲ್ಲಿದ್ದೇನೆ" ಎಂದು ಹೇಳುತ್ತಿದ್ದ ಹಾಗಿತ್ತು. ಅದು ನಂಬಲು ಅಸಾಧ್ಯವಾಗಿತ್ತು. ... ಆದರೆ ದೇಹ ಹಾಗೂ ದೈವೀ ಪ್ರಭು ನಡುವೆ ಸಂವಾದ(communication) ಇರಲಿಲ್ಲ.

ಸರಿ, ದೇಹ "ಅದು ಹೇಗಿದೆ? ಅದನ್ನು ಮುಂದುವರಿಸಿಕೊಂಡು ಹೋಗುವುದು ಅವಶ್ಯವಾಗಿದೆಯೆ? ಮನುಷ್ಯ ಅದನ್ನು ಮುಂದುವರಿಸಿಕೊಂಡು ಹೋಗಲೇಬೇಕೆ? ಜಗತ್ತು, ಜನರು, ಇಡೀ ಸೃಷ್ಟಿ – ಅದೆಲ್ಲವನ್ನೂ ಮುಂದು–ವರಿಸಿಕೊಂಡು ಹೋಗಬೇಕೆ?" ಎಂದು ಕೇಳುತ್ತಿದ್ದ ಕಾಲ ಅದಾಗಿತ್ತು ... ಅದು ಕಾಣಿಸಿಕೊಂಡಿತು. ನಾನು ಒಮ್ಮೆಗೆ ಎಲ್ಲವನ್ನೂ ಅರಿತುಕೊಂಡೆ : ಅಹಾ! ಇದನ್ನೇ "ಶಾಶ್ವತ ನರಕ" ಎಂದು ಅವರು ತರ್ಜುಮೆ ಮಾಡಿದ್ದಾರೆ ಇದು ಅದೇ. ಈ ಗ್ರಹಿಕೆಯನ್ನು ಹೊಂದಿದ್ದ ಯಾರೋ ಒಬ್ಬರು ಇರಬೇಕು.

ನಿರ್ವಾಣ ಮೊದಲುಗೊಂಡು ಕೃತ್ರಿಮ ಎಂದು ಕರೆಯಬಹುದಾದ ಎಲ್ಲ ಸಾಧನಗಳು – ಅವೆಲ್ಲವುಗಳಿಂದ ಹೊರಬರುವ ಸಾಧನಗಳು – ಎಳ್ಳಷ್ಟೂ

ಯೋಗ್ಯವಾದವುಗಳಲ್ಲ. ಶತದಡ್ಡನೊಬ್ಬ ತನ್ನ ಜೀವನವನ್ನು ಕೊನೆಗೊಳಿಸಿಕೊಳ್ಳಲು ತನ್ನನ್ನು ಕೊಂದು ಹಾಕಿಕೊಂಡಾಗ (ಇದು ಎಲ್ಲ ಶತಮೂರ್ಖತನಗಳಲ್ಲಿ ಅತ್ಯಂತ ದಡ್ಡತನದ್ದು.) ಅದು ಅವನ ಸ್ಥಿತಿಯನ್ನು ಇನ್ನೂ ಕೆಟ್ಟದ್ದನ್ನಾಗಿ ಮಾಡುವುದು. ಇಂತಹದರಿಂದ ಹಿಡಿದು ನಿರ್ವಾಣದವರೆಗೆ (ಅಲ್ಲಿ ಮನುಷ್ಯ ತಾನು ಪಾರಾಗಿ ಹೋಗುವೆನೆಂದು ತಿಳಿದಿರುತ್ತಾನೆ) ಅದೆಲ್ಲವೂ ಯಾವುದಕ್ಕೂ ಯೋಗ್ಯವಾಗಿಲ್ಲ. ಅವುಗಳೆಲ್ಲ ಬೇರೆ ಬೇರೆ ಹಂತಗಳಲ್ಲಿವೆ. ಆದರೆ ಅವುಗಳಲ್ಲಿ ಯಾವುದೂ ಯೋಗ್ಯವಾಗಿಲ್ಲ. ಮತ್ತು ಅದರ ನಂತರ ನಿಮಗೆ ಶಾಶ್ವತವಾಗಿರುವ ನರಕದ ಬಗ್ಗೆ ಭಾವನೆ ಬಂದ ಸಮಯದಲ್ಲಿ, ಒಮ್ಮಿಂದೊಮ್ಮೆಗೆ ... (ಬೇರೇನೂ ಅಲ್ಲ ಪ್ರಜ್ಞೆಯ ಒಂದು ಸ್ಥಿತಿ, ಕೇವಲ ಅದೊಂದು) ಆ ಪ್ರಜ್ಞೆಯ ಸ್ಥಿತಿಯಲ್ಲಿ ಎಲ್ಲವೂ ಪ್ರಕಾಶ, ಭವ್ಯತೆ, ಸೌಂದರ್ಯ, ಸಂತೋಷ, ಒಳ್ಳೆಯತನ ... ಮತ್ತು ಅಭಿವ್ಯಕ್ತಪಡಿಸಲಾಗದ ಪ್ರತಿಯೊಂದು ಇರುತ್ತದೆ. ಮತ್ತು ಅದು ಆ ರೀತಿಯದಾಗಿರುತ್ತದೆ. "ನೀವಲ್ಲಿರುತ್ತೀರಿ", ಮತ್ತು ನಂತರ ಪಫ್ಟ(pfft)! ಅದು ತೋರಿಬರುತ್ತದೆ ನಂತರ ಜಿಗಿದು ದೂರ ಹೋಗುತ್ತದೆ. ಮತ್ತು ನಂತರ ಕಂಡುಕೊಳ್ಳುವ ಮತ್ತು ತನ್ನನ್ನು ದೃಡೀಕರಿಸುವ ದೈವೀ ಪ್ರಜ್ಞೆ ಹೇಳುತ್ತದೆ: "ಈಗ ಮುಂದಿನ ಹೆಜ್ಜೆ" ಎಂದು. ಹಾಗಾಗಿ ಅದರ ಎಲ್ಲ ಸಾನ್ನಿಧ್ಯದಲ್ಲಿ ದೇಹದಲ್ಲಿದ್ದುಕೊಂಡದ್ದು ... ಅದರ ಜೀವನದಲ್ಲಿ ಎಂದೆಂದಿಗೂ ಅಂತಹ ನೋವನ್ನು ಕಂಡಿರಲಿಲ್ಲ ಮತ್ತು ಅದು ಈಗಲೂ ಇದೆ.

ಸನ್ನೆ ಅದೇ ಆಗಿದೆಯೆ? ನನಗದು ತಿಳಿಯದು. ಆದರೆ ಮುಕ್ತಿಸಾಧನ ಭೌತಿಕವಾದದ್ದು, – ಮಾನಸಿಕವಾದದ್ದು ಅಲ್ಲವೇ ಅಲ್ಲ. ಅದರರ್ಥ ಪಾರಾಗಿ ಹೋಗುವುದಲ್ಲ, ಅದು ಇಲ್ಲಿದೆ. ಇದನ್ನು ನಾನು ಬಲವತ್ತರವಾಗಿ ಭಾವನೆಗೆ ತಂದುಕೊಂಡೆ.

**(CWM, 11/179)**

*

**ಭಗವಂತನ ಮೂಲಕ ಮಾತ್ರ ಜೀವಿಸುವುದನ್ನು ಕುರಿತು ದೇಹಕ್ಕೆ ತರಬೇತು ನೀಡಲಾಗುತ್ತದೆ**

ದೇಹವನ್ನು ಕುರಿತು ಹೇಳುವುದಾದರೆ ಅದಕ್ಕೆ ಭಗವಂತನ ಮೂಲಕ ಜೀವಿಸುವುದನ್ನು ಕುರಿತು ತರಬೇತು ನೀಡಲಾಗುತ್ತದೆ, ಯಾವ ಅಪವಾದವೂ ಇಲ್ಲದೆ ಪ್ರತಿಯೊಂದನ್ನೂ ಭಗವಂತನ ಮೂಲಕ ಜೀವಿಸಲಾಗುತ್ತದೆ. ಪ್ರಜ್ಞೆ ತನಗೆ ಸಾಧ್ಯವಿದ್ದಷ್ಟರ ಮಟ್ಟಿಗೆ ಭಗವಂತನ ಪ್ರಜ್ಞೆಯ ಜೊತೆಗೆ ಇರುವುದಾದರೆ ಮಾತ್ರ



ಅಸ್ತಿತ್ವವಿರುವುದರ ಭಾವನೆ ಬರುತ್ತದೆ. ಅದಕ್ಕೆ ಈಗ ಅಸಾಧಾರಣವಾದ ಗಾಢತೆ ಇದೆ. ಭೌತಿಕವು ಪರಿವರ್ತನೆಗೆ ಒಳಗಾದಾಗ ಅದು ಘನರೂಪದ್ದಾಗುತ್ತದೆ, ಅದು ಚಲಿಸುವುದಿಲ್ಲ – ಸಂಪೂರ್ಣವಾಗಿರುತ್ತದೆ. ಮತ್ತು ಎಷ್ಟೊಂದು ಮೂರ್ತ ಸ್ವರೂಪದ್ದಾಗುತ್ತದೆ. ಭಗವಂತನಲ್ಲಿರುವುದು, ಅವನ ಮೂಲಕ ಮಾತ್ರ ಅಸ್ತಿತ್ವದಲ್ಲಿ ಮತ್ತು ಅವನಲ್ಲಿ ಇರುವುದು, ನಂತರ ಮಾನವ ಪ್ರಜ್ಞೆಯಲ್ಲಿರುವುದು ಇವುಗಳ ನಡುವಿರುವ ವ್ಯತ್ಯಾಸ ಎಷ್ಟೊಂದು ಭವ್ಯವಾಗಿರುತ್ತದೆಂದರೆ ಒಂದು ಇನ್ನೊಂದರ ಬಳಿ ಮೃತ್ಯುವಿದ್ದ ಹಾಗೆ ತೋರಿಬರುತ್ತದೆ ... ಎಂದರೆ ಭೌತಿಕ ಸಿದ್ಧಿ ನಿಜವಾಗಿ ಮೂರ್ತರೂಪದ ಸಿದ್ಧಿ.

ಚೈತನ್ಯದ ಏಕಾಗ್ರತೆ ರೂಪಗೊಳ್ಳಲು ಪ್ರಾರಂಭಿಸಿದೆ – ಓಹ್! ಅದಿನ್ನೂ ಆಗಿಲ್ಲ, ಅದರಿಂದ ಇನ್ನೂ ಬಹಳ ದೂರವಿದೆ, ಆದರೆ ಏನಾಗಲಿದೆ ಎಂಬುದರ ಗ್ರಹಿಕೆ ಪ್ರಾರಂಭವಾಗಿದೆ. ಅದು, ಹೌದು, ನಿಜವಾಗಿ ಅದ್ಭುತವಾದದ್ದು, ಅದು ಎಷ್ಟೊಂದು ಸಾಮರ್ಥ್ಯದಿಂದ ಹಾಗೂ ಪ್ರಜ್ಞೆಯ ನೈಜತೆಯಿಂದ ತುಂಬಿ–ಕೊಂಡಿರುತ್ತದೆ ಎಂದರೆ ಬೇರೆ ಯಾವುದೂ ಅದನ್ನು ಹೊಂದಲಾರದು – ಪ್ರಾಣಿಕವಾದದ್ದು, ಮಾನಸಿಕವಾದದ್ದು ಇದೆಲ್ಲ ಅಸ್ಪಷ್ಟ ಮತ್ತು ಅನಿಶ್ಚಿತ ಎಂದು ತೋರಿಬರುತ್ತದೆ. ಅದು ಮೂರ್ತ ಸ್ವರೂಪದ್ದಾಗಿದೆ. (ಶ್ರೀಮಾತೆಯವರು ತಮ್ಮ ತೋಳುಗಳನ್ನು ಗಟ್ಟಿಯಾಗಿ ಹಿಡಿದುಕೊಳ್ಳುತ್ತಾರೆ.) ಅಷ್ಟೊಂದು ಬಲಿಷ್ಠವಾಗಿದೆ. ಇನ್ನೂ ಪರಿಹರಿಸಬೇಕಾದ ಸಮಸ್ಯೆಗಳಿವೆ, ಆದರೆ ಅವುಗಳನ್ನು ಶಬ್ದಗಳಿಂದ ಇಲ್ಲವೆ ಯೋಚನೆಗಳಿಂದ ಪರಿಹರಿಸಲಾಗುವುದಿಲ್ಲ. ವಿಷಯಗಳು ಕೇವಲ ತೋರಿಸಿಕೊಡಲು ಬರುತ್ತವೆ – ಕೇವಲ ವೈಯಕ್ತಿಕ ವಿಷಯಗಳಷ್ಟೇ ಅಲ್ಲ; ಜನರು, ಪರಿಸ್ಥಿತಿಗಳು – ಅದೆಲ್ಲವೂ, ನಿಜವಾದ ಪ್ರಜ್ಞೆಯನ್ನು ದೇಹ ಪಡೆಯಲು ಅದಕ್ಕೆ ಕಲಿಸಿಕೊಡಲು ಬರುತ್ತವೆ. ಅದು ಅದ್ಭುತವಾಗಿದೆ. (ಶ್ರೀಮಾತೆಯವರ ಅಂತರಂಗದೊಳಗೆ ಪ್ರವೇಶಿಸುತ್ತಾರೆ). ಪ್ರಕಟಗೊಳ್ಳಲು ಬಯಸುತ್ತಿರುವ ದೈವೀ ಸಾಮರ್ಥ್ಯಕ್ಕೆ ಅದನ್ನು ಸಹಿಸಿಕೊಳ್ಳುವ ಕ್ಷಮತೆಯಿರುವ ಭೌತಿಕವನ್ನು ಸೃಷ್ಟಿಸುವುದು ಒಂದು ಸಮಸ್ಯೆಯಾಗಿರುವಂತೆ ತೋರಿಬರುತ್ತಿದೆ. ತನ್ನನ್ನು ಪ್ರಕಟಿಸಲೇಬೇಕಾದ ಭಯಾನಕವಾದ ದೈವೀ ಸಾಮರ್ಥ್ಯವನ್ನು ಸಹಿಸಲು ಎಲ್ಲ ಸಾಮಾನ್ಯ ಪ್ರಜ್ಞೆಗಳು ಬಹಳ ತಿಳುವಾಗಿವೆ, ಬೇಗ ಒಡೆದು ಹೋಗುವಂತಹವಾಗಿವೆ. ಹಾಗಾಗಿ ದೇಹ ತನ್ನನ್ನು ತರಬೇತಿಗೊಳಪಡಿಸುವ ವಿಧಾನದಲ್ಲಿದೆ ಮತ್ತು ಒಮ್ಮೆಗೆ ಗ್ರಹಿಕೆಗೆ ತೆಗೆದುಕೊಂಡ ಹಾಗಿದೆ. ಎಷ್ಟೊಂದು ಅದ್ಭುತವಾಗಿರುವ ಕ್ಷಿತಿಜ, ಆದರೆ ಭಯಾನಕವಾಗಿ ಅದ್ಭುತವಾದದ್ದು. ನಂತರ ಅದು ಸಹಿಸಿಕೊಳ್ಳುವಷ್ಟು ದೂರ

ಮುಂದುವರಿದು ಹೋಗಲು ಅದನ್ನು ಬಿಟ್ಟುಕೊಡಲಾಗಿದೆ ಹೊಂದಿಕೊಳ್ಳುವ ವಿಧಾನವೊಂದರ ಆವಶ್ಯಕತೆ ಇದೆ. ಅಲ್ಲಿ ಇಡಿಯಾದ ಸಂಕ್ರಮಣವಿದೆ.

ಅದು ಸಾಕಷ್ಟು ನಮ್ಯವಾಗುವುದೆ? ನನಗದು ತಿಳಿಯದು. ಅದು ನಮ್ಯತೆ ಇರುವುದರ ಪ್ರಶ್ನೆ. ಸಹಿಸಿಕೊಳ್ಳುವುದಕ್ಕೆ ಮತ್ತು ಕಳಿಸಿಕೊಡುವುದಕ್ಕೆ ಶಕ್ತವಾಗಲು (ಶ್ರೀಮಾತೆಯವರು ತಮ್ಮ ದೇಹದಿಂದ ಸಾಗಿ ಹೋಗುವ ಪ್ರವಾಹವೊಂದರ ಸೂಚನೆ ಮಾಡುತ್ತಾರೆ) ತನ್ನನ್ನು ಪ್ರಕಟಪಡಿಸಲು ಬಯಸುವ ಸಾಮರ್ಥ್ಯಕ್ಕೆ ಯಾವ ಅಡೆತಡೆಯನ್ನು ಮುಂದಿರಿಸದೆ ಇರುವುದಾಗಿದೆ.

**(CWM, 11/269)**

*

**ಚಿಪ್ಪನ್ನು ಕರಗಿಸುವುದು**

ತೋರಿಕೆಗಳು ಕೇವಲ ಭವಿಷ್ಯತ್ತಿನ ಪರಿಣಾಮಗಳು, ಆ ಕಾರಣದಿಂದಾಗಿ ಕೊನೆಗೆ ಬದಲಾಗುವ ವಿಷಯಗಳು ತೋರಿಕೆಗಳಾಗಿರುತ್ತವೆ.

ಹೌದು, ನನಗೂ ಕೂಡ ತಿಳಿದಿಲ್ಲ. ನಾನು ಹೀಗಿದ್ದೇನೆ (ಹಣೆಯತ್ತ ಸೂಚನೆ) ಏನೇನೂ ಇಲ್ಲ ಬರಿದಾಗಿದೆ. (ಮೇಲ್ಗಡೆ ಹಾಗೂ ವಿಸ್ತಾರದತ್ತ ಸೂಚನೆ) ಅಲ್ಲಿದೆ, ಹೌದು, ಅದು ಬಂಗಾರ ವರ್ಣದ ವಿಸ್ತಾರ.

(ಮೌನ)

ನನಗೆ ವಿಚಿತ್ರ ಭಾವನೆ ಬರುತ್ತಿದೆ, ಅದು ಒಂದು ಬಗೆಯ ಚಿಪ್ಪಿರುವ ಹಾಗೆ ಇಲ್ಲವೆ ಗಿಡದ ತೊಗಟೆಯಿರುವ ಹಾಗಿದೆ, ಆಮೆಯ ಚಿಪ್ಪು ಕರಗುತ್ತಿರುವಂತೆ ಇದೆ. ಮತ್ತು ದೇಹವೇ ಸ್ವತಃ ಆ ರೀತಿಯದಾಗಿಲ್ಲ (ದೇಹವೇ ಸೂರ್ಯನತ್ತ ಸ್ಫೋಟಗೊಂಡು ತೆರೆದುಕೊಳ್ಳುತ್ತಿರುವ ಸಂಜ್ಞೆಯನ್ನು ಶ್ರೀಮಾತೆಯವರು ಮಾಡುತ್ತಾರೆ). ಮನುಷ್ಯನಿಗೆ ಯಾವುದು ಭೌತದ್ರವ್ಯ, ಬಿರುಸಾಗಿದ್ದಂತಹದು ಎಂದು ತೋರಿಬರುವುದೋ ಅದು ಕಳೆದು ಹೋಗಬೇಕು. (ಶ್ರೀಮಾತೆಯವರು ತಮ್ಮ ಚರ್ಮವನ್ನು ಕೈಯಿಂದ ಸ್ಪರ್ಶಿಸುತ್ತಾರೆ) ಏಕೆಂದರೆ ಅದು ಸ್ವೀಕರಿಸುವುದಿಲ್ಲ. ಅದು ಪ್ರಯತ್ನ ಮಾಡುತ್ತದೆ (ತೆರೆದುಕೊಳ್ಳುವ ಸಂಜ್ಞೆ). ಓಹ್! ಅದು ವಿಚಿತ್ರವಾದ ಸಂವೇದನೆ. ಸಾಕಷ್ಟು ದೀರ್ಘಕಾಲದವರೆಗೆ, ಆ ವಿಷಯ ಕರಗಿ ಹೋಗುವಷ್ಟು ಕಾಲ ಹಿಡಿದಿಟ್ಟುಕೊಳ್ಳಲು ಮನುಷ್ಯ ಶಕ್ತನಾದರೆ, ಆಗ ಅದು ನಿಜವಾದ ಪ್ರಾರಂಭವಾಗುತ್ತದೆ.

**(CWM, 11/269–71)**

*



**(ದೈವೀ ಪ್ರಭು) ನೀನು ಸಂಕಲ್ಪಿಸಿದ ಹಾಗೆ**

ದೇಹದಲ್ಲಿರುವ ಜೀವಕೋಶಗಳು ಭಗವಂತನ ಅಭಿವ್ಯಕ್ತಿಯಾಗುವವರೆಗೆ ತಮ್ಮ ಆಧಾರವನ್ನು ಕೇವಲ ಭಗವಂತನಲ್ಲಿ ಅರಸುವುದನ್ನು ಕಲಿತುಕೊಳ್ಳಬೇಕು. ಇದೇ ಸದ್ಯದ ನಿಜವಾದ ಅನುಭವ, ವಿಷಯಗಳ ಪರಿಣಾಮವನ್ನು ಬದಲು ಮಾಡುವ ಅನುಭವ ನನ್ನಲ್ಲಿದೆ, ಆದರೆ ಅದನ್ನು ಮಾನಸೀಕರಣಗೊಳಿಸಲಾಗಿಲ್ಲ, ಹಾಗಾಗಿ ನಾನು ಅದನ್ನು ಶಬ್ದಗಳಲ್ಲಿ ಹೇಳಲಾರೆ. ಆದರೆ ನಿಜವಾಗಿ ಜೀವಕೋಶಗಳು ಭಾವನೆಗೆ ತೆಗೆದುಕೊಳ್ಳುವುದನ್ನು ಪ್ರಾರಂಭಿಸಿವೆ, ಮೊಟ್ಟಮೊದಲಿಗೆ ಅವು ಇಡಿಯಾಗಿ ಭಗವಂತನ ಆಳಿಕೆಗೆ ಒಳಗಾಗಿವೆ (ಭಗವಂತ ನೀನು ಬಯಸಿದ ಹಾಗೆ ಎಂಬ ರೂಪದಲ್ಲಿ ಅನುವಾದಗೊಂಡಿವೆ.) ಈ ಸ್ಥಿತಿ ನಂತರ ಒಂದು ಬಗೆಯ ನಿಷ್ಕ್ರಿಯೆಯ ಸ್ಥಿತಿ (ಅದನ್ನು ಹೇಳುವುದು ಹೇಗೆ?) – ನಿಶ್ಚಲವಾದದ್ದಲ್ಲ ಬಹುಶಃ ನಿಷ್ಕ್ರಿಯೆಯಲ್ಲಿ ಗ್ರಹಿಸುವ ಸ್ಥಿತಿ ಎಂದು ಹೇಳಬಹುದು (ಶ್ರೀಮಾತೆಯವರು ತಮ್ಮ ಕೈಗಳನ್ನು ಮುಗುಳ್ನಗೆಯೊಂದಿಗೆ ತೆರೆದು ತೋರಿಸುತ್ತಾರೆ), ಆದರೆ ಅದನ್ನು ಹೇಗೆ ವಿವರಿಸಬೇಕೆಂಬುದು ನನಗೆ ತಿಳಿಯದು.

ಎಲ್ಲ ಶಬ್ದಗಳು ಮಿಥ್ಯೆಯವಾಗಿವೆ, ಆದರೆ ಮನುಷ್ಯ ಹೇಳಬಹುದು: "ಭಗವಂತ ನೀನು ಮಾತ್ರ ಇರುವಿ" ಎಂದು – ಹೌದು "ಭಗವಂತ ನೀನು ಮಾತ್ರ ಇರುವಿ" ಎಂಬ ಭಾವನೆ ಜೀವಕೋಶಗಳಲ್ಲಿದೆ. ಹೌದು, ಅದಿರುವುದು ಹಾಗೆ. ಆದರೆ ಇದೆಲ್ಲವೂ ಗಟ್ಟಿಗೊಂಡ ವಸ್ತುವಿನ ಹಾಗಿದೆ. ಶಬ್ದಗಳು ಅನುಭವವನ್ನು ಗಡಸಾಗಿರಿಸುತ್ತವೆ. ಅಲ್ಲಿ ಒಂದು ಬಗೆಯ ನಮ್ಯತೆ ಇದೆ (ವಿಶ್ವಾಸವಿರಿಸಬಹುದಾದ ನಮ್ಯತೆ): "ಭಗವಂತ ನೀನು ಸಂಕಲ್ಪಿಸಿದ ಹಾಗೆ, ನೀನು ಸಂಕಲ್ಪಿಸಿದ ಹಾಗೆ."

(ಮೌನ)

ಒಂದು ವಿಶಿಷ್ಟ ಮನೋಭಾವದಲ್ಲಿ (ಅದನ್ನು ವಿವರಿಸುವುದಾಗಲಿ ಇಲ್ಲವೆ ಅದಕ್ಕೆ ವ್ಯಾಖ್ಯೆ ಕೊಡುವುದಾಗಲಿ ಕಠಿಣವಾದದ್ದು), ಎಲ್ಲವೂ ಭಗವಂತನಾಗಿ–ಬಿಡುವುದು. ಮತ್ತು ಅಲ್ಲಿ ಅದ್ಭುತವಾದದ್ದೆಂದರೆ ಮನುಷ್ಯನಿಗೆ ಪ್ರತಿಯೊಂದು ಭಗವಂತನಾಗುವುದರ ಅನುಭವವಾದಾಗ ವೈರುಧ್ಯವೆಲ್ಲವೂ ಬಹಳ ಸ್ವಾಭಾವಿಕವಾಗಿ ಮಾಯವಾಗುತ್ತದೆ, ತೀವ್ರಗತಿಯಿಂದಾಗಲಿ ಇಲ್ಲವೆ ನಿಧಾನವಾಗಿಯಾಗಲಿ, ತತ್ಕ್ಷಣ ಇಲ್ಲವೆ ಸ್ವಲ್ಪ ಸ್ವಲ್ಪವಾಗಿ ಹಾಗಾಗುತ್ತದೆ, ಅದು ನಿಜವಾಗಿ ಅದ್ಭುತವಾದದ್ದು ಎಂದರೆ ಎಲ್ಲವೂ ಭಗವಂತನಾಗಿದೆ ಎಂಬುದರ ಪ್ರಜ್ಞೆ ಹೊಂದುವುದು. ಎಲ್ಲವನ್ನು

ಭಗವಂತನನ್ನು ಮಾಡುವ ಅತ್ಯಂತ ಒಳ್ಳೆಯ ರೀತಿ. – ಎಲ್ಲ ವಿರೋಧಗಳನ್ನು ಇಲ್ಲವಾಗಿಸಲಾಗಿರುತ್ತದೆ.

**(CWM, 11/273–74)**

*

**ಇಡಿಯಾಗಿ ಭಗವಂತನ ಪ್ರಭಾವದಡಿಯಲ್ಲಿರುವ ದೇಹ**

...ಅರ್ಧ ಪ್ರಮಾಣಗಳಲ್ಲ, ರಾಜೀ ಮಾಡಿಕೊಳ್ಳುವುದಲ್ಲ, ಅಂದಾಜು ಮಾಡುವುದಲ್ಲ, ಅದಾವುದೂ ಅಲ್ಲ. ಅದು ಇದು (ಶ್ರೀಮಾತೆಯವರು ತಮ್ಮ ಮುಷ್ಠಿಯನ್ನು ಕೆಳಗೆ ತರುತ್ತಾರೆ.)

ಮತ್ತು ಅದು ದೇಹಕ್ಕಾಗಿ ಹಾಗಿದೆ, ಪ್ರತಿಯೊಂದು ಕ್ಷಣದಲ್ಲಿ ಆಜ್ಞಾರ್ಥಕ–ವಾದದ್ದಿರುತ್ತದೆ: ಅದು ಜೀವನ ಇಲ್ಲವೆ ಮೃತ್ಯು. ಅನಿಶ್ಚಿತ ಕಾಲದವರೆಗೆ ಅಂದಾಜು ಉಳಿದುಕೊಂಡಿರಲಿಲ್ಲ. ಶತಮಾನಗಳ ಕಾಲ ಅದು ಒಟ್ಟಿನಲ್ಲಿ ಕೆಟ್ಟ ರೀತಿಯದಾಗಲಿ, ಒಳ್ಳೆಯ ರೀತಿಯದಾಗಲಿ ಆಗಿರಲಿಲ್ಲ. – ಇನ್ನು ಮುಂದೆ ಅದು ಹಾಗಿರುವುದಿಲ್ಲ.

ಅತಿಮಾನಸ ದೇಹ ರೂಪುಗೊಳ್ಳುವುದಕ್ಕೆ ಮಾರ್ಗ ಇದೇ ಎಂದು ನನ್ನ ದೇಹ ತಿಳಿದಿದೆ: ಅದು ಪೂರ್ತಿ ಭಗವಂತನ ಪ್ರಭಾವದಡಿ ಇರಬೇಕು – ಅದರಲ್ಲಿ ರಾಜೀಮಾಡಿಕೊಳ್ಳುವಿಕೆ ಇಲ್ಲ, "ಅದು ಬರಲಿದೆ" ಎನ್ನುವುದಿಲ್ಲ ಅದು ಹಾಗಿರುವುದಿಲ್ಲ, ಅದು ಇರುವುದು ಹೀಗೆ (ಶ್ರೀಮಾತೆಯವರು ಮುಷ್ಠಿಯನ್ನು ಕೆಳಗೆ ತರುತ್ತಾರೆ) ಭಯಾನಕವಾದ ದೈವೀ ಸಂಕಲ್ಪ.

ಆದರೆ ವಿಷಯಗಳು ತೀವ್ರಗತಿಯಿಂದ ಸಾಗಲು ಇರುವ ಮಾರ್ಗ ಅದೊಂದೇ.

ಎಲ್ಲ ಕಾಲಕ್ಕೆ ನೀವು ಜೀವನ ಹಾಗೂ ಮೃತ್ಯು ಇವುಗಳ ನಡುವೆ ಹಾರಾಡುತ್ತಿರುವಂತೆ ನಿಮಗೆ ಭಾವನೆ ಇದ್ದ ಹಾಗಿರುತ್ತದೆ ಮತ್ತು ನೀವು ಸರಿಯಾದ ಮನೋಭಾವ ಹೊಂದಿದ ತತ್ಕ್ಷಣ – ಸಂಬಂಧಪಟ್ಟ ಭಾಗ ಸರಿಯಾದ ಮನೋಭಾವ ಹೊಂದಿದ ತತ್ಕ್ಷಣ ಅದು ಸರಿಯಾಗುತ್ತದೆ. ಬಹಳ ಸ್ವಾಭಾವಿಕವಾಗಿ ಮತ್ತು ಸುಲಭವಾಗಿ ಅದು ಸರಿಯಾಗುತ್ತದೆ. ಅದು ಅದ್ಭುತವಾದದ್ದು. ಆದರೆ ಅದು ಭಯಾನಕವಾದ ವಿಷಯ, ಏಕೆಂದರೆ ಅಲ್ಲಿ ನಿರಂತರ ಅಪಾಯವಿರುತ್ತದೆ ಸರಿ, ನನಗೆ ತಿಳಿಯದು, ದಿನದಲ್ಲಿ ನೂರುಸಲ (ಜೀವಕೋಶಗಳಿಗೆ) ಜೀವನ ಇಲ್ಲವೆ ವಿಭಜನಗೊಳ್ಳುವಿಕೆ ಇವುಗಳಿರುವ ಭಾವನೆ



ಬರುತ್ತದೆ. ಅವುಗಳಿಗೆ ಸಾಮಾನ್ಯವಾಗಿ ರೂಢಿ ಇರುವ ಹಾಗೆ ಅವು ಸಂಕುಚಿತಗೊಳ್ಳದಿದ್ದರೆ ಪ್ರತಿಯೊಂದು ಸರಿಯಾಗಿ ಸಾಗುತ್ತದೆ. ಆದರೆ ಅವು ಕಲಿತುಕೊಳ್ಳುತ್ತಿವೆ... (ಶ್ರೀಮಾತೆಯವರು ಸ್ವ–ನಿವೇದನೆ ಮಾಡುವ ಹಾಗೆ ತಮ್ಮ ಕೈಯನ್ನು ತೆರೆದಿರಿಸುತ್ತಾರೆ) ಆಗ ಅದು ಸರಿಯಾಗುತ್ತದೆ. ಅದು ಒಂದು ಬಗೆಯ ಒತ್ತಾಯ ತರುವುದರ ಮೂಲಕ ದೇಹಕ್ಕೆ ಶಾಶ್ವತತೆಯನ್ನು ಕಲಿಸಿಕೊಡುತ್ತಿರುವ ಹಾಗಿದೆ. ಅದು ನಿಜವಾಗಿ ಸ್ವಾರಸ್ಯಕರವಾದದ್ದು. ಮತ್ತು ಆಗ ಬಾಹ್ಯ ಪರಿಸ್ಥಿತಿಗಳು (ಸಾಮಾನ್ಯ ದೃಷ್ಟಿಕೋನದಿಂದ) ಭಯಾನಕವಾಗುತ್ತಿರುವುದನ್ನು ನಾನು ನೋಡುತ್ತೇನೆ.

ನಾವೇ ಆ ವಿಷಯ ಪೂರ್ತಿಗೊಳ್ಳುವುದನ್ನು ತಡೆಹಿಡಿಯುತ್ತೇವೆ, ಅದು ನಮ್ಮದೇ ನಿಯಂತ್ರಣ ದೈವೀ ಶಕ್ತಿಯನ್ನು ತಡೆಹಿಡಿದ ಹಾಗಿರುತ್ತದೆ; ಅದು ಆ ಬಗೆಯ ಏನೋ ಒಂದಾಗಿರುತ್ತದೆ. ಮನುಷ್ಯ ... (ಶ್ರೀಮಾತೆಯವರು ಕೈಗಳನ್ನು ತೆರೆದಿರಿಸುತ್ತಾರೆ).

(ಮೌನ)

ಅವಚೇತನ (sub-conscient) ತನ್ನ ನಿಯಂತ್ರಣವನ್ನು ಉಳಿಸಿಕೊಂಡು ಬರದಿದ್ದರೆ ಎಲ್ಲವೂ ತಪ್ಪಾಗುವುದು ಎಂಬ ಮನವರಿಕೆ ಹೊಂದಿದೆ ಎಂದು ನನ್ನ ನಂಬಿಕೆ ಇದೆ. ಆ ವಿಷಯವೇ ಯಾವಾಗಲೂ "ಆಹಾ! ಜಾಗರೂಕನಾಗಿರು, ಕಾಳಜಿ ವಹಿಸು" ಎಂದು ಹೇಳುತ್ತಿರುತ್ತದೆ. (ಶ್ರೀ ಮಾತೆಯವರು ಕೈಗಳನ್ನು ತೆರೆದಿರಿಸುತ್ತಾರೆ).

**(CWM, 11/297–300)**

*

**ಹೊಸ ದೇಹ**

ಮೊಟ್ಟಮೊದಲಿಗೆ ಬೆಳಗಿನ ಜಾವದಲ್ಲಿ ನನ್ನ ದೇಹ ಅತಿಮಾನಸ ದೇಹ ಇಲ್ಲವೆ ಅತಿಮಾನಸದತ್ತ ಸಂಕ್ರಮಣ ಸ್ಥಿತಿಯಲ್ಲಿರುವ ದೇಹವಾದದ್ದನ್ನು ನೋಡಿದೆ (ಅದನ್ನು ಹೇಳುವುದು ಹೇಗೆ?), ಆದರೆ ನನ್ನ ದೇಹ ಒಟ್ಟಿನಲ್ಲಿ ಹೊಸದಾಗಿತ್ತು, ಅದು ಲಿಂಗರಹಿತವಾಗಿತ್ತು ಎನ್ನುವ ಅರ್ಥದಲ್ಲಿ ಹಾಗಿತ್ತು. – ಅದು ಸ್ತ್ರೀಯೂ ಆಗಿರಲಿಲ್ಲ, ಪುರುಷನೂ ಆಗಿರಲಿಲ್ಲ. ಅದು ಗಾಢ ಬಿಳಿ ಬಣ್ಣದ್ದಾಗಿತ್ತು. ಅದರೆ ನನ್ನ ಚರ್ಮ ಬಿಳಿಯದಾದುದರಿಂದ ಅದು ನನಗೆ ಸರಿಯಾಗಿ ತಿಳಿಯದು. ಅದು ತೆಳುವಾಗಿತ್ತು ಮತ್ತು ಸುಂದರವಾಗಿತ್ತು. ನಿಜವಾಗಿಯೂ ಸಾಮರಸ್ಯವಿದ್ದ ರೂಪ. ಅದು ಮೊದಲ ಸಲ ಹಾಗಿತ್ತು. ನನಗದು ತಿಳಿದಿರಲೇ ಇಲ್ಲ, ಅದು

ಹೇಗಿರಬಹುದೆಂಬುದರ ಬಗ್ಗೆ ನಾನು ಕಲ್ಪಿಸಿಕೊಂಡಿರಲಿಲ್ಲ, ನಾನು ಹಾಗಿದ್ದುದನ್ನು, ಹಾಗೆ ಆಗಿರುವುದನ್ನು ನಾನು ನೋಡಿದೆ.

**(CWM, 11/301)**

*

**ಪ್ರಶ್ನೆ:** *ಮೊನ್ನೆಯ ದಿನ ನೀವು ಸಂಕ್ರಮಣ ಸ್ಥಿತಿಯಲ್ಲಿದ್ದ ನಿಮ್ಮ ದೇಹದ ದರ್ಶನವನ್ನು ನೋಡಿದೆ ಎಂದು ಹೇಳಿದಿರಿ.*

**ಶ್ರೀಮಾತೆ:** ಹೌದು, ಆದರೆ ನಾನು ಹಾಗಿದ್ದೆ. ಅದು ನಾನೇ ಆಗಿತ್ತು. ನನ್ನನ್ನು ನಾನು ಕನ್ನಡಿಯಲ್ಲಿ ನೋಡಿಕೊಳ್ಳಲಿಲ್ಲ. ನಾನು ಹಾಗಿರುವುದನ್ನು ನೋಡಿದೆ (ಶ್ರೀಮಾತೆಯವರು ಶಿರವನ್ನು ಬಗ್ಗಿಸಿ ತಮ್ಮ ದೇಹದತ್ತ ನೋಡುತ್ತಾರೆ.) ನಾನು ಆ ರೀತಿಯಾಗಿದ್ದೆ.

ಹಾಗೆ ನೋಡಿದ್ದು ಮೊದಲನೆಯ ಸಲವಾಗಿತ್ತು. ಅದು ಬೆಳಿಗ್ಗೆ ನಾಲ್ಕು ಗಂಟೆಯ ಸುಮಾರು ಆಗಿರಬಹುದು. ಅದು ಬಹಳ ಸ್ವಾಭಾವಿಕವಾಗಿತ್ತು – ನಾನು ಕನ್ನಡಿಯಲ್ಲಿ ನನ್ನನ್ನು ನೋಡಿಕೊಳ್ಳಲಿಲ್ಲ. ನಾನು ಬಹಳ ಸ್ವಾಭಾವಿಕವಾಗಿದ್ದೆ, ನಾನು ನೋಡಿದ್ದು ಮಾತ್ರ ನನ್ನ ನೆನಪಿನಲ್ಲಿದೆ. (ಎದೆಯಿಂದ ನಡುವಿರುವವರೆಗೆ ಎಂಬ ಸಂಜ್ಞೆ). ನನ್ನ ಮೈಮೇಲೆ ಕೇವಲ ಪರದೆಯೊಂದಿತ್ತು. ಹಾಗಾಗಿ ಸ್ವಲ್ಪ ಭಾಗ ಮಾತ್ರ ನೋಡಿದೆ. ಎದೆಯಿಂದ ಸೊಂಟದವರೆಗಿನ ಮುಂಡ (trunk) ಬಹಳ ಭಿನ್ನವಾಗಿತ್ತು. ಅದು ಸ್ತ್ರೀಯದೂ ಆಗಿರಲಿಲ್ಲ, ಪುರುಷನದೂ ಆಗಿರಲಿಲ್ಲ.

ಅದು ಸುಂದರವಾಗಿತ್ತು. ನನ್ನದು ತೆಳುಕಟ್ಟಿನ ದೇಹವಾಗಿತ್ತು, ಆದರೆ ತೆಳ್ಳಗಾಗಿರಲಿಲ್ಲ. ಚರ್ಮ ಬಹಳ ಬಿಳಿಯದಾಗಿತ್ತು, ಚರ್ಮ ನನ್ನ ಚರ್ಮದ ಹಾಗೆಯೇ ಇತ್ತು. ಲಿಂಗ ಮಾಯವಾಗಿತ್ತು. (ಶ್ರೀಮಾತೆಯವರು ಎದೆಯತ್ತ ತೋರಿಸುತ್ತಾರೆ) ಅಲ್ಲಿದ್ದುದೆಲ್ಲ ಮಾಯವಾಗಿತ್ತು. ಅದನ್ನೆಲ್ಲ ಹೇಗೆ ಹೇಳಬೇಕು ಎಂಬುದು ನನಗೆ ತಿಳಿಯದು. ಅದೊಂದು ಹೊರನೋಟವಿದ್ದ ಹಾಗಿತ್ತು, ಆದರೆ ರೂಪವೆಂಬುದಿರಲಿಲ್ಲ. (ಶ್ರೀಮಾತೆಯವರು ತಮ್ಮ ಎದೆಯನ್ನು ಮುಟ್ಟಿ ಹೇಳುತ್ತಾರೆ) ಪುರುಷರಿಗೆ ಇದ್ದಷ್ಟೂ ಇಲ್ಲ. ಬಹಳ ಬಿಳಿಯಾದ ಚರ್ಮ, ಎಲ್ಲವೂ ಸಮತಲದ್ದಾಗಿತ್ತು, ಹೊಟ್ಟೆಯಿರಲಿಲ್ಲ, ಅನ್ನಕೋಶವಿರಲಿಲ್ಲ. ಎಲ್ಲವೂ ತೆಳುಕಟ್ಟಿನದಾಗಿತ್ತು. ಸರಿ ನಾನು ವಿಶೇಷ ಲಕ್ಷ್ಯಕೊಡಲಿಲ್ಲ, ಏಕೆಂದರೆ ನಾನೇ ಹಾಗಿದ್ದೆ ಮತ್ತು ಅದು ಬಹಳ ಸ್ವಾಭಾವಿಕವಾದದ್ದೆಂದು ಕಂಡುಕೊಂಡೆ. ...



ಅದು ಹೇಗಿತ್ತೆಂಬುದನ್ನು ನಾನು ನೋಡಲಿಲ್ಲ, ಏಕೆಂದರೆ ಅದು ಬಹಳ ಸ್ವಾಭಾವಿಕವಾಗಿತ್ತು, ಹಾಗಾಗಿ ನಾನು ವಿವರವಾದ ವರ್ಣನೆಯನ್ನು ಕೊಡಲಾರೆ. ಸರಳವಾಗಿ ಅದು ಸ್ತ್ರೀಯ ಇಲ್ಲವೆ ಪುರಷನ ದೇಹವಾಗಿರಲಿಲ್ಲ – ಅದು ಸ್ಪಷ್ಟವಿದೆ ಬಾಹ್ಯ ರೇಖೆ, ನೆರಳಿನಂತೆ ಕಾಣುವ ಛಾಯಾಕೃತಿ ಅತ್ಯಂತ ತರುಣ ವ್ಯಕ್ತಿಯದು ಇರುವ ಹಾಗಿತ್ತು. ಮಾನವ ರೂಪಗಳಿಗೆ ಹೊರನೋಟವಾಗಿರುವ ಹಾಗಿತ್ತು. (ಶ್ರೀಮಾತೆಯವರು ಗಾಳಿಯಲ್ಲಿ ಅದನ್ನು ಚಿತ್ರಿಸಿ ತೋರಿಸುತ್ತಾರೆ) ಅಲ್ಲಿ ಹೆಗಲು ಇತ್ತು, ಆಕಾರವಿತ್ತು, ರೂಪವೊಂದರ ಹೊರನೋಟವಿತ್ತು. ಮನುಷ್ಯ ತನ್ನನ್ನೇ ನೋಡುವ ಹಾಗೆ ನೋಡಿದೆ. ಅಲ್ಲಿ ನನ್ನ ಮೇಲೆ ಹೊದಿಕೆಯ ರೀತಿಯಲ್ಲಿ ಒಂದು ಬಗೆಯ ಪರದೆ ಇತ್ತು. ಅದು ಸತ್ತೆಯಿರುವ ಒಂದು ರೀತಿ, ನನಗೆ ಆಶ್ಚರ್ಯಕರ–ವಾಗಿರಲಿಲ್ಲ, ಅದು ಸತ್ತೆಯಿರುವ ಸ್ವಾಭಾವಿಕ ರೀತಿ.

**ಪ್ರಶ್ನೆ:** *ನಿಮ್ಮ ಹೊಸ ದೇಹವನ್ನು ನೋಡಲು ನನಗೆ ಅನುವು ಮಾಡಿಕೊಡಿರಿ. ನಿಮ್ಮ ಸಹಾಯದಿಂದ ಅದು ಸಾಧ್ಯವಾಗಬಹುದು ಎಂದು ನನಗನಿಸುತ್ತದೆ.*

**ಶ್ರೀಮಾತೆ:** ಸಹಾಯ ಯಾವಾಗಲೂ ಇದ್ದೇ ಇರುತ್ತದೆ, ಆದರೆ ಅದು ಗಾಢವಾಗಲಿರುವುದು, ಏಕೆಂದರೆ ದೀರ್ಘಕಾಲದವರೆಗೆ ನೀನು ಕಾದುಕೊಂಡಿರಲು ಶಕ್ತನಾಗಬೇಕು.

**ಪ್ರಶ್ನೆ:** *ನಿಮ್ಮ ಹೊಸ ದೇಹದಲ್ಲಿ ನಿಮ್ಮನ್ನು ನೋಡಲು ಬಹಳ ಇಷ್ಟಪಡುತ್ತೇನೆ. ಅದು ಸಾಧ್ಯವಾಗುವವರೆಗೆ ನೀವು ಕೊಡುತ್ತಿರುವುದನ್ನು ಸ್ವೀಕರಿಸಲು ಹಾಗೂ ಜೀರ್ಣಿಸಿ–ಕೊಳ್ಳಲು ಶಕ್ತನಾಗುವಂತೆ ಅನುಗ್ರಹಿಸಿರಿ.*

**ಶ್ರೀಮಾತೆ:** ನೀನು ನೋಡಲು ಬಯಸುವುದು ಹೊಸದಾಗಿ ತೋರಿಬಂದ ನನ್ನ ದೇಹವನ್ನೋ ಇಲ್ಲವೆ ಪರಿವರ್ತನೆಗೊಂಡ ದೇಹವನ್ನೋ?

ಏಕೆಂದರೆ ಹೊಸದಾದ ದೇಹವೊಂದರಲ್ಲಿ, ನನ್ನ ಸದ್ಯದ ಪ್ರಜ್ಞೆಯನ್ನು ಭಾಗಶಃ ಕಳೆದುಕೊಂಡಾದರೂ, ಸಂಪೂರ್ಣವಾಗಿ ಜೀವಂತವಿರುವಂತೆ ಪ್ರವೇಶಿಸುವುದು ಸಾಧ್ಯವಾಗುವಂತೆ ಮಾಡಬಲ್ಲ ಯಾರನ್ನೂ ನಾನು ಕಂಡಿಲ್ಲ. ಇದು ಸಹಜವಾಗಿ ಸಾಪೇಕ್ಷ ರೀತಿಯಲ್ಲಿ ತೀವ್ರಗತಿಯ ವಿಧಾನವಾಗಬಹುದು, ಆದರೆ ಅದು ಈ ದೇಹದ ಜೀವಕೋಶಗಳಿಗೆ ನ್ಯಾಯ ಒದಗಿಸುವಂತಹದಲ್ಲ, ಸ್ವಲ್ಪಮಟ್ಟಿಗೆ ಒತ್ತಾಯ–ಪೂರ್ವಕವಾದದ್ದು ಎನಿಸುವ ಪರಿವರ್ತನೆಯ ವಿಧಾನಕ್ಕೆ ಸ್ವ–ಸಮ್ಮತಿಯಿಂದ ತಮ್ಮನ್ನು ಅನುವು ಮಾಡಿಕೊಡುತ್ತವೆ.

ಸಂದರ್ಭ ಏನೇ ಇರಲಿ, ನಾನು ಈಗಾಗಲೆ ಹೇಳಿದಂತೆ, ಅದಕ್ಕಾಗಿ ದೀರ್ಘಕಾಲದವರೆಗೆ ಕಾದುಕೊಂಡಿರಬೇಕಾಗುತ್ತದೆ, ಹಾಗೂ ಹಲವಾರು ಜನ್ಮದಿನಗಳು ಸಾಗಿ ಹೋಗುವುದನ್ನು ನೋಡಬೇಕಾಗುತ್ತದೆ. ಅದು ಸಹಜವಾಗಿ ಬಹಳ ಒಳ್ಳೆಯದು ಮತ್ತು ನಾನು ಅದನ್ನು ಒಪ್ಪುತ್ತೇನೆ.

**ಪ್ರಶ್ನೆ:** *ಆದರೆ ಶ್ರೀಮಾತೆಯವರೆ, ನಮಗೆ ಅದು ಬೇಕಾಗಿದೆ, ಈ ತೇಜಃಪೂರ್ಣ ಹಾಗೂ ಪ್ರಕಾಶಮಯವಾದ, ಪರಿವರ್ತನೆಗೊಂಡ ದೇಹವನ್ನು ನಾವು ನೋಡಲು ಬಯಸುತ್ತೇವೆ.*

**ಶ್ರೀಮಾತೆ:** ಸಾಮಾಜಿಕ ಪರಿಸರವಿರಬೇಕು, ಪ್ರಕಟನೆಗಾಗಿ ಅಭೀಪ್ಸೆಪಡುವ ವ್ಯಕ್ತಿಗಳಿರಬೇಕು. ಸದಿಚ್ಛೆಯುಳ್ಳ ವ್ಯಕ್ತಿಗಳು, ಅಭಿವೃದ್ಧಿ ಪಡೆಯುತ್ತಿರುವ ಜನರು, ಪರಿವರ್ತನೆಗಾಗಿ ಅಭೀಪ್ಸೆಪಡುವ ಜನರು ಇರುವ ಪರಿಸರವೊಂದಿರಬೇಕು, ಅವರಿಂದ ಸ್ವಯಂಪ್ರೇರಿತ ಸಹಕಾರ, ಸಾಮರಸ್ಯ ಹಾಗೂ ಶಾಂತಿ ದೊರಕುವಂತಾಗಬೇಕು.

ನಾನು ಅವತರಣ ಮಾಡಲು ತಕ್ಕುದಾದ ಸಾಮಾಜಿಕ ಪರಿಸರವಿರಬೇಕು. ಇದರದೇ ಕೊರತೆ ಇನ್ನೂ ಇದೆ. ನನ್ನಲ್ಲಿ ಅಹಂಕಾರ ಇಲ್ಲ, ನಾನು ಇಡಿಯಾಗಿ ಭಗವಂತನ ಪರವಾಗಿ ಇದ್ದೇನೆ ಎಂದು ಹೇಳಬಲ್ಲ ವ್ಯಕ್ತಿ ಒಬ್ಬನಾದರೂ ಇರುವನೆ? ಏನನ್ನೂ ಕಾದಿರಿಸಿಕೊಂಡಿರದ, ಸಂಪೂರ್ಣವಾಗಿ ಶರಣಾಗತರಾದವರು ಯಾರಾದರೂ ಇರುವರೆ? ಒಬ್ಬರಾದರೂ ಇರುವರೇ? ಇನ್ನೂ ಇಲ್ಲ. ನಾನು ಕಾದುಕೊಂಡಿರುತ್ತೇನೆ.

ಅದನ್ನು ಎಂದು ಕೈಕೊಳ್ಳಲಾಗಬಹುದೆಂಬುದನ್ನು ನಾವು ನೋಡುವಾ, ಕಾದುಕೊಂಡಿರೋಣ. ಪರಮೋಚ್ಚ ದೈವೀ ಪ್ರಭು ತನ್ನನ್ನು ಇಲ್ಲಿ ಕೆಳಗೆ (ತಮ್ಮ ದೇಹವನ್ನು ಸೂಚಿಸುತ್ತಾರೆ) ಪ್ರಕಟಿಸುವ ದಿನ ಬರುವುದನ್ನು ನಾವು ನೋಡುವೆವು.

**(Blessings of the Grace, pp. 26–27)**

*

**ಭಗವಂತನ ತೋಳುಗಳಲ್ಲಿ ಕರೆದೊಯ್ಯಲಾದ ಕೂಸು**

ಎರಡು ಅಥವಾ ಮೂರು ದಿನಗಳ ಹಿಂದೆ ನಡೆದ ಸಂಗತಿ. ನಿಖರವಾಗಿ ಅದು ನನ್ನ ನೆನಪಿಗೆ ಬರುತ್ತಿಲ್ಲ. ಅಲ್ಲಿ ಒಂದು ದೊಡ್ಡ ತೊಂದರೆಯಿತ್ತು, ಮತ್ತು ಕೂಡಲೆ ನನ್ನನ್ನು ಆವರಿಸಿಕೊಂಡಿರುವ ಏನೋ ಒಂದಿರುವುದರ ಭಾವನೆ



ಬಂದಿತು, (ಸೂಚನೆ) ಅದು ಕೂಸೊಂದನ್ನು ಭಗವಂತ ತನ್ನ ತೋಳುಗಳಲ್ಲಿ ಕೊಂಡೊಯ್ಯುತ್ತಿರುವ ರೀತಿಯಾಗಿತ್ತು. ನಿಮಗೆ ಅರ್ಥವಾಯಿತೆ? ಅದು ಹಾಗಿತ್ತು. ನಾನು ಕೂಸೊಂದು ಇದ್ದ ಹಾಗಿದ್ದು ಭಗವಂತನ ತೋಳುಗಳಲ್ಲಿ ನನ್ನನ್ನು ಕೊಂಡೊಯ್ಯುತ್ತಿರುವಂತಿತ್ತು. ನಿಮಗೆ ಅರ್ಥವಾಯಿತೆ? ಸ್ವಲ್ಪ ಸಮಯ ಕಳೆದ ನಂತರ (ಅದು ಹೆಚ್ಚಾಗಿ ದೀರ್ಘಕಾಲವಾಗಿತ್ತು) ಅದು ಆ ರೀತಿ ಕೇವಲ ದೈವೀ ಸಾನ್ನಿಧ್ಯದಲ್ಲಿದ್ದಾಗ ನೋವು ಮಾಯವಾಯಿತು. ನೋವು ಹೋಗಲಿ ಎಂದು ಅದು ಕೇಳಲಿಲ್ಲ. ಅದು ಹೊರಟು ಹೋಗಿಬಿಟ್ಟಿತು. ಅದು ಸ್ವಲ್ಪ ಸಮಯ ತೆಗೆದುಕೊಂಡಿತ್ತು, ಹೊರಟು ಹೋಯಿತು.

ನಾನು ಕೂಸೊಂದಾಗಿರುವ, ಭಗವಂತನ ತೋಳುಗಳಲ್ಲಿ ಆಸರೆ ಪಡೆದಿರುವ ಭಾವನೆ ನನಗೆ ಅತ್ಯಂತ ಸಂಪೂರ್ಣವಾಗಿ ಬಂದಿತು. ಅದು ಅಸಾಧಾರಣವಾಗಿತ್ತು.

(ಮೌನ)

ಸರಿ, ಕೆಲಕಾಲದವರೆಗೆ "ನೀನು ಸಂಕಲ್ಪಿಸಿದ ಹಾಗೆ, ನೀನು ಸಂಕಲ್ಪಿಸಿದ ಹಾಗೆ" ಎನ್ನುವ ರೀತಿಯಲ್ಲಿರುತ್ತದೆ ಮತ್ತು ನಂತರ ಅದು ಕೂಡ ನಿಂತುಹೋಗುತ್ತದೆ. ... (ಅರ್ಪಣೆ ಮಾಡುವ ರೀತಿಯಲ್ಲಿ ಶ್ರೀಮಾತೆಯವರು ಕೈಗಳನ್ನು ಮೇಲಕ್ಕೆತ್ತುತ್ತಾರೆ)

**ಪ್ರಶ್ನೆ:** *ಬದಲಾಗಬೇಕಾದುದು ಏಕಾಗ್ರತೆಯ ಮಾದರಿಯಾಗಿದೆಯೆ?*

**ಶ್ರೀ ಮಾತೆ:** ಹೌದು. ...

ನಿಜವಾಗಿ ಅದು ಕೂಸೊಂದರ ಸಾಮರ್ಥ್ಯಹೀನತೆ, ಅರ್ಥವಾಯಿತೆ? ಆದರೆ ಅದು ಯೋಚಿಸಿ ಕಂಡುಕೊಂಡ ವಿಷಯವಲ್ಲ, ಸಂಕಲ್ಪಿಸಿದ್ದಲ್ಲ, ಅದು ಪರಿಪೂರ್ಣವಾಗಿ ಸ್ವಯಂಪ್ರೇರಿತವಾಗಿತ್ತು, ಮತ್ತು ನಂತರ ಅಲ್ಲಿಂದ ನೀವೊಂದು ಸ್ಥಿತಿಯಲ್ಲಿ ಸಾಗಿ ಹೋಗುತ್ತೀರಿ. ... (ಶ್ರೀಮಾತೆಯವರು ದಿವ್ಯಾನಂದದ ಮುಗುಳ್ನಗೆಯೊಂದಿಗೆ ಕೈಗಳನ್ನು ತೆರೆದಿರಿಸುತ್ತಾರೆ) ಸಂಕಲ್ಪಿಸುವ, ಕಾರ್ಯವನ್ನು ಕೈಕೊಳ್ಳುವ ಯಾರೋ ಒಬ್ಬರು ಇರುವರು ಇತ್ಯಾದಿ ಭಾವನೆ ಬರುತ್ತಿರುವವರೆಗೆ ಅದು ನಿರುಪಯುಕ್ತವಾದದ್ದು. (ಮುಗುಳ್ನಗೆಯೊಂದಿಗೆ ಕೈಗಳನ್ನು ತೆರೆದಿರಿಸುವ ಅದೇ ಸೂಚನೆ).

**(CWM, 11/294–95)** **– ಶ್ರೀಮಾತೆ**

*



## ಮೃತ್ಯುವಿನ ಮೇಲೆ ಜಯ

### ಎಲ್ಲವೂ ಒಳ್ಳೆಯದಾಗಿದೆ ಮತ್ತು ಇನ್ನೂ ಹೆಚ್ಚು ಒಳ್ಳೆಯದಾಗುತ್ತದೆ

ನಾವು ಸಂಕ್ಷಿಪ್ತವಾಗಿ ಹೇಳಬಹುದಾದುದು ಹೀಗಿದೆ: ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು ಹೊರತಂದ ಸತ್ಯಪ್ರಜ್ಞೆಯುಳ್ಳ ಎಲ್ಲವನ್ನೂ ಪ್ರಕಾಶಮಯ ಮಾಡುವ ಅತಿಮಾನಸದ ಶ್ರೇಷ್ಠ ಶೋಧದ ಸಾಮರ್ಥ್ಯದಿಂದ ಶ್ರೀಮಾತೆಯವರು ಪೃಥ್ವಿಯ ಪರಿವರ್ತನೆಗಾಗಿ, ಮಾನವ ದೇಹದ ಜೀವಕೋಶಗಳ ದೈವೀಕರಣಕ್ಕಾಗಿ ಕೈಕೊಂಡ ತಮ್ಮ ಕಾರ್ಯದ ಹಿತಾಸಕ್ತಿಗಾಗಿ ತಮ್ಮ ಭೌತಿಕ ಹೊದಿಕೆಯನ್ನು ಬಿಟ್ಟುಕೊಡುವುದನ್ನು ಆಯ್ದುಕೊಂಡರು. ಪೃಥ್ವಿಯ ಜೀವನದಲ್ಲಿ ಸವಾಲು ಹಾಕುವ ಪರಿಸ್ಥಿತಿಗಳು ಪ್ರಚಲಿತವಿದ್ದಾಗ ಇಂತಹ ಕ್ರಿಯೆಯಿಂದ ಆಗುವ ಅನುಕೂಲತೆ ಕುರಿತು ಶ್ರೀಮಾತೆಯವರು ಹೇಳಿದ್ದರು. ಅವರು ಹೇಳಿದ್ದು ಹೀಗಿದೆ: ಕ್ರಿಯೆಗಾಗಿ ಈಗ ಶ್ರೀ ಅರವಿಂದರು ದೇಹದಲ್ಲಿದ್ದಾಗಿನಗಿಂತ ಹೆಚ್ಚಿನ ಸಾಮರ್ಥ್ಯ ಹೊಂದಿದ್ದಾರೆ, ಆ ಹೆಚ್ಚಿನ ಸಾಮರ್ಥ್ಯದ ಕ್ಷಮತೆಯನ್ನು ಅವರು ದೇಹತ್ಯಾಗದ ಮೂಲಕ ಪಡೆದುಕೊಂಡರು, ಅದು ಅವರಿಗೆ ಅವಶ್ಯವಾಗಿತ್ತು. ಶ್ರೀಮಾತೆಯವರು ಹೇಳಿದ್ದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಗುರುತಿಸಿ ಹೇಳಬಹುದಾದುದು ಹೀಗಿದೆ: "ಶ್ರೀ ಅರವಿಂದರ ಕ್ರಿಯೆ" ಮೂರ್ತರೂಪದ್ದಾಗಿತ್ತು ಮತ್ತು ಬಹುಮಟ್ಟಿಗೆ "ಭೌತಿಕವಾದದ್ದಾಗಿತ್ತು" ಇಂದು ಇದೇ ಅವರ ಕ್ರಿಯೆಗೆ ಅರ್ಥ ನೀಡುತ್ತದೆ.



ಶ್ರೀ ಮಾತೆಯವರ ಭೌತಿಕ ಸಾನ್ನಿಧ್ಯವೇ ಸ್ವತಃ ಬಹಳ ಕಾಲದವರೆಗೆ ಉಪಸ್ಥಿತವಿರುವುದಿಲ್ಲ ಎಂಬುದು ಯಾರಿಗೆ ತಿಳಿದಿದೆ? ಅವರ ಜೊತೆಗೆ ಅದಾಗಲೆ ಅತಿಮಾನಸ ದೇಹವಿತ್ತು ಎಂಬುದರ ಬಗ್ಗೆ ನಮಗೆ ಅರಿವಿದೆ. ನಮ್ಮ ಸಲುವಾಗಿ ಮಾಡಿದ ದೇಹಧಾರಣೆಯೊಂದಿಗೆ ಅದು ಬೆಸೆದುಕೊಳ್ಳಲು ಕಾದುಕೊಂಡಿತ್ತು. ಅತಿಮಾನಸ ದೇಹಕ್ಕೆ ಮಾನವ ರೂಪ ಸಂಪೂರ್ಣವಾಗಿ ತೆರೆದುಕೊಳ್ಳಬೇಕಾಗಿತ್ತು ಎಂಬುದನ್ನು ಕುರಿತು ಅವರು ಇತ್ತೀಚೆಗೆ ನಡೆಸಿದ ದೀರ್ಘಕಾಲದ ಹೋರಾಟದ ಬಗ್ಗೆ ನಮಗೆ ಅರಿವಿದೆ. ಬಹುಶಃ ಈ ಮಾನವ ರೂಪ ಸಾಕಷ್ಟು ಕಾರ್ಯ ಕೈಕೊಂಡಿತ್ತು ಮತ್ತು ಅದರ ಅತಿಯಾದ ಸಂಕಟ ಅತಿಮಾನಸ ದೇಹ ಪ್ರಕಟವಾಗುವಂತೆ ಮಾಡಲು ಇನ್ನು ಮುಂದೆ ಅವಶ್ಯವಾಗಿರಲಿಕ್ಕಿಲ್ಲ. ಬಹುಶಃ ಆ (ಭೌತಿಕ) ದೇಹ ಇನ್ನೊಂದು ದೇಹದ ಸಿದ್ಧಿಯನ್ನು ಅರಗಿಸಿಕೊಂಡು ಆ ಮೂಲಕ ಅದರ ಸೂಕ್ಷ್ಮಭೌತಿಕ ದ್ರವ್ಯಕ್ಕೆ ಸಾಕಷ್ಟು ಸಾಂದ್ರತೆಯನ್ನು ಗಳಿಸಿಕೊಂಡು ತನ್ನದೇ ಆದ ಭೌತಿಕ ರೂಪವನ್ನು ಬಹಳ ದೂರವೆನಿಸದ ಕಾಲಗತಿಯಲ್ಲಿ ತಳೆಯಬಹುದು.

ನಾವು ಕೇವಲ "ಎಲ್ಲವೂ ಒಳ್ಳೆಯದಾಗುವುದು" ಎಂದು ಹೇಳಬಾರದು. "ಎಲ್ಲವೂ ಒಳ್ಳೆಯದಾಗಿದೆ – ಇನ್ನು ಮುಂದೆ ಇನ್ನೂ ಹೆಚ್ಚು ಒಳ್ಳೆಯದಾಗುವುದು" ಎಂದು ಹೇಳಬೇಕು.

**(The Mother Past, Present, Future: Amal Kiran, pp. 16–18)**

*

### ವರ್ತಮಾನ ಕಾಲದಲ್ಲಿ ಹಾಗೂ ಭವಿಷ್ಯತ್ಕಾಲದಲ್ಲಿ ಶ್ರೀಮಾತೆಯವರ ದೇಹತ್ಯಾಗದ ಪರಿಣಾಮಗಳು

ಮೇ ತಿಂಗಳ ಮಧ್ಯಕಾಲದಿಂದ ಹಿಡಿದು ನವ್ಹೆಂಬರ ತಿಂಗಳ ಮಧ್ಯಕಾಲದ ವರೆಗೆ ಬಾಹ್ಯ ಜೀವನದಿಂದ ಹಿಂದೆಗೆದುಕೊಂಡಿದ್ದ ಹಾಗೂ ದಿರ್ಘಾವಧಿಯ ಸಮಾಧಿ ಸ್ಥಿತಿಗಳಲ್ಲಿ ಮುಳುಗಿರುತ್ತಿದ್ದ ಆ ಆರು ತಿಂಗಳುಗಳ ಅವಧಿಯನ್ನು ಶ್ರೀಮಾತೆಯವರು ಸೂಕ್ಷ್ಮ ಭೌತಿಕದ ಪರಿವರ್ತನೆಗಾಗಿ ನಡೆಸಿದ ಹೋರಾಟದಿಂದ ಒಟ್ಟುಗೂಡಿಸಿದ ಸತ್ವವನ್ನು ಅತಿಮಾನಸೀಕರಣಗೊಳಿಸುವತ್ತ ನಿರ್ದೇಶಿಸುವುದಕ್ಕಾಗಿ ನೀಡಿರಲೇಬೇಕು. ವಿಫಲಗೊಳ್ಳುತ್ತಿದ್ದ ತೋರಿಕೆಯನ್ನು ಬಿಟ್ಟುಕೊಡುವುದಕ್ಕಾಗಿ ಅವರು ಹೆಚ್ಚು ಹೆಚ್ಚಾಗಿ ಮೊದಲನೆಯ(ಸೂಕ್ಷ್ಮಭೌತಿಕ)ದರಲ್ಲಿ ನೆಲೆಸಿದ್ದರು ಮತ್ತು ಎರಡನೆಯ(ಸ್ಥೂಲ ಭೌತಿಕ)ದರಲ್ಲಿ ಶ್ರೀಮಂತಗೊಂಡ ಸಾರವನ್ನು ಅದರಲ್ಲಿ

ಎಳೆದು ತರುತ್ತಿದ್ದರು. ಮೊದಲನೆಯದರ ದ್ರವ್ಯವನ್ನು ಎರಡನೆಯದರಲ್ಲಿ ಎಳೆದು ತರುವುದರಲ್ಲಿ ಯಶಸ್ವಿಯಾಗುವತ್ತ ತಮ್ಮನ್ನು ತೊಡಗಿಸಿಕೊಂಡಿದ್ದರು.

... ಮಾರ್ಚ 1972 ರಲ್ಲಿ ಸೂಕ್ಷ್ಮ ಭೌತಿಕದಲ್ಲಿ ಕಾದುಕೊಂಡಿದ್ದ ಹಾಗೂ ಸ್ಥೂಲ ಭೌತಿಕದ ಮೇಲೆ ಒತ್ತಡ ತರುತ್ತಿದ್ದ ಅತಿಮಾನಸ ದೇಹ ಮೂರ್ತರೂಪ ತಾಳಿತು, ಅದರಲ್ಲಿ ಶ್ರೀಮಾತೆಯವರು ಕೆಲಕಾಲ ಜೀವಿಸಿದ್ದರು ಮತ್ತು ನಾವು ಸ್ಥೂಲವಾಗಿ ಈಗಾಗಲೆ ವಿವರಿಸಿದ ಅನುಭವಗಳಿದ್ದವು. ಹಾಗಾಗಿ ಪರ್ಯಾಯ ತೀರ್ಮಾನ ತೆರೆದುಕೊಳ್ಳಲಾಗಿತ್ತು. ಮತ್ತು ನಮ್ಮ ಪ್ರಕಾರ ಈ ತೀರ್ಮಾನವನ್ನೇ ಆಯ್ದುಕೊಳ್ಳಲಾಯಿತು, ಅದು ಅವರು ದೇಹತ್ಯಾಗ ಮಾಡಿದುದರ ಪ್ರಾಮುಖ್ಯತೆಯಾಗಿದೆ.

... ಈಗ ಶ್ರೀಮಾತೆಯವರು ಸೂಕ್ಷ್ಮ ಭೌತಿಕ ಹಾಗೂ ಸ್ಥೂಲ ಭೌತಿಕ ಇವುಗಳ ನಡುವಿರುವ ಅಂಚಿನ ಮೇಲೆ ನಿಂತಿದ್ದಾರೆ, ಇವುಗಳ ನಡುವೆ ಇದ್ದ ತಡೆಗಟ್ಟನ್ನು ಮುರಿದು ಹಾಕಿದ್ದಾರೆ. – ಮೊದಲನೆಯದನ್ನು ನಮಗೆ ಎಷ್ಟು ಹತ್ತಿರ ತಂದಿದ್ದಾರೆ ಎಂದರೆ ನಮ್ಮ ಜೀವನದ ಮೇಲೆ ಅವರ ಕ್ರಿಯಾಶೀಲ ಪ್ರಭಾವ ಹಾಗೂ ಒತ್ತುವಳಿಗಾಗಿ ಇನ್ನು ಮುಂದೆ ಸ್ಥೂಲ ಭೌತಿಕದ ಆವಶ್ಯಕತೆ ಉಳಿದುಕೊಂಡಿಲ್ಲ. ಮೂರ್ತರೂಪದಲ್ಲಿ ನಮ್ಮ ಗುರುವಾಗಲು ಮತ್ತು ಉತ್ಕ್ರಾಂತಿಪರ ಪರಾಕಾಷ್ಠೆಗೆ ನೇರ ಮಾರ್ಗದರ್ಶಕರಾಗಲು ಅವರ ಸಾಮೀಪ್ಯ ಮತ್ತು ಪರಿಣಾಮಕಾರಿತ್ವ ಇರುವವಷ್ಟೇ ಅಲ್ಲ, ನಮ್ಮ ದೃಷ್ಟಿಗೆ ಹಾಗೂ ಸ್ಪರ್ಶಕ್ಕೆ ಬರುವಂತೆ ಭೌತಿಕ ರೂಪ ಧರಿಸಲು ಅವರು ತಮ್ಮೆಲ್ಲ ಚೈತನ್ಯದೊಂದಿಗೆ ಕಾದುಕೊಂಡಿದ್ದಾರೆ. ಆಂತರಿಕವಾಗಿ ಹಾಗೂ ಬಾಹ್ಯದಲ್ಲಿ ಆ ಸಂಕ್ರಮಣಕಾರಕ ತುದಿಯ ಮೇಲೆ ಅವರು ಹೇಗಿದ್ದಾರೆ ಎಂಬುದನ್ನು ಕುರಿತು ವಿಚಾರವೊಂದನ್ನು ನಾವು ತಿಳಿದುಕೊಳ್ಳಲು ಬಯಸಿದರೆ, ಶ್ರೀಮಾತೆಯವರ ಸಮಾಧಿ ದಿನದಂದು ಲಲಿತಾ ದಾಖಲಿಸಿದ್ದನ್ನು ನಾವು ನೆನಪಿಗೆ ತಂದುಕೊಳ್ಳಬಹುದು. “ಆಗ ನೀವು ನಿಧಾನಗತಿಯಲ್ಲಿ, ಪರದೆಯ ಹಿಂದೆ ಕಾಣಿಸುವ ರೀತಿಯಲ್ಲಿ ನಿಮ್ಮನ್ನು ತೋರಿಸಿಕೊಂಡಿರಿ. ನೀವು ತಿಳಿ ಬಂಗಾರ ವರ್ಣದ ನಿಲುವಂಗಿಯನ್ನು ಧರಿಸಿದ್ದಿರಿ. ಆ ಪ್ರಕಾಶ ಶಿರದ ಸುತ್ತ ಅತ್ಯಂತ ಬಲವತ್ತರವಾಗಿತ್ತು, ಅದರ ಸುತ್ತ ವರ್ಣನಾತೀತ ಪ್ರಭಾವಳಿಯಿತ್ತು, ಅದು ಎದೆಯವರೆಗೆ ಗಾಢವಾಗಿ ಚಾಚಿಕೊಂಡಿತ್ತು, ಇನ್ನೂ ಕೆಳಗೆ ಸ್ವಲ್ಪ ಕಡಿಮೆ ಉಜ್ವಲವಾಗಿತ್ತು. ನಿಮ್ಮ ದೇಹದಿಂದ ಅದು ಜಗತ್ತಿನಾದ್ಯಂತ ಹರಡಿಕೊಂಡಿತ್ತು.”

**(The Mother Past, Present, Future: Amal Kiran, pp. 27–30)**

*



**ನವ್ಹೆಂಬರ 17, 1973**

ಶ್ರೀ ಮಾತೆಯವರ ದೇಹ ಹಳೆಯ ಸೃಷ್ಟಿಗೆ ಸೇರಿದ್ದಾಗಿತ್ತು. ಅದು ಹೊಸ ದೇಹಕ್ಕೆ ತಳಪಾಯವಾಗಿತ್ತು. ಅದು ತನ್ನ ಉದ್ದೇಶವನ್ನು ಸರಿಯಾಗಿ ನೆರವೇರಿಸಿ ಕೊಟ್ಟಿದೆ. ಹೊಸ ದೇಹ ಬರಲಿದೆ. ನಾವು ಅವರ ಪ್ರಜ್ಞೆಗೆ ಎಷ್ಟರ ಮಟ್ಟಿಗೆ ನಂಬಿಕಸ್ಥರಾಗಿದ್ದೇವೆ, ನೈಜವಾಗಿದ್ದೇವೆ ಎಂಬುದಕ್ಕೆ ಇದೊಂದು ಪರೀಕ್ಷೆ.

ದೇಹವನ್ನು ಪುನರುಜ್ಜೀವನಗೊಳಿಸುವುದು ಹಳೆಯ ತೊಂದರೆಗಳನ್ನೆಲ್ಲ ಪುನರುಜ್ಜೀವನಗೊಳಿಸಿದಂತಾಗುತ್ತಿತ್ತು. ದೇಹದಲ್ಲಿದ್ದಾಗ ಅದರ ತೊಂದರೆಗಳಲ್ಲಿ ಸಾಧ್ಯವಾಗಬಹುದಾದಷ್ಟನ್ನು ನಿವಾರಿಸಲಾಗಿತ್ತು. – ಮುಂದಿನದನ್ನು ನಿವಾರಿಸಲು ಸಾಧ್ಯವಾಗಿರಲಿಲ್ಲ. ಹೊಸ ರೂಪಾಂತರಕ್ಕಾಗಿ ಹೊಸ ವಿಧಾನದ ಆವಶ್ಯಕತೆ ಇತ್ತು. ಆ ವಿಧಾನದಲ್ಲಿ ‘ಮೃತ್ಯು’ ಮೊದಲನೆಯ ಹಂತದ್ದಾಗಿತ್ತು.

**(2)**

ಮಧುರ ಮಾತೆಯವರೆ,

ನಿಮ್ಮ ಭೌತಿಕ ದೇಹ ಹಳೆಯ ಸೃಷ್ಟಿಗೆ ಸೇರಿದ್ದಾಗಿತ್ತು, ಏಕೆಂದರೆ ನೀವು ನಿಮ್ಮ ಮಕ್ಕಳೊಂದಿಗೆ ಏಕವಾಗಿರಲು ಬಯಸಿದ್ದಿರಿ. ನೀವು ನಿರ್ಮಾಣ ಮಾಡುತ್ತಿರುವ ನಿಮ್ಮ ಹೊಸ ದೇಹವನ್ನು ಈ ದೇಹ ಎತ್ತಿ ಹಿಡಿಯಲಿ ಎಂದು ನೀವು ಬಯಸಿದ್ದಿರಿ, ಮತ್ತು ಅದು ನಿಮಗೆ ಅವಶ್ಯವಾಗಿದ್ದ ಹಾಗೂ ನೀವು ಅದರಿಂದ ಕೇಳಿದ್ದ ಸೇವೆಯನ್ನು ಸಲ್ಲಿಸಿತ್ತು. ನೀವು ನಿಮ್ಮ ಹೊಸ ದೇಹದೊಂದಿಗೆ ಬರುವಿರಿ.

ನಿಮ್ಮ ಮಕ್ಕಳ ಹಾಗೂ ಜಗತ್ತಿನ ಕರೆ ಹಾಗೂ ಅಭೀಪ್ಸೆಯನ್ನು, ಪ್ರೇಮವನ್ನು ಮುಡಿಪಾಗಿರಿಸಿಕೊಳ್ಳುವಿಕೆಯನ್ನು ಕೃತಜ್ಞತೆಯಿಂದ ನಿಮ್ಮ ಪಾದಗಳಡಿ ಇರಿಸಲಾಗಿದೆ.

**(Collected Works of Nolini Kant Gupta (NKG): Vol. 5, p. 87)**

*

ನಮಗೆ ಕೊಡಲಾದದ್ದು ಪವಾಡವೊಂದಕ್ಕಿಂತ ಕಡಿಮೆಯಾದದ್ದಲ್ಲ. ಶ್ರೀಮಾತೆಯವರು ಆಂತರಿಕ ಜಗತ್ತಿನಲ್ಲಿ, ಸೂಕ್ಷ್ಮ ಭೌತಿಕದಲ್ಲಿ ಅವರ ಹೊಸ ದೇಹ ಕುರಿತು ನಮ್ಮನ್ನು ತಯಾರು ಮಾಡಿದ್ದಾರೆ. ಅದು ಭೌತಿಕ ದೇಹದಷ್ಟೇ ಜೀವಂತವಾಗಿರುವಂತಹದು, ವಾಸ್ತವವಾದದ್ದು ಆಗಿದೆ, ಮೂರ್ತರೂಪದ್ದು ಆಗಿರಲಿಕ್ಕಿಲ್ಲ. ಅವರು ಬರೆದ ಕೊನೆಯ ಟಿಪ್ಪಣಿಗಳೊಂದರಲ್ಲಿ ಪರಿವರ್ತನೆಗೊಳಪಟ್ಟ ಈ ದೇಹವನ್ನು ವರ್ಣಿಸಿದ್ದಾರೆ, ಅದು ಅವರ ದರ್ಶನದಲ್ಲಿ ಕಂಡುಬಂದ ಹಾಗಿತ್ತು.

ಅವರು ದೀರ್ಘಕಾಲದ ತಮ್ಮ ಕಷ್ಟಸಾಧ್ಯ ಶ್ರಮದ ಮೂಲಕ, ಸಂಪೂರ್ಣ ರೂಪದಲ್ಲಿ ನಿರ್ಮಾಣ ಮಾಡಿದ ದೇಹವನ್ನು ನಮ್ಮೊಂದಿಗೆ ಹಾಗೂ ಮನುಕುಲದೊಂದಿಗೆ ಇರಲು ಬಿಟ್ಟುಕೊಟ್ಟಿದ್ದಾರೆ.

ಭೌತಿಕ ಪರದೆಯ ಹಿಂದೆ ತಯಾರು ಮಾಡಲಾದ ಅವರ ಹೊಸ ದೇಹವನ್ನು ಭೌತಿಕ ರೂಪದಲ್ಲಿ ಒಳಸೇರಿಸುವುದನ್ನು ಅವರು ಅರಸಿದ್ದರು, ಹೊಸ ಅಂಶವನ್ನು ಒತ್ತಾಯಪೂರ್ವಕ ಸೇರಿಸಲು ಬಯಸಿದ್ದರು, ಆದರೆ ಭೌತದ್ರವ್ಯ ಮತ್ತು ಮಾನವನ ಭೌತಿಕ ಸ್ವಭಾವ ಅದಕ್ಕಾಗಿ ಇನ್ನೂ ತಯಾರಾಗಿರಲಿಲ್ಲ: ಪೃಥ್ವಿ ಅದನ್ನು ಬಲವಂತದ ಒಳನುಗ್ಗುವಿಕೆ, ವಿದೇಶೀಯವಾದ ಏನೋ ಒಂದು ಎಂದು ಭಾವಿಸಿತ್ತು. ಪರಿಣಾಮವಾಗಿ ಭೌತಿಕ ಆಚ್ಛಾದನ ಮುರಿದು ಬಿದ್ದಿತು – ಬಹುಶಃ ಅದಕ್ಕೂ ಹೆಚ್ಚಾಗಿ ಅದನ್ನು ಭೇದಿಸಿ ಹೊರನುಗ್ಗಿತು, ಆದರೆ ಅದು ಇನ್ನೊಂದು ಕತೆಯಾಗಿರಬೇಕು.

ಆದರೆ ಅದು ಜೀವಿಸುತ್ತ ಅಲ್ಲಿದೆ, ಅದರ ಸೌಂದರ್ಯದಲ್ಲಿ ಹಾಗೂ ಸಾಮರ್ಥ್ಯದಲ್ಲಿ ವೈಭವೋಪೇತವಾಗಿದೆ, ಅದಿನ್ನೂ ನಮ್ಮೊಳಗೆ ಕಾರ್ಯ ಮಾಡುತ್ತಿದೆ ಮತ್ತು ನಮ್ಮ ಸುತ್ತ ಜಗತ್ತಿನಲ್ಲಿದೆ, ಬಿಟ್ಟೂಬಿಡದೆ ಅದರ ಭೌತಿಕ ದೇಹಧಾರಣೆಯ ಪರಾಕಾಷ್ಠೆಯತ್ತ ಸಾಗುತ್ತಿದೆ. ನಮ್ಮಿಂದ ಅಪೇಕ್ಷಿಸಿದುದು ಏನೆಂದರೆ ಈ ಸುವರ್ಣ ವರ್ಣದ ಶ್ರೀಮಾತೆಯವರನ್ನು ನಮ್ಮಂತರಂಗದಲ್ಲಿ ನೋಡುವುದಾಗಿದೆ ಮತ್ತು ಅವರು ಯಾವಾಗಲೂ ಬಯಸುತ್ತಿದ್ದ ಹಾಗೆ ಒಳಗೆ, ಹೊರಗೆ ಅವರ ಸುವರ್ಣ ವರ್ಣದ ಮಕ್ಕಳಾಗುವುದಾಗಿದೆ.

**ಶ್ರೀಮಾತೆಯವರು ಹೇಳುತ್ತಾರೆ**

ಕೇವಲ ನನ್ನತ್ತ ನೋಡಿರಿ, ನಾನು ಇಲ್ಲಿ ಮರಳಿ ನನ್ನ ಹೊಸ ದೇಹದಲ್ಲಿ ಬಂದಿದ್ದೇನೆ, ದೈವಿಕವಾಗಿದ್ದೇನೆ, ವೈಭವೋಪೇತಳಾಗಿದ್ದೇನೆ. ನಾನು ಅದೇ ಹಿಂದಿನ ಶ್ರೀಮಾತೆ. ಇನ್ನೂ ಮಾನವ ಸ್ವರೂಪದಲ್ಲಿರುವೆ. ಚಿಂತೆ ಮಾಡುವುದು ಬೇಡ. ನಿಮ್ಮ ಬಗೆಗಾಗಲಿ, ನಿಮ್ಮ ಪ್ರಗತಿ ಹಾಗೂ ಸಿದ್ಧಿಗಳನ್ನು ಕುರಿತಾಗಲಿ ಕಾಳಜಿ ಮಾಡುವುದು ಬೇಡ, ಇತರರ ಬಗೆಗೂ ಕಾಳಜಿ ಮಾಡುವುದು ಬೇಡ. ನಾನಿಲ್ಲಿದ್ದೇನೆ, ನನ್ನತ್ತ ನೋಡಿರಿ, ನನ್ನಲ್ಲಿ ನೆಟ್ಟ ದೃಷ್ಟಿಯನ್ನಿಟ್ಟು ನೋಡಿರಿ, ನನ್ನಲ್ಲಿ ಇಡಿಯಾಗಿ ಪ್ರವೇಶಿಸಿರಿ, ನನ್ನ ಸತ್ತೆಯಲ್ಲಿ ಮುಳುಗು ಹಾಕಿರಿ, ನನ್ನ ಪ್ರೇಮದಲ್ಲಿ ನಿಮ್ಮ ಪ್ರೇಮದೊಂದಿಗೆ ನಿಮ್ಮನ್ನು ಕಳೆದುಕೊಳ್ಳಿರಿ. ಎಲ್ಲ ಸಮಸ್ಯೆಗಳು ಪರಿಹಾರವಾಗುವುದನ್ನು ನೀವು



ನೋಡುವಿರಿ, ಎಲ್ಲವನ್ನೂ ಕೈಕೊಳ್ಳಲಾಗುವುದು. ಉಳಿದದ್ದೆಲ್ಲವನ್ನು ಮರೆತು ಬಿಡಿರಿ. ಜಗತ್ತನ್ನು ಮರೆತು ಬಿಡಿರಿ. ಕೇವಲ ನನ್ನನ್ನು ನೆನಪಿಸಿಕೊಳ್ಳಿರಿ, ನನ್ನೊಂದಿಗೆ ನನ್ನ ಪ್ರೇಮದೊಂದಿಗೆ ಏಕವಾಗಿರಿ.

**(NKG: Vol. 6: 259)**

*

ಜೀವಕೋಶಗಳು ಎಲ್ಲ ಕಾಲದಲ್ಲಿ ಈ ರೀತಿ ಇವೆ, ಭಗವಂತನಿಗಾಗಿ ಇರುವ ಪ್ರೇಮದ ಸ್ಥಿತಿಯಲ್ಲಿವೆ. ಭೌತಿಕದಲ್ಲಿ ಅತ್ಯಂತ ಗಮನಾರ್ಹವಾದ ವಿಷಯವೆಂದರೆ ಒಂದೇನನ್ನೋ ಕಲಿತುಕೊಂಡಾಗ ಅದನ್ನೆಂದಿಗೂ ಮರೆಯಲಾಗುವುದಿಲ್ಲ. ಈ ಸ್ವ–ತ್ಯಾಗ, ಭಗವಂತನಿಗೆ ಈ ಸಮರ್ಪಣೆ, ಸ್ವ–ಅರ್ಪಣೆಯ ಈ ಆವಶ್ಯಕತೆ ಇವೆಲ್ಲವುಗಳನ್ನು ಜೀವಕೋಶಗಳು ಕಲಿತುಕೊಂಡಾಗ ಅವು ಎಲ್ಲ ಕಾಲಕ್ಕೂ ಕಲಿತುಕೊಂಡಿರುತ್ತವೆ, ಅದು ಇನ್ನು ಮುಂದೆ ಅಲುಗಾಡುವುದಿಲ್ಲ. ಅದು ಇಪ್ಪತ್ತುನಾಲ್ಕು ತಾಸುಗಳಲ್ಲಿ ಇಪ್ಪತ್ತುನಾಲ್ಕು ತಾಸುಗಳ ಕಾಲ, ಯಾವುದೇ ತಡೆಯಿಲ್ಲದೆ, ದಿನದ ನಂತರ ದಿನದಲ್ಲಿ ಸತತ ಇರುತ್ತದೆ ಮತ್ತು ಅಲ್ಲಿ ಯಾವ ಬದಲಾವಣೆಯೂ ಇರುವುದಿಲ್ಲ. ಸರಿಯಾಗಿರದ ಏನೋ ಒಂದು (ನೋವು ಇಲ್ಲವೆ ಬೇರೆ ಏನೋ ಒಂದು) ಇದ್ದಾಗಲೂ ಕೂಡ ಮೊದಲ ಚಲನೆ, ಹೌದು, ಸ್ವಯಂಪ್ರೇರಿತವಾಗಿ ತನ್ನನ್ನು ಕೊಟ್ಟುಕೊಳ್ಳುವುದಾಗಿರುತ್ತದೆ. ಉಚ್ಚತರ ಪ್ರಜ್ಞೆ ಮಧ್ಯೆ ಪ್ರವೇಶಿಸುವುದಿಲ್ಲ. ಅದು ಸ್ವಯಂಪ್ರೇರಿತವಾದದ್ದು, ಅದು ಜೀವಕೋಶಗಳಲ್ಲಿ ಒಳಗೊಂಡ ಪ್ರಜ್ಞೆ.

**(CWM, 11/189–90)** **– ಶ್ರೀಮಾತೆ**

*

| ಒಪ್ಪೋಲೆ : ಅಖಿಲ ಭಾರತ ಪತ್ರಿಕೆ, ಸಪ್ಟಂಬರ, 2015 | | |
|---|---|---|
| **ಪುಟ ಮತ್ತು ಸಾಲು** | **ತಪ್ಪು** | **ಒಪ್ಪು** |
| 38, ಸಾಲು 11 | ಯನ್ನ | ಯನ್ನಃ |



*Faith is the soul's witness*
*to something not yet manifested,*
*achieved or realised...*

- Sri Aurobindo

**RNI No. 22511/1971**
No. of Pages **56 + 4 (Cov. Page)**
KAR Reg No : RNP/KA/BGS/368/2015-2017
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.